# ಅಖಿಲ ಭಾರತ ಪತ್ರಿಕೆ

## ಜುಲೈ 2023



# ಎಂದಿಗೂ ಹತಾಶನಾಗದಿರು....

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಪರಿಶ್ರಮಿಸುತಿಹರು ಶಾಶ್ವತದ ಧ್ಯೇಯದಭಿಲಾಷೆಯಂತೆ ಸಲಲು
ಮೃಣ್ಮಯದ ರೂಹುಗಳಿಗೀಗ ದಿವ್ಯ–ಚಿನ್ಮಯದ ಜೀವ ಕೊಡಲು.

**– ಪುಟ್ಟು ಕುಲಕರ್ಣಿ**

**(ಪುಟ 69)**

**ಅಖಿಲ ಭಾರತ ಪತ್ರಿಕೆ**
**ಜುಲೈ 2023**

ಸಂಪುಟ: 33 ಸಂಚಿಕೆ: 07

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಎಂದಿಗೂ ಹತಾಶನಾಗದಿರು....

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀ ಅರವಿಂದರ ಅಭಿವ್ಯಕ್ತಿಗಳು** 5
ಅನು: ಪುಟ್ಟು ಕುಲಕರ್ಣಿ
ಅನು: ನಾಗಜ್ಯೋತಿ ಮಾನ್ವಿ
ಅನು: ಡಾ॥ ಮಹಾದೇವ ಸಕ್ರಿ

**ಶ್ರೀಮಾತೆಯವರ ಅಭಿವ್ಯಕ್ತಿಗಳು** 22
ಅನು: ಡಾ॥ ಮಹಾದೇವ ಸಕ್ರಿ
ಅನು: ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 43
ಅನು: ಜಾನ್ವಿ

**ಶ್ರೀ ಅರವಿಂದರ 'ದೇವನಾ ಪರಿಶ್ರಮ'** 62
ಅನು: ಪುಟ್ಟು ಕುಲಕರ್ಣಿ

**ಎಂದಿಗೂ ಹತಾಶನಾಗದಿರು....** 69
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಕರ್ಮಯೋಗಿನ್' ಪತ್ರಿಕೆ**
**– ದೇವಿ ಸ್ತೋತ್ರಗಳು** 71
ಅನು: ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 76

## ಸಂಪಾದಕರ ಟಿಪ್ಪಣಿ

ಜೀವನದಲ್ಲಿ ಕೆಲವು ಸಲವಾದರೂ ಸರ್ವಸ್ವವನ್ನೂ ಕಳೆದುಕೊಂಡಂತೆ ಪರಿಭಾವಿಸಿಕೊಂಡು ಮತ್ತು ಸಂಪೂರ್ಣ ಹತಾಶೆಯೇ ಆವರಿಸಿಕೊಂಡ ಭಾವನೆಯಲ್ಲಿ ಸಿಲುಕಿಕೊಂಡಂತೆ ಜೊತೆಗೆ ಪ್ರಪಾತದ ತಳಕ್ಕೆ ಎಳೆದೊಯ್ಯಲ್ಪಟ್ಟಂತೆ ಅನುಭವದಲ್ಲಿ ಸಿಲುಕಿಕೊಳ್ಳುತ್ತಾನೆ.

ಇಂತಹ ವಿಷಣ್ಣ ಪರಿಸ್ಥಿತಿಯಿಂದ ಹೊರಬರುವದರ ಸಲುವಾಗಿ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ತಮ್ಮ ಪ್ರೇಮಪೂರಿತ ಕಾಂತಿ ಕಿರಣಗಳ ಮತ್ತು ಸ್ಫೂರ್ತಿದಾಯಕವಾದ ಅಭಿವ್ಯಕ್ತಿಗಳಿಂದ ಮಾರ್ಗದರ್ಶನ ಮಾಡುತ್ತಿದ್ದಾರೆ. ತಮ್ಮ ವಚನಗಳ ಮೂಲಕ ಸ್ಥೈರ್ಯವನ್ನು ಹಾಗು ಭರವಸೆಯನ್ನು ಒದಗಿಸುತ್ತಿದ್ದಾರೆ, ಸೂಕ್ತ ನಿರ್ದೇಶನವನ್ನೂ ಒದಗಿಸುತ್ತಿದ್ದಾರೆ. ನಮ್ಮೆದುರು ಅವರು ಇರಿಸಿರುವ ಇಂತಹ ಪ್ರಕಾಶಮಾನವಾದ ಜ್ಯೋತಿಯ ಕಿರಣಗಳ ಪಥದಲ್ಲಿ ಪ್ರಗತಿಗೊಳ್ಳುತ್ತ ಸಾಮರ್ಥ್ಯಶೀಲರಾಗಿ ಸಾಗಲು ಮತ್ತು ಈ ಮೂಲಕ ನಮ್ಮದೇ ಔನ್ನತ್ಯದ ಪ್ರಾಪ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ಇರುವ ಪಥದ ವಿಷಯಗಳ ಕುರಿತು ಈ ಸಂಚಿಕೆಯು ರೂಪಿತಗೊಂಡಿದೆ. (ಎಐಎಮ್)

## ಸಂಪಾದಕೀಯ

ನಿರಾಶೆ ಮತ್ತು ಹತಾಶೆ ಇವು ಮಾನವನು ತಾನೇ ತಾನಾಗಿ ರೂಪಿಸಿ–ಕೊಂಡಿರುವ ಮನೋಜಾಡ್ಯಗಳು. ಮಾನವ ಸಹಜ ಬಯಕೆ ಈಡೇರದಿದ್ದಾಗ ನಿರಾಶೆ ಆವರಿಸುತ್ತದೆ, ಅದೇ ನಿರಾಶೆ ಹತಾಶೆಯ ಹಂತ ಮುಟ್ಟುವದು ಅವನು ಬಯಕೆಗಳನ್ನು ಈಡೇರಿಸಿಕೊಳ್ಳಲು ಸತತವಾಗಿ ವಿಫಲನಾದಾಗ, ತನ್ನ ಆತ್ಮವಿಶ್ವಾಸವನ್ನೂ ಕಳೆದುಕೊಂಡ ಹಂತವಿದು.

ಪ್ರಕೃತಿಯ ವೈವಿಧ್ಯತೆಯಲ್ಲಿ ಪ್ರತಿಯೊಂದು ಜೀವಕ್ಕೂ/ಜೀವಿಗೂ ಅದರದೇ ಆದ ಅಸ್ಮಿತೆಯೂ ಇರುತ್ತದೆ. ಪ್ರಕೃತಿ ಧರ್ಮದ ಪ್ರಕಾರವಾಗಿಯೇ ರೂಪಿತಗೊಂಡ ಈ ಅಸ್ಮಿತೆಯ ಪೋಷಣೆಗೆ, ಇದೇ ಪ್ರಕೃತಿಯೇ ಸೂಕ್ತವಾದ ವಾತಾವರಣವನ್ನೂ ರೂಪಿಸಿದೆ. ಈ ರೀತಿಯ ವೈವಿಧ್ಯತೆಯ ರಹಸ್ಯವೇನು ಎನ್ನುವದನ್ನು ಮಾನವನ ಚಿಂತನೆಯು ಅರ್ಥೈಸಿಕೊಳ್ಳಲು ಸಫಲವಾಗಿಲ್ಲ. ಆದರೆ ತನ್ನ ಅಸ್ಮಿತೆಗೆ ಒಪ್ಪಿತವಿರದ ಸಂಗತಿಗಳನ್ನು ಪಡೆದುಕೊಳ್ಳಬೇಕೆಂಬ ಬಯಕೆಯನ್ನು ರೂಪಿಸಿಕೊಂಡ ಮಾನವನು


ಮೊದಲು ಪಕ್ಕಾಗಿದ್ದು ಆಕರ್ಷಣೆಗೆ. ಆಕರ್ಷಿತಗೊಂಡ ಮನಸ್ಸು ಅದನ್ನೂ ತನ್ನದೇ ಅಸ್ಮಿತೆಯನ್ನಾಗಿ ಮಾಡಿಕೊಳ್ಳಲು ಮುನ್ನುಗ್ಗಿದಾಗ, ಸಹಜವಾಗಿಯೇ ವಿಫಲನಾಗುತ್ತಾನೆ. ಈ ರೀತಿಯ ವೈಫಲ್ಯಕ್ಕೆ ಕಾರಣವನ್ನು ಅರಸುವದರ ಬದಲಾಗಿ ನಿರಾಶೆಯಲ್ಲಿ ಮುಳುಗುತ್ತಾನೆ.

ನಿರಾಶೆಯ ಅನುಭವವಾದರೂ ಸಹಿತ, ಮತ್ತೆ ಮತ್ತೆ ಅದನ್ನೇ ಪಡೆಯುವ ಆಶೆ ಹೆಚ್ಚುತ್ತ ಹೆಚ್ಚುತ್ತ, ತನ್ನ ಅಸ್ಮಿತೆಯನ್ನೂ ಮರೆಯುತ್ತ, ಹೊಸದನ್ನು ಪಡೆದುಕೊಳ್ಳಲು ಸಾಧ್ಯವೇ ಆಗದ ಈ ವಿಷಣ್ಣ ಸ್ಥಿತಿಯಲ್ಲಿ ನಿರಾಶೆಯು ಘನಗೊಳ್ಳುತ್ತ ಸಾಗಿ ಹತಾಶೆಯ ಹಂತ ತಲುಪುತ್ತದೆ. ಇಷ್ಟಾದರೂ, ಈ ಸ್ಥಿತಿಗೆ ತನ್ನದೇ ಅಸ್ಮಿತೆಯನ್ನು ಮರೆತು ವಿಚಲನೆಗೊಂಡ ತನ್ನ ತಪ್ಪು ಎನ್ನುವದನ್ನು ಮಾತ್ರ ಅರಿತುಕೊಳ್ಳಲು ಪ್ರಯತ್ನಿಸುವದಿಲ್ಲ.

ಆದರೆ ಯಾವಾಗ ಈ ರೀತಿಯ ಅನುಭವದಿಂದ ಮುಕ್ತಗೊಳ್ಳಲು ಪ್ರಯತ್ನ ಪ್ರಾರಂಭಿಸಲು ಆಶಿಸುತ್ತಾನೆಯೋ, ಅದೇ ಸಮಯಕ್ಕೆ – ಸದಾ ಅದನ್ನು ಒದಗಿಸಲು ಸಿದ್ಧವೇ ಇರುವ 'ಜ್ಞಾನದ ಪಥವು' ಗೋಚರಿಸುತ್ತದೆ. ಹತಾಶೆಯ ಹಂತದಲ್ಲಿ ಮುಳುಗಿ ಹೋಗದೇ, ಅಲ್ಲಯೇ ಗೋಚರಿಸುವ ಬೆಳಕಿನ ಆಶಾಕಿರಣಗಳನ್ನು ಒದಗಿಸುವ ಕೃಪೆಯ ಹಸ್ತ, ರಕ್ಷಣೆಯ ಬಾಹು ಮತ್ತು ಮೇಲೆತ್ತಿ ಪೋಷಿಸುವ ಹೃದಯವನ್ನು ನಿಯತಿ ಆಯಾ ಕಾಲಕ್ಕೆ ದೈವೀ ಮೂರ್ತಿಯ ಸ್ವರೂಪದ ಆತ್ಮಗಳ ಸ್ವರೂಪದಲ್ಲಿ ಅವತರಣಗೊಂಡು ಸಾಕಾರಗೊಂಡಿರುತ್ತದೆ.

ಇದಕ್ಕಾಗಿ ಆ ದೇವನೂ ಸಹಿತ ಪರಿಶ್ರಮ ಪಡುತ್ತಾನೆ. ತನ್ನದೇ ಮೂಲ ಸ್ವರೂಪವಾಗಿದ್ದ ಚೇತನವು ಕಾರಣಾಂತರದಿಂದಾಗಿ, ಅವತರಣಗೊಂಡು, ಭೂತಲಕ್ಕೆ ಇಳಿದು, ತಮದಲ್ಲಿ ಸಿಲುಕಿ, ಆಶೆಗಳ ಜಾಲಕ್ಕೆ ಬಳಲಿ ಮಾನವನು ಹತಾಶಗೊಳ್ಳುವದು ದೇವನಿಗೂ ಬೇಕಿಲ್ಲ. ತನ್ನದೆ ಅಂಶವಾಗಿರುವ ಈ ಮಾನವನು ಮತ್ತೆ ತನ್ನಲ್ಲಿಗೇ ಬರಬೇಕು ಎನ್ನುವದು ಅವನ ಇಚ್ಛೆಯೂ ಆಗಿದೆ. ಹೀಗಾಗಿ ಸದಾ ಸರ್ವದಾ ಇಂತಹ ಆರೋಹಣಕ್ಕೆ ಮಾರ್ಗದರ್ಶನದ ಸೂತ್ರಗಳನ್ನು ಒದಗಿಸುತ್ತಲೇ ಇರುತ್ತಾನೆ.

ಈಡೇರಲಾರದ ಆಶೆಗೆ, ಈ ರೀತಿಯ ನಿರಾಶೆಗೆ ಅದರ ತುರೀಯಾವಸ್ಥೆಯ ಹತಾಶೆಗೆ ಮೂಲ ಕಾರಣ, ನಮ್ಮ ಅಸ್ಮಿತೆಯ ಬಗೆಗೆ ನಮಗೇ ಇರುವ ಅಜ್ಞಾನವೆಂದರೆ ತಪ್ಪಾಗಲಾರದು. ಈ ಸೂತ್ರವನ್ನು ಮೊದಲು ನಾವು ಅರಿತುಕೊಳ್ಳಬೇಕಾಗಿದೆ. (ಪಿಪಿಕೆ)



ನೀನು ಏಕಾಕಿಯಾಗಿಲ್ಲ ಎನ್ನುವದನ್ನು ಎಂದಿಗೂ ಮರೆಯಬೇಡ. ಆ ದಿವ್ಯತ್ವವು ನಿನ್ನೊಂದಿಗೇ ಇದ್ದು, ನಿನಗೆ ಮಾರ್ಗದರ್ಶಿಯಾಗಿ ಮತ್ತು ಸಹಾಯವನ್ನು ಒದಗಿಸುತ್ತಿದೆ. ತತ್–ದಿವ್ಯವು ನಿನ್ನ ಸಂಗಾತಿಯಾಗಿದ್ದು ಎಂದಿಗೂ ವಿಫಲತೆಯನ್ನು ತರುವದಿಲ್ಲ. ತತ್–ಭಾವವೇ ನಿನ್ನ ಮಿತ್ರನೂ ಆಗಿದ್ದು ಜೊತೆಜೊತೆಗೆ ಸುಖಪ್ರದವಾದ ಪ್ರೇಮವನ್ನೂ ಒದಗಿಸುತ್ತಿದೆ; ಸಾಮರ್ಥ್ಯವನ್ನೂ ಒದಗಿಸುತ್ತದೆ. ನೀನು ಎಷ್ಟು ಆಳವಾಗಿ ನಿನ್ನನ್ನು ಏಕಾಂತಗೊಳಿಸಿಕೊಳ್ಳುತ್ತಿಯೋ, ಆ ಪರಮನ ಪ್ರಕಾಶಮಾನವಾದ ಸುಬೋಧಗಮ್ಯವಾದ ಸಾಮೀಪ್ಯವನ್ನು ಪರಿಗ್ರಹಿಸಿಕೊಳ್ಳಲು ಮತ್ತೂ ಸಾಮರ್ಥ್ಯವನ್ನು ಪಡೆದುಕೊಳ್ಳುವೆ. ಆ ಪರಮನು ನಿನ್ನ ಸಲುವಾಗಿ ಪ್ರತಿಯೊಂದನ್ನೂ ಅನುಷ್ಠಾನಿಸುತ್ತಾನೆ, ಅದಕ್ಕಾಗಿ ವಿಶ್ವಾಸವಿರಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/9** **– ಶ್ರೀಮಾತೆ**

# ಶ್ರೀ ಅರವಿಂದರ ಅಭಿವ್ಯಕ್ತಿಗಳು

**– ಅನು: ಪುಟ್ಟು ಕುಲಕರ್ಣಿ**

## ಈ ದೇವಾಲಯದಲ್ಲಿ ಸರ್ವಸ್ವವೂ ಪ್ರವೇಶ ಪಡೆಯುತ್ತದೆ

ಒಂದು ಸಾರೆ, ಈ ಸ್ವಯಂ–ಸಮರ್ಪಣೆಯು ಪೂರ್ಣವಾಗಿ ಅನುಷ್ಠಾನಿ–ಸಲ್ಪಟ್ಟಲ್ಲಿ ಅದೂ ಪೂರ್ತಿ ಆತ್ಮವಿಶ್ವಾಸದಿಂದ ಮತ್ತು ಪ್ರಾಮಾಣಿಕತೆಯಿಂದ ಜೊತೆಗೆ ಮೂಲಭೂತವಾಗಿಯೇ ಪರಿಪೂರ್ಣತೆಯನ್ನು ಅನುಭಾವಿಸಲು ಸಾಧ್ಯವಾದಲ್ಲಿ, ಆಗ ನಮ್ಮೆಲ್ಲರಲ್ಲೂ ಅಸ್ತಿತ್ವದಲ್ಲಿ ಇರುವ ಆ **ಸಮತೆಯ ದೈವೀ ಅಸ್ತಿತ್ವವು** ಬೇರೆ ಯಾವುದೇ ಮೂಲಸ್ವರೂಪದ ನಿಯಮವನ್ನು ರೂಪಿಸುವದಿಲ್ಲ, ಈ ಪ್ರವೇಶ ದ್ವಾರದ ಮೂಲಕವೇ ಎಲ್ಲವೂ ಎಲ್ಲರಿಗೂ ಲಭ್ಯಗೊಳ್ಳುತ್ತದೆ, ಇದರಿಂದಲೇ ಎಲ್ಲರೂ ಈ ದೇವಾಲಯಕ್ಕೆ ಪ್ರವೇಶ ಪಡೆದಿರುತ್ತಾರೆ; ಈ ಸರ್ವಸ್ವವನ್ನೂ ಪ್ರೇಮಿಸುತ್ತಿರುವ ವಿಶ್ವ–ಪ್ರೇಮಿಯ ಈ ಭವ್ಯ ಭವನದಲ್ಲಿ ನಮ್ಮ ಲೌಕಿಕದ ಭೇದಗಳು ಕಣ್ಮರೆಯಾಗುತ್ತವೆ. ಇಲ್ಲಿ ಕೇವಲ ಸದ್ಗುಣಿಗೆ ಮಾತ್ರವೇ ಪ್ರಾಮುಖ್ಯತೆ ಇರುವದಿಲ್ಲ, ಅಲ್ಲದೇ ಪಾಪಿಯಾದವನನ್ನು ಇಲ್ಲಿಂದ ಹೊರ ತಳ್ಳುವ ಕ್ರಿಯೆಯೂ ಇಲ್ಲಿ ಇಲ್ಲ. ಈ ಪಥದಲ್ಲಿ ಪರಿಶುದ್ಧ ಜೀವನದ ಹಾಗೂ ನಿಯಮಗಳನ್ನು ಸೂಕ್ತವಾಗಿ ಪರಿಪಾಲಿಸುವ ಬ್ರಾಹ್ಮಣರಿಂದ ಜೊತೆಗೆ ಜನ್ಮದತ್ತವಾಗಿಯೇ ಪಾಪ, ದುಃಖ ಮತ್ತು ತಿರಸ್ಕೃತ ಹಂತದ ಗರ್ಭದಲ್ಲಿ ಜನಿಸಿದ ವ್ಯಕ್ತಿಯೂ ಸಹಿತ ಸಮಾನವಾಗಿಯೇ ಇಲ್ಲಿ ಪಯಣದಲ್ಲಿರುತ್ತಾರೆ, ಎಲ್ಲವೂ/ ಎಲ್ಲರೂ ಒಟ್ಟಾಗಿಯೇ ಸಾಗುತ್ತಿದ್ದಾರೆ. ಅನಂತಾನಂತದಲ್ಲಿರುವ ಪರಮ ಮುಕ್ತಿಧಾಮದ ಮತ್ತು ಅ ಉಚ್ಚತಮವಾಗಿರುವ ನಿವಾಸದ ಎಡೆಗೆ ಎಲ್ಲರೂ ಒಟ್ಟಾಗಿಯೇ ಸಾಗಬೇಕಾಗಿದೆ. ಆ ಪರಮಾತ್ಮನ ಎದುರು ಪುರುಷ ಮತ್ತು ಸ್ತ್ರೀಯರು ಸಮತೆಯನ್ನು ಪಡೆದುಕೊಳ್ಳುತ್ತಾರೆ. ಅದೂ ಅಲ್ಲದೇ ಪಾಪಿಯ ಹಾಗೂ ದುಃಖದಿಂದ ತುಂಬಿರುವ ಹಂತದೊಳಗೆ ಜನಿಸಿದ್ದರೂ, ಅವರೆಲ್ಲರೂ ಸಮಾನವಾದ ಅಧಿಕಾರವನ್ನು ಹೊಂದಿಯೇ ಪಯಣಿಸಿ ಅಂತಿಮದಲ್ಲಿ ಆ ಪರಮ ಮುಕ್ತಿಯ ತಾಣವನ್ನು ಕಂಡುಕೊಳ್ಳುತ್ತಾರೆ; ಊರ್ಧ್ವದಲ್ಲಿರುವ ಆ ಶಾಶ್ವತದಲ್ಲಿ ಲೀನಗೊಳ್ಳುತ್ತಾರೆ. ಈ ದೈವೀ ಆತ್ಮಕ್ಕೆ, ತನ್ನಲ್ಲಿಗೆ ಆಗಮಿಸುವ ಯಾವುದೇ ವ್ಯಕ್ತಿಗಳ ಬಗೆಗಾಗಲೀ ಅಥವಾ ಅವರ ಸಾಮಾಜಿಕ ಸ್ಥಾನಮಾನಗಳಾಗಲಿ ಯಾವುದೂ ಮುಖ್ಯವಲ್ಲ. ಆ ದಿವ್ಯತ್ವದೆಡೆಗೆ ಎಲ್ಲರೂ

ಯಾರದೇ ಮಧ್ಯಸ್ಥಿಕೆ ಮತ್ತು ಯಾವುದೇ ಇತರ ನಿರ್ಬಂಧದ ಗೊಂದಲವಿರದೇ ನೇರವಾಗಿ ತಲುಪಬಹುದು. "ಆದರೆ" "ದುಷ್ಟ ಭಾವವೇ ತುಂಬಿರುವ ಮತ್ತು ಅಂತಹ ನಡವಳಿಕೆಗಳಿರುವ ಯಾವುದೇ ವ್ಯಕ್ತಿಗಳೂ ಸಹಿತ ಪರಿಪೂರ್ಣ ಪ್ರೇಮ ಮತ್ತು ಸಮರ್ಪಣೆಯೊಂದಿಗೆ ನನ್ನೆಡೆಗೆ ಬರಬಹುದು" ಎಂದು ಆ ದಿವ್ಯತ್ವದ ಗುರುವು ಇಚ್ಛಿಸಿದ್ದಲ್ಲಿ, ಆಗ ಅವನ ಇಚ್ಛೆಯು ನಿರ್ಧರಿತವಾಗಿರುವದರಿಂದ ಅದು ಅವನಲ್ಲಿ ಆತ್ಮಗತವೂ ಆಗಿರುವದರಿಂದ ಮತ್ತೂ ಪರಿಪೂರ್ಣಗೊಳ್ಳಲು ಸೂಕ್ತಗೊಂಡಿರುವದರಿಂದ, ಅವನು ಓರ್ವ ಸಂತನ ಸ್ವರೂಪದಲ್ಲಿಯೇ ಗೌರವಿಸಲ್ಪಡುತ್ತಾನೆ. ಶೀಘ್ರಾತಿ ಶೀಘ್ರವಾಗಿಯೇ ಅವನು ಋಜು ಮಾರ್ಗದಿಂದ ಕೂಡಿರುವ ಪ್ರಾಣ ಮತ್ತು ಶಾಶ್ವತದ ಶಾಂತಿಯನ್ನು ಪಡೆದುಕೊಳ್ಳುತ್ತಾನೆ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವದಾದಲ್ಲಿ, ಸಂಪೂರ್ಣವಾಗಿ ತನ್ನನ್ನು ತಾನು ಸಮರ್ಪಣೆಗೊಳಿಸಿಕೊಳ್ಳುವ ಹಂತವು ಆ ಶಕ್ತಿಯ ಎಲ್ಲ ದ್ವಾರಗಳಲ್ಲೂ ಮುಕ್ತ ಪ್ರವೇಶವನ್ನು ಒದಗಿಸುತ್ತದೆ. ಇದು ಆ ಪರಮ ದೇವನು ಅವತರಣಗೊಂಡು ಬರಲು ಅವಶ್ಯವಿರುವ ಅಂದರೆ ಮಾನವ ಜೀವಿಯಾಗಿ ಬರುವ ಅವಕಾಶವನ್ನು ಒದಗಿಸುತ್ತದೆ. ಈ ರೀತಿಯ ಒಂದು ಘಟನೆಯೇ ಇಡೀ ಘಟನೆಯನ್ನೇ ಪುನರ್–ಸಂಯೋಜನೆಗೊಳಿಸಿ, ಅಲ್ಲಿನ ಎಲ್ಲ ಅಂಶಗಳನ್ನೂ ಅಂತರ್ಗತಗೊಳಿಸಿಕೊಳ್ಳುತ್ತದೆ. ಇದು ಅಸ್ತಿತ್ವದಲ್ಲಿರುವ ಆ ದೈವೀ–ನಿಯಮವು ಎಲ್ಲವನ್ನೂ ಸಮ್ಮಿತಿಗೊಳಿಸುತ್ತದೆ. ಇದು ತೀವ್ರಗತಿಯಲ್ಲಿಯೇ ರೂಪಾಂತರಣದ ಹಂತದಲ್ಲಿಯೇ ಕೆಳಹಂತದ ಬದುಕನ್ನು ಆಧ್ಯಾತ್ಮಿಕ ಸ್ವಭಾವದ ಔನ್ನತ್ಯಕ್ಕೇರಿಸುತ್ತದೆ. ಸ್ವಯಂ–ಸಮರ್ಪಣೆಯ ಇಚ್ಛೆಯ ಬಲಗಳು ಯಾವಾಗಲೂ ಆ ಪರಮ ದೇವನ ಮತ್ತು ಮಾನವನ ಮಧ್ಯದಲ್ಲಿರುವ ಪರದೆಯಂತಿರುತ್ತವೆ. ಇವೇ ಹಲವಾರು ತಪ್ಪುಗಳನ್ನು ಮತ್ತು ಬಾಧೆಗಳನ್ನು ಕತ್ತರಿಸುವಂತೆ ಪ್ರೇರೇಪಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/334–35**

---

ಆದಾಗ್ಯೂ ಅಥವಾ ಅದು ಯಾವ ಕಡೆಯಿಂದ ಆಗಮಿಸಿದ್ದರೂ, ಅದರ ಒಂದೇ ಒಂದು ಉದ್ದೇಶವೆಂದರೆ, ಇಲ್ಲಿರುವ ನಿರಾಶೆಯನ್ನು ಹತಾಶೆಯನ್ನು ತೊಡೆದು ಹಾಕುವದೇ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/186** **– ಶ್ರೀ ಅರವಿಂದರು**

ಪರಮ ಪ್ರಭುವೇ, ನಿನ್ನ ಪರಮ ಪ್ರೇಮದ ಯೋಗ್ಯ ಉಪಕರಣವಾಗುವಂತೆ ನನ್ನನ್ನು ಸಿದ್ಧಪಡಿಸು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/64**

## ಕಾರ್ಯಗಳ ಹಿಂದಿರುವ ಸಂಕಲ್ಪ ಶಕ್ತಿ

**– ಅನು: ನಾಗಜ್ಯೋತಿ ಮಾನ್ವಿ**

**ಆದ್ಯತೆಯ ಮೇರೆಗೆ ಆಯ್ಕೆ ಬೇಡ: ಅನಾಸ್ಥೆಯಿಂದ ಕಾರ್ಯ ನಿರ್ವಹಣೆ ಮಾಡು:**

ಯಾವ ಆದ್ಯತೆಯೂ ಇಲ್ಲದೇ ಆಯ್ಕೆ ಮಾಡಿಕೊಳ್ಳುವುದು ಮತ್ತು ಅದನ್ನು ಇಷ್ಟಾನಿಷ್ಟಗಳ ಸಂಬಂಧವಿಲ್ಲದೇ ತಟಸ್ಥ ಮನೋಭಾವದಿಂದ ಕಾರ್ಯ ನಿರ್ವಹಿಸುವುದು ಸುಲಭವಲ್ಲ. ಅದು ತೀರ ಕಠಿಣ. ಆದರೆ ಪ್ರಜ್ಞೆಯ ಬೆಳವಣಿಗೆಯ ಹಾಗೂ ಆತ್ಮಸಂಯಮನದ ಮೂಲ ಅದುವೇ ಆಗಿದೆ. ಈ ರೀತಿಯಾಗಿ ಆಯ್ಕೆ ಮಾಡಿಕೊಳ್ಳುವುದೆಂದರೆ ನಿಜವಾದ ಸತ್ಯ ಯಾವುದು ಎಂಬುದನ್ನು ತಿಳಿದುಕೊಂಡು ಅದನ್ನು ಅಸ್ತಿತ್ವದಲ್ಲಿ ತರುವುದು ಎಂದು ಅರ್ಥ. ಹೀಗೆ ಆಯ್ದುಕೊಳ್ಳುವಾಗ ಯಾವ ವೈಯಕ್ತಿಕ ಹಿತಾಸಕ್ತಿಯೂ ಇರಕೂಡದು. ವ್ಯಕ್ತಿ, ಕ್ರಿಯೆ, ಪರಿಸ್ಥಿತಿ ಇವುಗಳನ್ನು ಪರಿಗಣಿಸಕೂಡದು. ಅಂತೆಯೇ ಸಾಮಾನ್ಯ ಮಾನವನಿಗೆ ಇದು ಅತಿ ಕಠಿಣತಮವಾದುದು. ಆದರೆ, ಈ ರೀತಿ ನಿಷ್ಪಕ್ಷಪಾತವಾಗಿ ಎಲ್ಲ ಆಕರ್ಷಣೆ, ಆಸಕ್ತಿಗಳಿಂದ ದೂರಾಗಿ ಪರಮ ಸತ್ಯದ ಆಧಾರದ ಮೇಲೆ ನಿಂತು ಕಾರ್ಯ ಮಾಡಬೇಕು. ಒಮ್ಮೆ ಈ ರೀತಿ ಅವಶ್ಯವಾಗಿ ಮಾಡಲೇಬೇಕಾದ ಕಾರ್ಯದ ಬಗ್ಗೆ ನಿರ್ಧಾರ ತೆಗೆದುಕೊಂಡ ಮೇಲೆ ಶೀಘ್ರವಾಗಿ ಅದರಲ್ಲಿ ತೊಡಗಿಕೊಂಡು ಬಿಡಬೇಕು.

ನಿನ್ನನ್ನು ನೀನೇ ಚೆನ್ನಾಗಿ ಗಮನಿಸು, ನಿನಗೇ ಗೊತ್ತಾಗುತ್ತದೆ ಕಾರ್ಯಾರಂಭ ಮಾಡುವ ಪೂರ್ವದಲ್ಲಿ ನಿನಗೆ ಬಲವಾದ ಆಂತರಿಕವಾದ ಪ್ರೇರಣೆ ಬೇಕು, ಅದು ನಿನ್ನನ್ನು ಮುಂದೆ ತಳ್ಳಬೇಕು. ಸಾಮಾನ್ಯ ಮನುಷ್ಯರಲ್ಲಿ ಈ ಪ್ರೇರಣೆಯು ಸಹಸಾ ಆಶೆ ಅಥವಾ ಬಯಕೆ ಆಗಿರುವುದು. ಈ ಬಯಕೆಯ ಬದಲಾಗಿ ಆ ಜಾಗದಲ್ಲಿ ಪರಮ ಸತ್ಯದ ಸ್ಪಷ್ಟವಾದ ಸರಿಯಾದ ಕಾಣ್ಕೆ ಮೂಡಬೇಕು.

ಕೆಲವರು ಇದನ್ನು ಭಗವಂತನ ವಾಣಿ ಅಥವಾ ಭಗವಂತನ ಸಂಕಲ್ಪ ಎಂದು ಕರೆಯುತ್ತಾರೆ. ಈ ಶಬ್ದಗಳ ನಿಜವಾದ ಅರ್ಥ ಹೀಗಿಲ್ಲ; ಆದ್ದರಿಂದ

ನಾನು ಇದನ್ನು ದಿವ್ಯ ಸತ್ಯ ಎಂದು ಕರೆಯಲು ಬಯಸುತ್ತೇನೆ. ಇದು ನಿಜವಾಗಿ ಪರಮ ದೈವೀ ಸತ್ಯದ ಒಂದು ಸಣ್ಣ ಮುಖ ಅಷ್ಟೇ. ನಾವು ಆ ತತ್ ಸತ್ಯಕ್ಕೆ ಬೇರೆ ಯಾವ ಹೆಸರೂ ಕೊಡಲಾರೆವು. ಆದರೆ ಅದು ಇಡೀ ಅಸ್ತಿತ್ವದ ಮೂಲವೂ ಹೌದು, ಅಂತಿಮ ಗುರಿಯೂ ಹೌದು. ಬೇಕೆಂದೇ ನಾನು ದೇವರು, ಭಗವಂತ ಈ ಶಬ್ದ ಉಪಯೋಗಿಸುತ್ತಿಲ್ಲ. ಏಕೆಂದರೆ, ಮತೀಯ ಧರ್ಮಗಳು ತನ್ನ ಸೃಷ್ಟಿಯನ್ನು ಬಿಟ್ಟು ಹೊರಗೆಲ್ಲೋ ಇರುವ ಸರ್ವ ಶಕ್ತ ವ್ಯಕ್ತಿಗೆ ಈ ಹೆಸರು ಕೊಟ್ಟಿಬಿಟ್ಟಿವೆ. ಇದು ತಪ್ಪು.

ಏನೇ ಆದರೂ, ಭೌತಿಕ ಸ್ತರದ ಮೇಲೆ ಮಾತ್ರ ಈ ವ್ಯತ್ಯಾಸ ಸ್ಪಷ್ಟವಾಗಿದೆ. ಏಕೆಂದರೆ, ಏನಾಗಬಾರದೆಂದು ನಾವು ಬಯಸುತ್ತೇವೆಯೋ ಸದ್ಯಕ್ಕೆ ಅದೇ ಆಗಿಬಿಟ್ಟಿದ್ದೇವೆ; ಅವನೋ ನಾವು ಏನು ಆಗಬೇಕೆಂದು ಬಯಸುತ್ತೇವೆಯೇ ಸಂಪೂರ್ಣವಾಗಿ ಅದೇ ಆಗಿಬಿಟ್ಟಿದ್ದಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/1–2**

## ಸಂಕಲ್ಪ ದೃಢವಾಗಿರಲಿ

ನಿನ್ನ ಸಂಕಲ್ಪ ಗಟ್ಟಿಯಾಗಿರಲಿ. ಪ್ರತಿಭಟನೆ ತೋರುವ ಭಾಗಗಳನ್ನು ಅವಿಧೇಯ ಮಕ್ಕಳ ಹಾಗೆ ತಿದ್ದು. ಅವುಗಳನ್ನು ಸದಾ ಸಹನೆಯಿಂದ ತಿದ್ದುವ ಕೆಲಸ ಮಾಡು. ಅವುಗಳ ತಪ್ಪು ಎತ್ತಿ ತೋರಿಸಿ ಮನವರಿಕೆ ಮಾಡಿಕೊಡು.

ನಿನ್ನ ಪ್ರಜ್ಞೆಯ ಆಳದಲ್ಲಿ ಅಂತರಾತ್ಮನಿದ್ದಾನೆ. ಅವನು ನಿನ್ನೊಳಗಿರುವ ಪರಮಾತ್ಮನ ಗುಡಿ ಇದ್ದ ಹಾಗೆ. ಇದನ್ನು ಕೇಂದ್ರವಾಗಿಟ್ಟುಕೊಂಡು ಚದುರಿಹೋಗಿರುವ ಎಲ್ಲ ಭಾಗಗಳ ಹಾಗೂ ನಿನ್ನ ಸತ್ತೆಯ ಎಲ್ಲ ವೈರುಧ್ಯಮಯ ಚಲನೆಗಳ ಏಕೀಕರಣವಾಗಬೇಕು. ನಿನ್ನ ಅಂತರಾತ್ಮನ ಪ್ರಜ್ಞೆ ಹಾಗೂ ಅದರ ಅಭೀಪ್ಸೆ ನಿನಗೆ ಸಿದ್ಧಿಸಿದಾಗ ಮಾತ್ರ ನಿನ್ನ ಸಂಶಯಗಳು, ಸಾಧನದ ಕಠಿಣತೆ ಇವೆಲ್ಲ ನಾಶವಾಗುವುವು. ಇದು ತಕ್ಷಣಕ್ಕೂ ಆಗಬಹುದು ಅಥವಾ ಸ್ವಲ್ಪ ದೀರ್ಘ ಸಮಯ ತೆಗೆದುಕೊಳ್ಳಬಹುದು, ಕೊನೆಗೆ ನೀನಿದನ್ನು ಸಾಧಿಸುವುದು ಮಾತ್ರ ನಿಶ್ಚಿತ. "ನಾನು ಕೇವಲ ನಿನ್ನವನಾಗಲು ಬಯಸುತ್ತೇನೆ" ಎಂದು ಪ್ರಾಂಜಲವಾದ ಭಾವದಿಂದ ಭಗವಂತನೆಡೆಗೆ ಒಂದು ಸಲ ತಿರುಗಿದ್ದೇ ಆದರೆ, ಹಾಗೆಯೇ ಭಗವಂತನೂ ಸಹ "ಆಗಲಿ" ಎಂದು ಹೇಳಿದನೆಂದರೆ ಮುಗಿಯಿತು ಜಗತ್ತಿನ

ಯಾವ ಶಕ್ತಿಯೂ ನಿನ್ನನ್ನು ತಡೆಯಲಾರದು. ಕೇಂದ್ರ ಸತ್ತೆಯು ಶರಣಾಗತಿ ಹೊಂದಿತೆಂದರೆ ಮುಗಿಯಿತು ಯಾವ ಪ್ರಮುಖ ಅಡೆತಡೆಗಳೂ ಇರುವುದಿಲ್ಲ. ಬಾಹ್ಯ ಸತ್ತೆಯು ಒಂದು ರೀತಿಯಲ್ಲಿ ಹೊರ ಕವಚವಿದ್ದಹಾಗೆ. ಸಾಮಾನ್ಯ ಜನರಲ್ಲಿ ಅದು ಎಷ್ಟು ದಪ್ಪ ಹಾಗೂ ಕಠಿಣವಾಗಿರುವುದೆಂದರೆ ಅವರಿಗೆ ತಮ್ಮೊಳಗಿರುವ ಪರಮಾತ್ಮನ ಅರಿವು ಆಗುವುದೇ ಇಲ್ಲ. ಒಂದೇ ಒಂದು ಕ್ಷಣವಾದರೂ ಸಾಕು ನಿನ್ನ ಅಂತಃಸತ್ತೆಯು "ನಾನಿದ್ದೇನೆ, ನಾನು ನಿನ್ನವನು" ಎಂದು ಹೇಳಿದರೂ ಆಯಿತು ಒಂದು ಸೇತುವೆ ನಿರ್ಮಾಣವಾದಂತೆಯೇ. ಬಾಹ್ಯ ಕವಚವು ನಿಧಾನವಾಗಿ ತೆಳ್ಳಗಾಗುತ್ತ ಹೋಗುವುದು. ಕೊನೆಗೆ ಬಾಹ್ಯ ಹಾಗೂ ಆಂತರಿಕ ಎರಡೂ ಭಾಗಗಳು ಒಂದಾಗುವುವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/7**

### ದೈವೀ ಸಂಕಲ್ಪವನ್ನು ತಿಳಿದುಕೊಳ್ಳುವುದು

*ದೈವೀ ಸಂಕಲ್ಪವೇನೆಂಬುದನ್ನು ನಾವು ಹೇಗೆ ತಿಳಿದುಕೊಳ್ಳುವುದು?*

ಅದು ತಿಳಿದುಕೊಳ್ಳುವಂಥದಲ್ಲ, ಅನುಭವವಾಗುವಂಥದು. ಅದರ ಅನುಭವವಾಗಬೇಕಾದರೆ ತುಂಬ ಶ್ರದ್ಧೆಯಿಂದ ಆ ರೀತಿ ಸಂಕಲ್ಪ ಮಾಡಬೇಕು. ನಿನ್ನಲ್ಲಿ ಆದ್ಯತೆ, ಇಷ್ಟಾನಿಷ್ಟ, ಬಯಕೆ, ಆಶೆ, ಆಕರ್ಷಣೆ ಇರುವವರೆಗೆ ಸತ್ಯವು ನಿನ್ನಿಂದ ಮರೆಯಾಗಿರುತ್ತದೆ. ಆದ್ದರಿಂದ ಮೊದಲು ನೀನು ಮಾಡಬೇಕಾದುದೇನೆಂದರೆ ನಿನ್ನ ಪ್ರಜ್ಞೆಯ ಎಲ್ಲ ಚಲನೆಗಳ ಮೇಲೆ ಅಧಿಪತ್ಯ ಸಾಧಿಸಬೇಕು. ಪರಮ ಸತ್ಯವು ನಿನ್ನಲ್ಲಿ ಶಾಶ್ವತವಾಗಿ ಪರಿಪೂರ್ಣವಾಗಿ ಅಭಿವ್ಯಕ್ತವಾಗುವವರೆಗೆ ಆ ಚಲನೆಗಳನ್ನು ಸಾಧ್ಯವಾದ ಮಟ್ಟಿಗೆ ಪರಿವರ್ತನೆ ಮಾಡಬೇಕು, ಸಾಧ್ಯವಿಲ್ಲವಾದರೆ ಅಂಥವುಗಳನ್ನು ಕಿತ್ತು ಹಾಕಬೇಕು.

ಇದಕ್ಕಾಗಿ ಕೇವಲ ಸಂಕಲ್ಪ ಮಾಡಿದರೆ ಸಾಲದು, ಬಹಳ ಜನ ಸಂಕಲ್ಪವನ್ನು ಮರೆಯುವುದೂ ಉಂಟು. ಹಾಗಾಗಬಾರದು. ಅಭೀಪ್ಸೆ ಎಂಬುದು ಸದಾ ಜ್ವಲಂತ ಜ್ವಾಲೆಯಂತಿರಬೇಕು, ನಿನ್ನಲ್ಲಿ ಆಶೆ, ಇಷ್ಟಾನಿಷ್ಟ ಆದ್ಯತೆ, ಆಕರ್ಷಣೆಗಳು ತಲೆದೋರಿದಾಗ ಅವುಗಳನ್ನು ಈ ಜ್ವಾಲೆಯಲ್ಲಿ ಬೀಸಾಡಿ ಸುಟ್ಟುಬಿಡಬೇಕು. ನಿರಂತರವಾಗಿ ಹೀಗೆ ಮಾಡುತ್ತ ಹೋದರೆ ನಿನ್ನ ಸಾಮಾನ್ಯ ಪ್ರಜ್ಞೆಯಲ್ಲಿ ನಿಜವಾದ ದೈವೀ ಪ್ರಜ್ಞೆಯ ಬೆಳಕು ಮೂಡುತ್ತ ಹೋಗುವುದು. ಮೊದಮೊದಲು

ಅದು ನಿನ್ನ ಆಶೆ, ಆಕರ್ಷಣೆ ಮುಂತಾದವುಗಳ ಹಿಂಭಾಗದಲ್ಲಿ ಕ್ಷೀಣವಾಗಿರುವುದು. ನೀನು ಇವೆಲ್ಲವುಗಳನ್ನು ದಾಟಿ ಆಚೆ ಹೋಗಬೇಕು, ಶಾಂತವಾದ ಪೂರ್ಣ ನಿಃಶಬ್ದವಾಗಿರುವ ನಿಜವಾದ ದೈವೀ ಪ್ರಜ್ಞೆಯನ್ನು ಹುಡುಕಬೇಕು.

ದೈವೀ ಪ್ರಜ್ಞೆಯ ಸಂಪರ್ಕವುಳ್ಳವರು ಕೆಲಸಲ ಅವಶ್ಯಕತೆ ಇದ್ದರೆ ತೀರ ಪ್ರತಿಕೂಲವಾಗಿರುವುದನ್ನೂ ಆಯ್ದುಕೊಳ್ಳುವುದುಂಟು, ಅವರಿಗೆ ಎಲ್ಲ ಸಾಧ್ಯತೆಗಳೂ ಇರುತ್ತವೆ. ಆದರೆ ಈ ಹಂತ ಮುಟ್ಟಬೇಕಾದರೆ ಬಹಳ ದೂರ ಕ್ರಮಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/2–3**

## ದೈವೀ ಸಂಕಲ್ಪವನ್ನು ಗುರುತಿಸುವ ಬಗೆ

ದೈವೀ ಸಂಕಲ್ಪವೇ ನಮ್ಮನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿದಾಗಲೂ ಸಹ ಅದನ್ನು ಕಂಡುಕೊಳ್ಳುವುದು ಹೇಗೆ ಎಂಬುದು ತಾನೇ ನಿನ್ನ ಪ್ರಶ್ನೆ? ದೈವೀ ಸಂಕಲ್ಪವನ್ನು ತಿಳಿದುಕೊಳ್ಳುವುದು ಕಠಿಣವೇನಲ್ಲ. ಏಕೆಂದರೆ ಅದು ಅಷ್ಟು ನಿಖರವಾಗಿರುತ್ತದೆ, ತಪ್ಪಾಗಿ ಅರ್ಥೈಸಿಕೊಳ್ಳುವುದು ಸಾಧ್ಯವಿಲ್ಲ. ಬಹಳ ಶ್ರಮ ಪಡದೇ ಸಾಧನಾ ಪಥದಲ್ಲಿ ಅನತಿ ಕಾಲದಲ್ಲಿಯೇ ತಿಳಿದುಕೊಳ್ಳಬಹುದು. ಇಷ್ಟೇ ನೀವದನ್ನು ಕಿವಿಗೊಟ್ಟು ಆಲಿಸಬೇಕು, ಅದು ಇಲ್ಲಿ ಹೃದಯದಲ್ಲಿ ಮೃದುವಾಗಿ ಕೇಳಿಬರುತ್ತದೆ. ಒಮ್ಮೆ ಅದನ್ನಾಲಿಸುವ ರೀತಿಗೆ ಒಗ್ಗಿಕೊಂಡಿರೆಂದರೆ ಮುಗಿಯಿತು, ದೈವೀ ಸಂಕಲ್ಪಕ್ಕೆ ಸ್ವಲ್ಪವೇ ವಿರುದ್ಧವಾಗಿ ನಡೆದುಕೊಂಡಿರೋ ಸಾಕು ನಿಮ್ಮೊಳಗೆ ಅಸಮಾಧಾನ ಆರಂಭವಾಗಿಬಿಡುತ್ತದೆ. ಹಾಗೆಯೇ ಅದೇ ತಪ್ಪು ದಾರಿಯಲ್ಲಿ ಮುಂದುವರಿದಿರೋ ನಿಮ್ಮಲ್ಲಿ ಬಹಳಷ್ಟು ಗೊಂದಲವುಂಟಾಗುತ್ತದೆ. ಏನೇನೋ ಪ್ರಾಪಂಚಿಕ ಕಾರಣಗಳನ್ನು ಹೇಳಿಕೊಂಡು ಅದೇ ದಾರಿಯಲ್ಲಿ ಮುಂದುವರಿದಿ–ರಾದರೆ ನಿಮ್ಮ ದರ್ಶನ ಸಾಮರ್ಥ್ಯದ ಮೂಲವು ಕಳೆದುಹೋಗುತ್ತದೆ. ಕೊನೆಗೆ ಎಗ್ಗಿಲ್ಲದಂತೆ ತಪ್ಪು ಮಾಡುತ್ತಲೇ ಹೋಗುವಿರಿ. ಆದರೆ ಸ್ವಲ್ಪವೇ ಸ್ವಲ್ಪ ಅಸಮಾಧಾನ ಆದ ತಕ್ಷಣ ಸ್ವಲ್ಪ ನಿಧಾನಿಸಿ, ನಿಮ್ಮ ಅಂತಃಸತ್ತೆಯನ್ನು ಕೇಳಿ "ಇದರ ಕಾರಣವೇನು?" ನಿಮಗೆ ನಿಜವಾದ ಉತ್ತರ ಸಿಗುವುದು, ಆಗ ನಿಮಗೆ ಎಲ್ಲವೂ ಸ್ಪಷ್ಟವಾಗುವುದು. ತುಸು ನಿರಾಶೆಯಾದಾಗ, ಅಥವಾ ಅಸಮಾಧಾನವಾದಾಗ ಪ್ರಾಪಂಚಿಕ ನೆಪಗಳನ್ನು ಹೇಳುತ್ತ ಹೋಗಬೇಡಿ. ಕಾರಣ ಹುಡುಕುವಾಗ ನೇರವಾಗಿ ಪ್ರಾಮಾಣಿಕವಾಗಿ ವಿಚಾರ ಮಾಡಿ; ಮೊದಮೊದಲು ನಿಮ್ಮ ಮನಸ್ಸು

ಅತಿ ರಂಜಿತ ವಿವರಣೆ ನೀಡಬಹುದು, ತಕ್ಷಣ ಒಪ್ಪಬೇಡಿ, ಅದರಾಚೆ ಹೋಗಿ "ಇದರ ಹಿಂದಿರುವುದೇನು? ನಾನಿದನ್ನೇಕೆ ಮಾಡುತ್ತಿದ್ದೇನೆ?" ಎಂದು ಪ್ರಶ್ನಿಸಿ. ಕೊನೆಗೆ ಯಾವುದೋ ಮೂಲೆಯಲ್ಲಿ ಅಡಗಿರುವ ಒಂದು ತರಂಗ, ನಿಮ್ಮ ಮನೋಭಾವದಲ್ಲಿನ ಸಣ್ಣ ತಿರುವು, ಎಲ್ಲ ತೊಂದರೆಗೆ ಕಾರಣವಾಗಿರುವ ಸಣ್ಣ ತಪ್ಪು ಅರಿವಿಗೆ ಬರುವುದು.


**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/8–9**

## ಪ್ರೇರಣೆಯ ಬದಲಾವಣೆ

ಸಾಮಾನ್ಯವಾಗಿ ಜನರು ತಮ್ಮ ಪ್ರಾಣಿಕ ಸತ್ತೆಯ ಪ್ರೇರಣೆಗಳಿಂದ, ಸಂಪತ್ತಿನ ಅಥವಾ ಯಶಸ್ಸಿನ ಆಶೆಯಿಂದ, ಅಧಿಕಾರ, ಪದವಿ, ಪ್ರಸಿದ್ಧಿ ಅಥವಾ ತಮ್ಮ ಸಾಮರ್ಥ್ಯ ಪ್ರದರ್ಶನದ ಸಂತೋಷಕ್ಕಾಗಿ ಕೆಲಸ ಮಾಡುವುದುಂಟು. ಇದರಲ್ಲಿ ಕೆಲಸಲ ಯಶಸ್ವಿಯಾಗಬಹುದು, ಸೋಲಬಹುದು, ಅವರವರ ಸಾಮರ್ಥ್ಯ, ಕೆಲಸದ ಶಕ್ತಿ, ಅದೃಷ್ಟ–ದುರಾದೃಷ್ಟ ಅವರವರ ಕರ್ಮ, ಕರ್ಮಫಲ ಇವುಗಳ ಮೇಲೆ ಇದೆಲ್ಲ ಅವಲಂಬಿಸಿರುತ್ತವೆ. ಆದರೆ ಯೋಗಸಾಧನೆ ಆರಂಭ ಮಾಡಿ ಸಾಧಕನು ತನ್ನ ಜೀವನವನ್ನು ಭಗವಂತನಿಗೆ ಸಂಪೂರ್ಣವಾಗಿ ಮುಡಿಪಾಗಿರಿಸಲು ಸಂಕಲ್ಪಿಸಿದರೆ ಪ್ರಾಣಿಕ ಸತ್ತೆಯ ಇಂಥ ಸಾಮಾನ್ಯ ಸಂಗತಿಗಳು ಹೆಚ್ಚು ಪ್ರಭಾವ ಬೀರುವುದಿಲ್ಲ. ಅವುಗಳ ಸ್ಥಾನದಲ್ಲಿ ಉನ್ನತ, ವಿಶೇಷವಾಗಿ ಅಂತರಾತ್ಮಿಕ ಮತ್ತು ಆಧ್ಯಾತ್ಮಿಕ ಪ್ರೇರಣೆ ಕೆಲಸ ಮಾಡುವುವು, ಇದರಿಂದ ಸಾಧಕನು ಮೊದಲಿನಷ್ಟೇ ಶಕ್ತಿಯಿಂದ ಕೆಲಸ ಮಾಡುವುನು, ಆದರೆ ಸ್ವಾರ್ಥಕ್ಕಾಗಿ ಅಲ್ಲ ಪರಂತು ಭಗವಂತನಿಗಾಗಿ. ಸಾಮಾನ್ಯ ಪ್ರಾಣಿಕ ಪ್ರೇರಣೆಗಳು ಅಥವಾ ಪ್ರಾಣಿಕ ಶಕ್ತಿ ಮುಕ್ತವಾಗಿ ಕೆಲಸ ಮಾಡುತ್ತಿಲ್ಲ ಆದರೆ, ಆ ಸ್ಥಾನದಲ್ಲಿ ಉನ್ನತ ಶಕ್ತಿ ಇನ್ನೂ ಕಾರ್ಯ ಮಾಡುತ್ತಿಲ್ಲವಾದರೆ ಕಾರ್ಯದ ಹಿಂದಿನ ಶಕ್ತಿ ಕಂದುವುದು ಅಥವಾ ಯಶಸ್ಸು ತಂದುಕೊಡುವ ಸಾಮರ್ಥ್ಯ ಅದರಲ್ಲಿಲ್ಲದೇ ಹೋಗುವುದು. ನಿಷ್ಠಾವಂತನಾದ ಸಾಧಕನಿಗೆ ಈ ತೊಂದರೆ ಕೇವಲ ತಾತ್ಕಾಲಿಕವಾಗಿರುವುದು. ಆದರೆ ಅವನು ತನ್ನ ನಿವೇದನೆಯೊಳಗಿನ ಕೊರತೆಯನ್ನು ಕಂಡುಕೊಂಡು ಅದನ್ನು ಸರಿಪಡಿಸುವ ಮನೋಭಾವ ಹೊಂದಿರಬೇಕು. ಆಗ ದೈವೀ ಶಕ್ತಿಯು ತಾನಾಗಿಯೇ ಅವನಲ್ಲಿ ಕೆಲಸ ಮಾಡತೊಡಗುವುದು, ಅವನ ಪ್ರಾಣಿಕ ಹಾಗೂ ಎಲ್ಲ ಶಕ್ತಿ ಬಳಸಿ ಗುರಿ ಸಾಧಿಸುವುದು. ನಿನ್ನ (ಪ್ರಶ್ನೆ ಕೇಳಿ ಪತ್ರ ಬರೆದ ಸಾಧಕನ)

ವಿಷಯದಲ್ಲಿ ಹೇಳುವುದಾದರೆ, ನಿನ್ನ ಅಂತರಾತ್ಮ ಮತ್ತು ಮನಸ್ಸಿನ ಒಂದು ಭಾಗವು ನಿನ್ನನ್ನು ಯೋಗದತ್ತ ಸೆಳೆದಿದೆ ಮತ್ತು ಅದರ ಪ್ರಭಾವಕ್ಕೆ ಉನ್ಮುಖವಾಗಿದೆ. ಆದರೆ ಪ್ರಾಣಿಕ ಸ್ವಭಾವ ಅಥವಾ ಅದರ ಬಹುಭಾಗವು ಅಂತರಾತ್ಮನ ಚಲನೆಯ ಜೊತೆ ಇನ್ನೂ ಹೊಂದಿಕೊಂಡಿಲ್ಲ. ಅಂತೆಯೇ ನಿನ್ನ ಕ್ರಿಯಾಶೀಲ ಪ್ರಾಣಿಕ ಪ್ರಕೃತಿಯು ಸಂಪೂರ್ಣವಾಗಿ ಇನ್ನೂ ಸಮರ್ಪಣೆ ಮಾಡಿಕೊಂಡಿರುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/247**



**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

“ಓ ಪರಮಶಕ್ತನೆ ಮತ್ತು ಆಪ್ತನೆ, ನಾವು ಹೇಳುವ ಎಲ್ಲವನ್ನೂ ಮುಂಚಿತವಾಗಿಯೇ ಬಲ್ಲವನು ನೀನು, ಏಕೆಂದರೆ ನೀನು ಅದರ ಮೂಲ!”

“ಓ ಪರಮಶಕ್ತನೆ ಮತ್ತು ಏಕೈಕ ಸ್ನೇಹಿತನೆ, ನಮ್ಮನ್ನು ಒಪ್ಪಿಕೊಳ್ಳುವವನು ನೀನು, ನಮ್ಮನ್ನು ಪ್ರೀತಿಸುವವನು ನೀನು, ನಾವಿರುವಂತೆಯೇ ನಮ್ಮನ್ನು ಅರ್ಥಮಾಡಿಕೊಳ್ಳುವವನು ನೀನು, ಏಕೆಂದರೆ ನಮ್ಮನ್ನು ಹಾಗೆ ಮಾಡಿದ್ದು ನೀನೇ!”

“ಓ ಪರಮೋಚ್ಚನೆ ಮತ್ತು ಏಕೈಕ ಮಾರ್ಗದರ್ಶಕನೆ, ಎಂದಿಗೂ ಲಾಭವನ್ನು ಆಶಿಸದ ನೀನು, ನಮ್ಮ ಅತ್ಯುನ್ನತ ಇಚ್ಛೆಯನ್ನು ಸ್ಪಷ್ಟಪಡಿಸುವವನು ನೀನು, ಏಕೆಂದರೆ ಅದರಲ್ಲಿ ಇಚ್ಛಿಸುವವನು ನೀನೇ!”

“ಆಲಿಸುವ, ಅರ್ಥಮಾಡಿಕೊಳ್ಳುವ, ಪ್ರೀತಿಸುವ ಮತ್ತು ಮಾರ್ಗದರ್ಶನ ಮಾಡುವ ನಿನ್ನನ್ನು ಹೊರತುಪಡಿಸಿ ಬೇರೆಡೆ ಹುಡುಕುವುದು ಮೂರ್ಖತನವಾಗಿದೆ, ಏಕೆಂದರೆ ನೀನು ಯಾವಾಗಲೂ ನಮ್ಮ ಕರೆಗೆ ಓಗೊಡಲು ಸಿದ್ಧವಾಗಿರುವಿ ಮತ್ತು ನೀನು ನಮ್ಮನ್ನು ಎಂದಿಗೂ ವಿಫಲಗೊಳಿಸುವುದಿಲ್ಲ!”

“ನೀನು ನನಗೆ ಪರಮಶಕ್ತನನ್ನು, ಪರಿಪೂರ್ಣ ಆತ್ಮವಿಶ್ವಾಸದ ಉದಾತ್ತ ಆನಂದವನ್ನು, ಸಂಪೂರ್ಣ ಪ್ರಸನ್ನತೆಯನ್ನು, ಸಂಪೂರ್ಣ ಶರಣಾಗತಿಯನ್ನು ಸಂಕೋಚವಿಲ್ಲದೆ ಅಥವಾ ವಾಸ್ತವತೆಯನ್ನು ಮೀರದೆ, ಪ್ರಯತ್ನ ಅಥವಾ ನಿರ್ಭಂಧವಿಲ್ಲದೆ ಅರಿತುಕೊಳ್ಳುವಂತೆ ಮಾಡಿರುವೆ.

ಮಗುವಿನಂತೆ ಸಂತೋಷದಿಂದ ನಾನು ನಿನ್ನ ಮುಂದೆ ಒಮ್ಮೆ ನಕ್ಕಿದ್ದೇನೆ, ಅತ್ತಿದ್ದೇನೆ, ಓ ನನ್ನ ಪ್ರಿಯತಮನೆ!”

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/374–75**

**ಕಷ್ಟಗಳು, ಕ್ಷೋಭೆಗಳು ಮತ್ತು ಶಾಂತಿ**

ಬಯಸು, ಸರಿಯಾದ ಮನೋಭಾವದಲ್ಲಿ ಕೇಂದ್ರೀಕರಿಸು ಮತ್ತು, ಯಾವುದೇ ತೊಂದರೆಗಳಿದ್ದರೂ, ನೀನು ಹಾಕಿಕೊಂಡ ಗುರಿಯನ್ನು ಸಾಧಿಸುವುದು ಖಚಿತ.

ಅದು ನಿಮ್ಮಲ್ಲಿಯ ಅಂತರಂಗದ ಶಾಂತಿಯಲ್ಲಿದೆ ಮತ್ತು “ಸತ್ಯ”ದಲ್ಲಿದೆ, ನೀವು ಹಾಗೆ ಬದುಕಲು ಕಲಿಯಬೇಕು ಮತ್ತು ಅದನ್ನು ನೀವೇ ಎಂದು ಭಾವಿಸಬೇಕು. ಉಳಿದೆಲ್ಲವನ್ನೂ ನೀವು ನಿಮ್ಮ ನಿಜವಾದ ಆತ್ಮವೆಂದು ಪರಿಗಣಿಸದೆ, ಸತ್ಯಾತ್ಮವು ಹೊರಹೊಮ್ಮುತ್ತ ಹೋದಂತೆ, ಖಚಿತವಾಗಿ (ಬಿಟ್ಟು)ಹೋಗುವ ಮೇಲ್ಮೈಯಲ್ಲಿ ನಿರಂತರವಾಗಿ ಬದಲಾಗುತ್ತಿರುವ ಅಥವಾ ಮರುಕಳಿಸುವ ಚಲನೆಗಳ ಹರಿವು ಎಂದು ಪರಿಗಣಿಸಬೇಕು.

ಶಾಂತಿಯೇ ನಿಜವಾದ ಪರಿಹಾರ; ಕಠಿಣ ಪರಿಶ್ರಮದಿಂದ ವಿಚಲನೆಯು ಕೇವಲ ಒಂದು ತಾತ್ಕಾಲಿಕ ಪರಿಹಾರವಾಗಿದೆ – ಆದಾಗ್ಯೂ ಒಂದು ನಿರ್ದಿಷ್ಟ

ಪ್ರಮಾಣದ ಕಾರ್ಯವು ಜೀವಿಯ ವಿವಿಧ ಅಂಗಗಳ ಸರಿಯಾದ ಸಮತೋಲನಕ್ಕೆ ಅವಶ್ಯಕವಾಗಿದೆ. ನಿಮ್ಮ ತಲೆಯ ಮೇಲೆ ಅಥವಾ ಅದರ ಸುತ್ತ–ಮುತ್ತ ಶಾಂತಿಯನ್ನು ಅನುಭವಿಸುವುದು ಮೊದಲ ಹಂತವಾಗಿದೆ; ನೀವು ಅದರೊಂದಿಗೆ ಸಂಪರ್ಕವನ್ನು ಹೊಂದಬೇಕು, ಅದು ನಿಮ್ಮೊಳಗೆ ಇಳಿದು ಬರಬೇಕು ಮತ್ತು ಅದು ನಿಮ್ಮ ಮನಸ್ಸು, ಪ್ರಾಣ ಮತ್ತು ದೇಹವನ್ನು ತುಂಬಬೇಕು ಮತ್ತು ನೀವು ಅದರಲ್ಲಿರುವಂತೆ ಅದು ನಿಮ್ಮನ್ನು ಆವರಿಸಿರಬೇಕು – ಏಕೆಂದರೆ ಈ ಶಾಂತಿಯು ನಿಮ್ಮೊಂದಿಗೆ ದೈವೀ ಉಪಸ್ಥಿತಿಯ ಒಂದು ಸಂಕೇತವಾಗಿದೆ ಮತ್ತು ಒಮ್ಮೆ ನೀವು ಅದೆಲ್ಲವನ್ನೂ ಹೊಂದಿದ್ದೇ ಆದರೆ, ಉಳಿದೆಲ್ಲವೂ ಬರಲು ಪ್ರಾರಂಭವಾಗುತ್ತದೆ.

ಮಾತಿನಲ್ಲಿ ಮತ್ತು ಆಲೋಚನೆಯಲ್ಲಿ ಸತ್ಯವು ಬಹಳ ಮುಖ್ಯವಾಗಿದೆ. ಮಿಥ್ಯೆಯು ಹೊರಗಿನಿಂದ ನಿಮ್ಮೆಡೆಗೆ ಬರುತ್ತಿರುವಂತೆ, ಅದು ನಿಮಗೆ ಸಂಬಂಧಿಸಿದ್ದಲ್ಲವೆಂಬ ಭಾವನೆ ಬರತೊಡಗಿದಾಗ, ಅದನ್ನು ತಿರಸ್ಕರಿಸುವುದು ಮತ್ತು ನಿರಾಕರಿಸುವುದು ಸುಲಭವಾಗುತ್ತದೆ.

ಜೋಪಾನವಾಗಿಡು, ಇನ್ನೂ ವಕ್ರವಾಗಿರುವುದೆಲ್ಲವನ್ನು ನೇರಗೊಳಿಸ–ಲಾಗುವುದು (ಮನಸ್ಸಿನ ವಿಕಾರಗಳನ್ನು) ಮತ್ತು ದೈವೀ ಉಪಸ್ಥಿತಿಯ ಸತ್ಯವನ್ನು ನೀವು ಸ್ಪಷ್ಟವಾಗಿ ತಿಳಿಯುವಿರಿ ಹಾಗೂ ಅನುಭವಿಸುವಿರಿ ಮತ್ತು ನಿಮ್ಮ ನಂಬಿಕೆಯು ನೇರ ಅನುಭವದಿಂದ ಸಮರ್ಥಿಸಲ್ಪಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/125–26**

ಎಲ್ಲಿಯವರೆಗೆ ಮನಸ್ಸು ಚಂಚಲವಾಗಿರುತ್ತದೆಯೋ ಅಲ್ಲಿಯವರೆಗೆ ಅಂತರಂಗದ ಸತ್ಯವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಸ್ಥಿರತೆ, ಶಾಂತತೆ, ನಿಶ್ಶಬ್ದತೆ – ಇದು ಮೊದಲ ಅತ್ಯಗತ್ಯ ಸ್ಥಿತಿಯಾಗಿದೆ.

*

ಅಂತರಂಗದಲ್ಲಿ ಶಾಂತವಾಗಿರಲು, ಗಟ್ಟಿಯಾದ ಇಚ್ಛೆಯಿಂದ ತೊಂದರೆಗಳನ್ನು ಎದುರಿಸಲು, ತೊಂದರೆಗಳಿಂದ ಅಥವಾ ಏರಿಳಿತಗಳಿಂದ ಕ್ಷೋಭೆಗೊಳ್ಳಲು ಅಥವಾ ಎದೆಗುಂದದೆ ಇರಲು ನಿರಾಕರಿಸುವುದು, ಇದು ಸಾಧನೆಯ ಪಥದಲ್ಲಿ ಕಲಿಯಬೇಕಾದ ಮೊದಲ ವಿಷಯಗಳಲ್ಲಿ ಒಂದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/140**

## ಸಾಮರ್ಥ್ಯ ಮತ್ತು ಅನುಗ್ರಹ

ಸಾಮರ್ಥ್ಯ ಮತ್ತು ಅನುಗ್ರಹದ ಬಗ್ಗೆ ನಾನು ಹೇಳುವುದರಲ್ಲಿ ಅರ್ಥವಾಗದೆ ಏನೂ ಇಲ್ಲ. ಸಾಮರ್ಥ್ಯವು ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಒಂದು ಮಹತ್ವವನ್ನು ಹೊಂದಿದೆ, ಆದರೆ ಅದನ್ನು ಸಾಮರ್ಥ್ಯದಿಂದ ಮಾತ್ರ ಮಾಡಬಹುದು ಮತ್ತು ಬೇರೆ ಯಾವುದೇ ವಿಧಾನದಿಂದ ಮಾಡಲಾಗುವುದಿಲ್ಲ ಎಂದು ಹೇಳುವುದು ಒಂದು ಘೋರ ಅತಿಶಯೋಕ್ತಿಯಾಗಿದೆ. ಅನುಗ್ರಹವೊಂದು ಆವಿಷ್ಕಾರವಲ್ಲ, ಅದು ಆಧ್ಯಾತ್ಮಿಕ ಅನುಭವದ ಸತ್ಯವಾಗಿದೆ. ಬುದ್ಧಿವಂತರಿಂದ ಮತ್ತು ಸಮರ್ಥರಿಂದ ಕೇವಲವೆಂದು ಪರಿಗಣಿಸಲ್ಪಡುವ ಅನೇಕರು ಅನುಗ್ರಹದಿಂದ ಸಾಕ್ಷಾತ್ಕಾರವನ್ನು ಪಡೆದುಕೊಂಡಿದ್ದಾರೆ; ಮಾನಸಿಕ ಶಕ್ತಿ ಅಥವಾ ತರಬೇತಿಯಿಲ್ಲದ, ಚಾರಿತ್ರ್ಯದ ಅಥವಾ ಬಯಕೆಯ "ಸಾಮರ್ಥ್ಯ"ವಿಲ್ಲದ ಅನಕ್ಷರಸ್ಥರೂ ಹಂಬಲಿಸಿದ್ದಾರೆ ಮತ್ತು ವೇಗವಾಗಿ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆದುಕೊಂಡಿದ್ದಾರೆ, ಏಕೆಂದರೆ ಅವರು ನಂಬಿಕೆಯುಳ್ಳವರಾಗಿದ್ದರು ಅಥವಾ ಪ್ರಾಮಾಣಿಕರಾಗಿದ್ದರು. ಆಧ್ಯಾತ್ಮಿಕ ಇತಿಹಾಸದ ಸತ್ಯಗಳು ಮತ್ತು ಸಾಮಾನ್ಯ ಆಧ್ಯಾತ್ಮಿಕ ಅನುಭವದ ಈ ಸಂಗತಿಗಳನ್ನು ಕೇವಲ ಊಹಾಪೋಹದ ವಿಷಯಗಳಂತೆ ಏಕೆ ಚರ್ಚಿಸಬೇಕು, ನಿರಾಕರಿಸಬೇಕು ಮತ್ತು ಸಮರ್ಥಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಅದೊಂದು ಆಧ್ಯಾತ್ಮಿಕ ಸಾಮರ್ಥ್ಯವಾಗಿದ್ದರೆ, ಅದು ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಒಂದು ಶಕ್ತಿಯಾಗಿದೆ; ಅತ್ಯಂತ ದೊಡ್ಡ ಶಕ್ತಿಯು ಪ್ರಾಮಾಣಿಕತೆಯಾಗಿದೆ; ಎಲ್ಲಕ್ಕಿಂತ ದೊಡ್ಡ ಪ್ರಭಾವವು ಕೃಪೆಯಾಗಿದೆ. ಒಬ್ಬ ಮನುಷ್ಯನು ಪ್ರಾಮಾಣಿಕನಾಗಿದ್ದರೆ, ಅವನು ದೀರ್ಘವಾದ ವಿಳಂಬದ ಹೊರತಾಗಿಯೂ ಮತ್ತು ಅಗಾಧ ತೊಂದರೆಗಳ ಹೊರತಾಗಿಯೂ ತನ್ನ ಆಧ್ಯಾತ್ಮಿಕ ಪ್ರಯಾಣವನ್ನು ಮುಂದುವರೆಸುತ್ತಾನೆ ಎಂದು ನಾನು ಲೆಕ್ಕವಿಲ್ಲದಷ್ಟು ಸಲ ಹೇಳಿದ್ದೇನೆ. ನಾನು ದೈವೀ ಅನುಗ್ರಹದ ಬಗ್ಗೆ ಪದೇ ಪದೇ ಹೇಳಿದ್ದೇನೆ. ನಾನು ಗೀತೆಯ ಈ ಕೆಳಗಿನ ಸಾಲಿನ ಬಗ್ಗೆ ಬಹಳಷ್ಟು ಬಾರಿ ಉಲ್ಲೇಖಿಸಿದ್ದೇನೆ:

**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ**

"ನಾನು ನಿನ್ನನ್ನು ಎಲ್ಲ ಪಾಪದಿಂದ ಮತ್ತು ಕೆಡುಕಿನಿಂದ ಬಿಡುಗಡೆ ಮಾಡುತ್ತೇನೆ, ದುಃಖಿಸಬೇಡ."

*

ನಮಗೇನು ಬೇಕೆಂದು ಆ ಪರಮಾತ್ಮನಿಗೆ ಚೆನ್ನಾಗಿ ತಿಳಿದಿದೆ, ಆದ್ದರಿಂದ ನಾವು ಅವನ ಪ್ರಜ್ಞೆಯಲ್ಲಿ(ವಿವೇಕದಲ್ಲಿ) ನಂಬಿಕೆಯನ್ನು ಹೊಂದಿರಬೇಕು ಮತ್ತು ಅವನ ಇಚ್ಛೆಯೊಂದಿಗೆ ತನ್ನನ್ನು ತಾನು ಹೊಂದಿಸಿಕೊಳ್ಳಬೇಕು. ಹಾಗಾಗಲು ಬೇಕಾದ ಕಾಲಾವಧಿಯು ನಮ್ಮ ಅಸಾಮರ್ಥ್ಯತೆಯ ಪುರಾವೆಯಲ್ಲ – ಇದು, ನಮ್ಮಲ್ಲಿ ಪರಮಾತ್ಮನನ್ನು ತಲುಪುವ ಇಚ್ಛೆಯಿದ್ದರೆ ನಮ್ಮಲ್ಲಿರುವ ಕುಂದು–ಕೊರತೆಗಳನ್ನು ಜಯಿಸಿ ಅವನನ್ನು ತಲುಪುವ ಸಂಕೇತ ಮಾತ್ರವಾಗಿದೆ. ಆತ್ಮಹತ್ಯೆಯು ಯಾವುದಕ್ಕೂ ಪರಿಹಾರವಲ್ಲ – ಅದು ಕೆಟ್ಟ ಪರಿಸ್ಥಿತಿಗಳಲ್ಲಿ ಎದುರಿಸಬೇಕಾದ ಅದೇ ತೊಂದರೆಗಳೊಂದಿಗೆ ತಿರುಗಿ ನಮ್ಮನ್ನು ಮತ್ತೆ ಜೀವನಕ್ಕೆ ಮಾತ್ರ ತರುತ್ತದೆ. ನಾವು ಜೀವನದಿಂದ ಸಂಪೂರ್ಣವಾಗಿ ಮುಕ್ತರಾಗಬಯಸಿದರೆ, ಸಂಪೂರ್ಣ ಆಂತರಿಕ ಪರಿತ್ಯಾಗದ ಮೂಲಕ ಮತ್ತು ಆ ಪರಮಾತ್ಮನ ಮೌನದಲ್ಲಿ ತನ್ನನ್ನು ತಾನು ವಿಲೀನಗೊಳಿಸಿಕೊಳ್ಳುವ ಮೂಲಕ ಅಥವಾ ಪರಿಪೂರ್ಣವಾಗುವ ಭಕ್ತಿಯ ಮೂಲಕ ಅಥವಾ ಭಗವಂತನ ಇಚ್ಛೆಗೆ ತನ್ನ ಸ್ವಂತ ಇಚ್ಛೆ ಮತ್ತು ಬಯಕೆಗಳನ್ನು ಬಿಟ್ಟುಕೊಡುವ ಕರ್ಮ ಯೋಗದ ಮೂಲಕ ಮಾತ್ರ ಅದು ಸಾಧ್ಯ.

ಅನುಗ್ರಹವು ಯಾವುದೇ ಕ್ಷಣದಲ್ಲಿ ಇದ್ದಕ್ಕಿದ್ದಂತೆ ತನ್ನ ಕಾರ್ಯ ಮಾಡಬಹುದೆಂದು ಸಹ ನಾನು ಹೇಳಿದ್ದೇನೆ, ಆದರೆ ಅದರ ಮೇಲೆ ನಮಗೆ ನಿಯಂತ್ರಣವಿಲ್ಲ, ಏಕೆಂದರೆ ಅದು ಮನಸ್ಸು ನೋಡಲಾಗದ ವಿಷಯಗಳನ್ನು ಕಾಣುವಂಥ ಗಣನಾತೀತ ಇಚ್ಛೆಯಿಂದ ಬರುತ್ತದೆ. ನಾವು ಎಂದಿಗೂ ಹತಾಶರಾಗದಿರಲು ಇದು ನಿಖರವಾದ ಕಾರಣವಾಗಿದೆ – ಮತ್ತು ಕೊನೆಯಲ್ಲಿ, ಪರಮಾತ್ಮನಿಗೆ ನಮ್ಮಲ್ಲಿರುವ ಪ್ರಾಮಾಣಿಕ ಹಂಬಲವು ಸಹ ವಿಫಲವಾಗಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/172–74**

## ದೈವತ್ವದಲ್ಲಿ ವಿಶ್ವಾಸ

ಈ ಎಲ್ಲಾ ವಿಷಯಗಳನ್ನು (ಆಂತರಿಕ ಅಡಚಣೆಗಳನ್ನು) ಸದ್ದಿಲ್ಲದೆ ಮತ್ತು ದೃಢವಾಗಿ ಸಾಧನೆಯ ಶ್ರಮದಲ್ಲಿ ಎದುರಿಸು. ದೇವನ ಅನುಗ್ರಹದಲ್ಲಿ ದೃಢವಾದ ನಂಬಿಕೆಯಿರಿಸು ಮತ್ತು ದೇವನ ಅನುಗ್ರಹವು ನಿನ್ನನ್ನು ಜಯಶಾಲಿಯನ್ನಾಗಿ ಮಾಡುತ್ತದೆ.

*

ದೈವೀ ಅನುಗ್ರಹದ ಋಣವನ್ನು ತೀರಿಸಲು ಇರುವ ಉತ್ತಮ ಮಾರ್ಗವೆಂದರೆ ನಿಮ್ಮಲ್ಲಿ ದೈವೀ ಅನುಗ್ರಹವು ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡುವುದು, ಅದನ್ನು ಎಂದಿಗೂ ವಿರೋಧಿಸಬಾರದು, ಎಂದಿಗೂ ಕೃತಘ್ನರಾಗಿರಬಾರದು ಮತ್ತು ಅದರ ವಿರುದ್ಧ ತಿರುಗಿ ಬೀಳಬಾರದು – ಆದರೆ ಅದನ್ನು ಬೆಳಕಿನ ಹಾಗೂ ಶಾಂತಿಯ ಮತ್ತು ಏಕತೆಯ ಹಾಗೂ ಆನಂದದ ಗುರಿಯೆಡೆಗೆ ಯಾವಾಗಲೂ ಅನುಸರಿಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/174**

ಯಾವುದೇ ಸಂದರ್ಭ ಅಥವಾ ಘಟನೆಯು ಕುಂದಿಸಲು ಸಾಧ್ಯವಿಲ್ಲದ ನಿರಂತರ ನಂಬಿಕೆ ನಮ್ಮಲ್ಲಿರಬೇಕು. ಒಂದೊಮ್ಮೆ ತೊಂದರೆಗಳು ಸಂಭವಿಸಿದಲ್ಲಿ, ಅವುಗಳು ಮಾನಸಿಕ ಸಂದೇಹಗಳನ್ನು ಅಥವಾ ನಿಶ್ಚಲ ಮೌನ ಸಮ್ಮತಿಯನ್ನು ಹುಟ್ಟುಹಾಕುವುದಿಲ್ಲ, ಆದರೆ ಪ್ರಾಮಾಣಿಕವಾದ ಸಮರ್ಪಣೆಯೊಂದಿಗೆ, ದೈವೀ ಶಕ್ತಿಯು ತೊಂದರೆಗಳನ್ನು ನಿವಾರಿಸುತ್ತದೆ ಎಂಬ ದೃಢವಾದ ನಂಬಿಕೆ, ಮತ್ತು ಈ ನಂಬಿಕೆಯೊಂದಿಗೆ ಅವಳಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕು ಮತ್ತು ಆ ಉದ್ದೇಶಕ್ಕಾಗಿ ಅವಳ ಅಧೀನವಾಗಬೇಕು. ಪೂರ್ಣ ನಂಬಿಕೆ ಮತ್ತು ಸಮರ್ಪಣೆ ಇದ್ದಾಗ, ನಾವು ಸರಿಯಾದ ಕೆಲಸವನ್ನು ಮಾಡುವಂತೆ ಹಾಗೂ ಸರಿಯಾದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವಂತೆ ಒಂದು ಗ್ರಹಣಶಕ್ತಿಯೂ ಕೂಡ ಬರುತ್ತದೆ, ನಂತರ ಸಂದರ್ಭಗಳು ತಮ್ಮಷ್ಟಕ್ಕೆ ತಾವು ಹೊಂದಿಕೊಳ್ಳಲು ಪ್ರಾರಂಭಿಸುತ್ತವೆ ಮತ್ತು ಫಲಿತಾಂಶವು ಗೋಚರಿಸುತ್ತದೆ.

ಈ ಸ್ಥಿತಿಯನ್ನು ತಲುಪಲು ಪ್ರಮುಖ ಕಾರಣವೇನೆಂದರೆ ನಿರಂತರವಾದ ಹಂಬಲ, ಕರೆ ಮತ್ತು ಸ್ವಯಂ–ಸಮರ್ಪಣೆ, ಮತ್ತು ಈ ಮಾರ್ಗದಲ್ಲಿ ನಿಲ್ಲುವಂಥ ತನ್ನಲ್ಲಿಯ ಅಥವಾ ತನ್ನ ಸುತ್ತಲಿನ ಎಲ್ಲವನ್ನೂ ತಿರಸ್ಕರಿಸುವ ಇಚ್ಛೆ. ಆರಂಭದಲ್ಲಿ ಮತ್ತು ಬದಲಾವಣೆಗೆ ಅಗತ್ಯವಿರುವಷ್ಟು ಸಮಯದವರೆಗೆ ತೊಂದರೆಗಳು ಯಾವಾಗಲೂ ಇರುತ್ತವೆ; ಆದರೆ ಸ್ಥಿರವಾದ ನಂಬಿಕೆ, ಇಚ್ಛೆ ಮತ್ತು ತಾಳ್ಮೆಯಿಂದ ಅವುಗಳನ್ನು ಇಲ್ಲದಂತೆ ಮಾಡಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/234**

## ದೈವೀ ಅನುಗ್ರಹ ಮತ್ತು ಮಾರ್ಗದರ್ಶನ

ನಾನು ದೈವೀ ಅನುಗ್ರಹದ ಬಗ್ಗೆ ಕೊಂಚ ಹೇಳಲು ಬಯಸುತ್ತೇನೆ – ಏಕೆಂದರೆ ಇದು ಮಾನವ ಬುದ್ಧಿವಂತಿಕೆಗಿಂತ ಹೆಚ್ಚು ಭಿನ್ನವಿರದ ಮಾರ್ಗದ ಮೇಲೆ ಕಾರ್ಯನಿರ್ವಹಿಸುವ ದೈವೀ ಕಾರಣದಂತೆಯೇ ಇರಬೇಕೆಂದು ನೀವು ಭಾವಿಸುತ್ತೀರಿ. ಆದರೆ ಅದು ಹಾಗಲ್ಲ. ಅಲ್ಲದೆ, ಅದನ್ನು ಸಮೀಪಿಸುವ ಎಲ್ಲರ ಮೇಲೆ ನಿಷ್ಪಕ್ಷಪಾತವಾಗಿ ವರ್ತಿಸುವ ಮತ್ತು ಎಲ್ಲ ಪ್ರಾರ್ಥನೆಗಳಿಗೆ ಒಪ್ಪಿಕೊಳ್ಳುವ ಸರ್ವವ್ಯಾಪಿ ದೈವೀ ಸಹಾನುಭೂತಿಯೂ ಸಹ ಅಲ್ಲ. ಅದು ನೀತಿವಂತರನ್ನು ಆಯ್ಕೆ ಮಾಡುವುದಿಲ್ಲ ಮತ್ತು ಪಾಪಿಯನ್ನು ತಿರಸ್ಕರಿಸುವುದಿಲ್ಲ. ಕಿರುಕುಳ ನೀಡುವವರಿಗೂ ಸಹಾಯ ಮಾಡಲು ದೈವೀ ಅನುಗ್ರಹವಾಯಿತು (ತಾರ್ಸಸ್ ಸಾಲ್ – Saul of Tarusu), ಈ ಅನುಗ್ರಹವು ಸೇಂಟ್ ಅಗಸ್ಟೀನ್ ಎಂಬ ದುಷ್ಕರ್ಮಿಗೆ, ಕುಖ್ಯಾತಿಯ ಜಗೈ ಮತ್ತು ಮಧೈಗೆ ಬಂದಿತು, ಬಿಲ್ವಮಂಗಲನಿಗೆ ಮತ್ತು ಮತಾಂತರವು ಮಾನವ ನೈತಿಕ ಬುದ್ಧಿಮತ್ತೆಯ ಪರಿಶುದ್ಧತೆಯನ್ನು ಅಪಮಾನಗೊಳಿಸುವ ಇತರ ಅನೇಕರಿಗೂ ಬಂದಿತು; ಆದರೆ ಇದು ನೀತಿವಂತರಿಗೂ ಸಹ ಬರಬಹುದು – ಅವರ ಸ್ವಯಂ–ಸದಾಚಾರದಿಂದ ಅವರನ್ನು ಗುಣಪಡಿಸುವುದು ಮತ್ತು ಈ ವಿಷಯಗಳನ್ನು ಮೀರಿದ ಶುದ್ಧ ಪ್ರಜ್ಞೆಯೆಡೆಗೆ ನಿರ್ದೇಶಿಸುವುದು. ಇದು ಯಾವುದೇ ನಿಯಮಕ್ಕಿಂತ ಶ್ರೇಷ್ಠವಾದ ಶಕ್ತಿಯಾಗಿದೆ, ವಿಶ್ವ–ನಿಯಮಕ್ಕಿಂತಲೂ ಸಹ ಶ್ರೇಷ್ಠವಾದ ಶಕ್ತಿಯಾಗಿದೆ – ಎಲ್ಲಾ ಆಧ್ಯಾತ್ಮಿಕ ಋಷಿಗಳು ನಿಯಮ ಮತ್ತು ಅನುಗ್ರಹದ ನಡುವಿನ ವ್ಯತ್ಯಾಸವನ್ನು ಕಂಡುಕೊಂಡಿದ್ದಾರೆ. ಆದರೂ ಅದು ವಿವೇಚನಾರಹಿತವಲ್ಲ – ಅದು ವಸ್ತುಗಳನ್ನು, ವ್ಯಕ್ತಿಗಳನ್ನು, ಸರಿಯಾದ ಸಮಯ ಮತ್ತು ಋತುಗಳನ್ನು ಮನಸ್ಸಿಗಿಂತ ಅಥವಾ ಇತರೆ ಯಾವುದೇ ಸಾಮಾನ್ಯ ಶಕ್ತಿಗಿಂತ ಭಿನ್ನವಾದ ದೂರದೃಷ್ಟಿಯೊಂದಿಗೆ ನೋಡುವಂಥ ತನ್ನದೇ ಆದ ವಿವೇಚನೆಯನ್ನು ಹೊಂದಿದೆ. ಅನೇಕ ವೇಳೆ, ದಟ್ಟವಾದ ಮುಸುಕುಗಳ ಹಿಂದೆ ಮನಸ್ಸಿನಿಂದ ಗಣನಾತೀತವಾದ ವಿಧಾನದಿಂದ ವ್ಯಕ್ತಿಯಲ್ಲಿ ಅನುಗ್ರಹದ ಸ್ಥಿತಿಯನ್ನು ತಯಾರಿಸಲಾಗುತ್ತದೆ ಮತ್ತು ಅನುಗ್ರಹದ ಸ್ಥಿತಿಯು ಬಂದಾಗ ಅನುಗ್ರಹವು ಸ್ವತಃ ಕಾರ್ಯರೂಪಕ್ಕಿಳಿಯುತ್ತದೆ. ಈ ಮೂರು ಸಾಮರ್ಥ್ಯಗಳು ಅಲ್ಲಿವೆ:

1) ಕರ್ಮದ ಬ್ರಹ್ಮಾಂಡ ನಿಯಮ

2) ದೈವೀ ಸಹಾನುಭೂತಿಯು ನಿಯಮದ ಜಾಲಗಳ ಮೂಲಕ ತಲುಪಬಹುದಾದಷ್ಟು ಅನೇಕರ ಮೇಲೆ ಕಾರ್ಯನಿರ್ವಹಿಸುತ್ತಲಿರುತ್ತದೆ ಮತ್ತು ಅವರಿಗೆ ಅವಕಾಶವನ್ನು ನೀಡುತ್ತಿರುತ್ತದೆ; ಮತ್ತು

3) ಅಗಣಿತವಾಗಿ, ಆದರೆ ಇತರರಿಗಿಂತ ಹೆಚ್ಚು ಎದುರಿಸಲಾಗದ ರೀತಿಯಲ್ಲಿ ಕಾರ್ಯನಿರ್ವಹಿಸುವಂಥ ದೈವೀ ಅನುಗ್ರಹ. ಜೀವನದ ಎಲ್ಲ ವೈಪರೀತ್ಯಗಳ ಹಿಂದೆ ಕರೆಗೆ ಸ್ಪಂದಿಸುವ ಮತ್ತು ದೈವೀ ಕೃಪೆಯ ಪ್ರಕಾಶಕ್ಕೆ ಸಿದ್ಧವಾಗುವವರೆಗೆ ಎಂತಹ ಕಷ್ಟದಲ್ಲೂ ತನ್ನನ್ನು ತಾನು ತೆರೆದುಕೊಳ್ಳುವ ಏನಾದರೂ ಇದೆಯೇ ಎಂಬುದೊಂದು ಪ್ರಶ್ನೆ – ಆ ಏನಾದರೊಂದು ಮಾನಸಿಕ ಮತ್ತು ಪ್ರಾಣಿಕ ಕ್ರಿಯೆಯಾಗಿರಬಾರದು ಆದರೆ ಅಂತರಂಗದ ಚಕ್ಷುವಿನಿಂದ ಚನ್ನಾಗಿ ನೋಡಬಲ್ಲಂಥ ಆಂತರಂಗದ್ದಾಗಿರಬೇಕು. ಅದು ಅಲ್ಲಿದ್ದರೆ ಮತ್ತು ಅದು ಮುನ್ನೆಲೆಯಲ್ಲಿ ಸಕ್ರಿಯವಾದಾಗ ಸಹಾನುಭೂತಿಯು ಕಾರ್ಯನಿರ್ವಹಿಸಬಹುದು, ಆದರೂ ಅನುಗ್ರಹದ ಸಂಪೂರ್ಣ ಕ್ರಿಯೆಯು ನಿರ್ಣಾಯಕ ನಿರ್ಧಾರವನ್ನು ಅಥವಾ ಬದಲಾವಣೆಯನ್ನು ಬೆಳಕಿಗೆ ತರಲು ಸಮಯ ಬೇಕಾಗಬಹುದು; ಇದು ಭವಿಷ್ಯದ ಘಳಿಗೆಗೆ ಮುಂದೂಡಬಹುದು, ಏಕೆಂದರೆ ಸ್ವೀಕರಿಸಲು ಇನ್ನೂ ಸಿದ್ಧವಾಗಿಲ್ಲದ ಪುರುಷನ ಕೆಲ ಭಾಗ ಅಥವಾ ಅಂಶವು ಮಧ್ಯೆ (ಅಡಚಣೆಯಾಗಿ) ಬರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/167–69**

## ದೈವೀ ಮಧ್ಯಸ್ಥಿಕೆ

"ದೈವೀ ಕ್ರಿಯೆಯು ಸಾಮಾನ್ಯ ಸನ್ನಿವೇಶಗಳ ನಿಜವಾದ ನಿಯಮದೊಳಗಡೆ ನಿರಂತರ ಮಧ್ಯಸ್ಥಿಕೆಯಾಗಿದೆ" – ಆ ಕ್ರಿಯೆ ಇರಬಹುದು ಅಥವಾ ಇಲ್ಲದಿರಬಹುದು, ಆದರೆ ಸಾಮಾನ್ಯವಾಗಿ ಅದನ್ನು ದೈವೀ ಕೃಪೆಯೆಂದು ಕರೆಯಲಾಗುವುದಿಲ್ಲ. ದೈವೀ ಅನುಗ್ರಹವು ಅಗಣಿತ ಸಂಗತಿಯಾಗಿದೆ ಮತ್ತು ಬುದ್ಧಿಮತ್ತೆಯು ಒಂದು ಷರತ್ತಾಗಿ ಗೊತ್ತುಪಡಿಸಬಹುದಾದ ಯಾವುದಕ್ಕೂ ಒಳಪಟ್ಟಿಲ್ಲ – ಸಾಮಾನ್ಯವಾಗಿ ಕೆಲವರು ಅದನ್ನು ಅಭೀಪ್ಸೆ/ಆಕಾಂಕ್ಷೆ ಎಂದು ಕರೆಯುತ್ತಾರೆ, ಅತೀಂದ್ರಿಯ ಪುರುಷನ ತೀವ್ರತೆಯು ಅದನ್ನು ಜಾಗೃತಗೊಳಿಸಬಹುದು, ಆದರೂ ಅದು ಕೆಲವೊಮ್ಮೆ ಯಾವುದೇ ಸ್ಪಷ್ಟ ಕಾರಣವಿಲ್ಲದೆ ಕಾರ್ಯನಿರ್ವಹಿಸುತ್ತದೆ.

*

ಪರಮಾತ್ಮನ ಅನುಗ್ರಹವಿಲ್ಲದೆ ಏನನ್ನೂ ಮಾಡಲಾಗುವುದಿಲ್ಲ, ಆದರೆ ಪೂರ್ಣ ಅನುಗ್ರಹವು ಪ್ರಕಟವಾಗಲು ಸಾಧಕನು ತನ್ನನ್ನು ತಾನು ಅದಕ್ಕೆ ಸಿದ್ಧಗೊಳಿಸಿ–ಕೊಳ್ಳಬೇಕು. ಎಲ್ಲವೂ ದೈವೀ ಮಧ್ಯಸ್ಥಿಕೆಯ ಮೇಲೆ ಅವಲಂಬಿತವಾಗಿದ್ದರೆ, ಆಗ ಮನುಷ್ಯನು ಕೇವಲ ಕೈಗೊಂಬೆ ಮಾತ್ರವಾಗುತ್ತಾನೆ ಮತ್ತು ಆಗ ಸಾಧನೆಯು ಅಷ್ಟು ಉಪಯೋಗಕ್ಕೆ ಬಾರದು, ಯಾವುದೇ ಷರತ್ತುಗಳಿರುವುದಿಲ್ಲ, ವಿಷಯಗಳ /ಸಂಗತಿಗಳ ನಿಯಮಗಳಿರುವುದಿಲ್ಲ – ಆದ್ದರಿಂದ ವಿಶ್ವವಿಲ್ಲ, ಆದರೆ ದೇವನು ತನ್ನ ಸಂತೋಷಕ್ಕಾಗಿ ಮಾತ್ರ ಅವುಗಳನ್ನು ಚಲನೆಯಲ್ಲಿಟ್ಟಿರುತ್ತಾನೆ. ಕೊನೆಯಲ್ಲಿ, ಎಲ್ಲವೂ ದೈವೀ ಕಾರ್ಯವೆಂದು ನಿಸ್ಸಂದೇಹವಾಗಿ ಹೇಳಬಹುದು, ಆದರೆ ಅದನ್ನು ವ್ಯಕ್ತಿಗಳ ಮೂಲಕ, ಕಾರ್ಯನಿರ್ವಹಿಸುವ ಶಕ್ತಿಗಳ ಮೂಲಕ ಹೇಳಬಹುದು – ಪ್ರಕೃತಿಯ ಸನ್ನಿವೇಷಗಳಲ್ಲಿ. ಅಲ್ಲಿ ವಿಶೇಷ ದೈವೀ ಮಧ್ಯಸ್ಥಿಕೆ ಇರಬಹುದು ಮತ್ತು ಇರುತ್ತದೆ, ಆದರೆ ಎಲ್ಲವೂ ವಿಶೇಷ ಮಧ್ಯಸ್ಥಿಕೆಯಾಗಿರಲು ಸಾಧ್ಯವಿಲ್ಲ.

*

ದೈವೀ ಅನುಗ್ರಹ ಮತ್ತು ಶಕ್ತಿಯು ಎಲ್ಲವನ್ನೂ ಮಾಡಬಹುದು, ಆದರೆ ಸಾಧಕನ ಸಂಪೂರ್ಣ ಒಪ್ಪಿಗೆಯೊಂದಿಗೆ. ಆ ಪೂರ್ಣ ಸಮ್ಮತಿಯನ್ನು ನೀಡಲು ಕಲಿಯುವುದೇ ಸಾಧನೆಯ ಸಂಪೂರ್ಣ ತಿರುಳಾಗಿದೆ. ಮನಸ್ಸಿನಲ್ಲಿನ ಆಲೋಚನೆಗಳಿಂದಾಗಲಿ, ಅಥವಾ ಪ್ರಾಣಿಕ ಬಯಕೆಗಳಿಂದಾಗಲಿ ಅಥವಾ ಭೌತಿಕ ಪ್ರಜ್ಞೆಯಲ್ಲಿನ ಜಡತ್ವದಿಂದಾಗಲಿ ಇದು ಕೊಂಚ ಸಮಯ ತೆಗೆದುಕೊಳ್ಳಬಹುದು, ಆದರೆ ಈ ಸಂಗತಿಗಳನ್ನು ದೈವೀ ಸಹಾಯದಿಂದ ಅಥವಾ ದೈವೀ ಶಕ್ತಿಯ ಕ್ರಿಯೆಯ ಮೂಲಕ ತೆಗೆದುಹಾಕಬಹುದು.

*

ಸಾಧಕನಿಗೆ ಮೂರು ಮುಖ್ಯ ಸಾಧ್ಯತೆಗಳಿವೆ –

1. ಅನುಗ್ರಹಕ್ಕಾಗಿ ನಿರೀಕ್ಷೆ ಮಾಡುವುದು ಮತ್ತು ಆ ದೇವರ ಮೇಲೆ ಅವಲಂಬಿಸುವುದು.

2. ಪೂರ್ಣ ಅದ್ವೈತರಂತೆ ಮತ್ತು ಬೌದ್ಧರಂತೆ ಎಲ್ಲವನ್ನೂ ತನ್ನ ಸ್ವಂತದ ಮೇಲೆ ಅವಲಂಬಿಸುವುದು.

3. ದೈವೀ ಬಲದ ಸಹಾಯದಿಂದ ಆಕಾಂಕ್ಷೆ, ನಿರಾಕರಣೆ ಇತ್ಯಾದಿಗಳಿಂದ ಮುಂದುವರೆಯುವ ಮಧ್ಯಮಾರ್ಗವನ್ನು ಆರಿಸಿಕೊಳ್ಳುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/170–71**

ಅನುಗ್ರಹದ ಹಿಂತೆಗೆದುಕೊಳ್ಳುವಿಕೆಗೆ ಸಂಬಂಧಿಸಿದಂತೆ, ಕೆಲವರಿಂದ ಅನುಗ್ರಹವು ಹಿಂದೆ ಸರಿಯಬಹುದೆಂದು ಹೇಳಬಹುದು, ಆದರೆ ಅನೇಕರು ಅನುಗ್ರಹದಿಂದ ಹಿಂದೆ ಸರಿಯುವರಿದ್ದಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/174**

ತೊಂದರೆಗಳು ಬಂದಾಗ ಅವುಗಳ ಬಗ್ಗೆ ಚಿಂತಿಸುವುದು ಮನಸ್ಸಿನ ಅಭ್ಯಾಸವಾಗಿದೆ. ತೊಂದರೆಗಳು ಬಂದಾಗ ಶಾಂತವಾಗಿರಲು ಮತ್ತು ಸಮಚಿತ್ತದಿಂದಿರಲು ನಿಮ್ಮ ಮನಸ್ಸನ್ನು ತರಬೇತುಗೊಳಿಸಬೇಕು – ಆ ಕಾರ್ಯವನ್ನು ಮಾಡಲು ನಾವು ದೈವೀ ಶಕ್ತಿಯ ಮೇಲೆ ಅವಲಂಬಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/23 – ಶ್ರೀ ಅರವಿಂದರು**

"ಎಲ್ಲವೂ ಕೆಟ್ಟದ್ದರಿಂದ ಇನ್ನೂ ಕೆಟ್ಟದಕ್ಕೆ ಹೋಗುತ್ತಿದೆ ಎಂದು ತೋರುವ ಕ್ಷಣದಲ್ಲಿ, ನಾವು ಅತೀವ ನಂಬಿಕೆಯನ್ನು ಆ ಪರಮಾತ್ಮನಲ್ಲಿ ಇರಿಸಬೇಕು ಮತ್ತು ಅನುಗ್ರಹವು ನಮ್ಮನ್ನು ಎಂದಿಗೂ ವಿಫಲಗೊಳಿಸುವುದಿಲ್ಲ ಎಂಬ ಸಂಗತಿಯನ್ನು ತಿಳಿದುಕೊಳ್ಳಬೇಕು."

ಪ್ರಾತಃಕಾಲದ ಮುಂಚಿನ ಸಮಯವು ಯಾವಾಗಲೂ ಕತ್ತಲೆಯಾಗಿರುತ್ತವೆ.

ಸ್ವಾತಂತ್ರ್ಯ ಬರುವ ಸ್ವಲ್ಪ ಮುಂಚಿನ ದಾಸ್ಯವೃತ್ತಿಯು ಎಲ್ಲಕ್ಕಿಂತ ನೋವಿನ ಸಂಗತಿಯಾಗಿದೆ.

ಆದರೆ ನಂಬಿಕೆಯಿಂದ ಕೂಡಿದ ಹೃದಯದಲ್ಲಿ ನಿರುತ್ಸಾಹಕ್ಕೆ ಅವಕಾಶವಿಲ್ಲದ ಭರವಸೆಯ ನಿರಂತರ ಜ್ವಾಲೆಯನ್ನು ದಹಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/177**

# ಶ್ರೀಮಾತೆಯವರ ಅಭಿವ್ಯಕ್ತಿಗಳು

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಕಷ್ಟಪಡುವುದು ಹೇಗೆಂದು ತಿಳಿಯಲು**

ಯಾವುದೇ ಸಮಯದಲ್ಲಿ ಅತೀವ ದುಃಖ, ಒಂದು ಗಂಭೀರವಾದ ಸಂದೇಹ ಅಥವಾ ತೀವ್ರವಾದ ನೋವು ನಿಮ್ಮನ್ನು ಆವರಿಸಿದರೆ ಮತ್ತು ನಿಮ್ಮನ್ನು ಹತಾಶೆಗೆ ತಳ್ಳಿದರೆ, ಅಚಲತೆಯನ್ನು ಮತ್ತು ಶಾಂತಿಯನ್ನು ಮರಳಿ ಪಡೆಯಲು ಒಂದು ದೋಷಾತೀತ ಮಾರ್ಗವಿದೆ.

ನಮ್ಮ ಅಸ್ತಿತ್ವದ ಆಳದಲ್ಲಿ ಬೆಳಕೊಂದು ಹೊಳೆಯುತ್ತಿದೆ, ಅದರ ತೇಜಸ್ಸು ಅದರ ಶುದ್ಧತೆಯಿಂದ ಮಾತ್ರ ಸಮೀಕರಿಸಲ್ಪಟ್ಟಿದೆ; ಅದೊಂದು ಬೆಳಕು, ವಸ್ತುವನ್ನು ಜೀವಂತಗೊಳಿಸುವ, ಪೋಷಿಸುವ ಮತ್ತು ಬೆಳಗುವ ವಿಶ್ವವ್ಯಾಪಿ ದೈವತ್ವದ ಜಾಗೃತ ಅಂಶ, ಅವನ ನಿಯಮವನ್ನು ಅನುಸರಿಸಲು ಸಿದ್ಧರಿರುವವರಿಗೆ ಪ್ರಭಲವಾದ ಮತ್ತು ವಿಫಲವಾಗದ ಒಬ್ಬ ಮಾರ್ಗದರ್ಶಕ, ಅವನನ್ನು ನೋಡಲು, ಕೇಳಲು ಮತ್ತು ವಿಧೇಯನಾಗಿರಲು ಬಯಸುವ ಎಲ್ಲರೆಡೆಗೂ ಸಾಂತ್ವನ ಮತ್ತು ಪ್ರೀತಿಯು ಸಹನೆ ತುಂಬಿದ ಒಬ್ಬ ಸಹಾಯಕ. ಅವನೆಡೆಗಿನ ಯಾವುದೇ ಪ್ರಾಮಾಣಿಕವಾದ ಮತ್ತು ಶಾಶ್ವತವಾದ ಆಕಾಂಕ್ಷೆಯು ವ್ಯರ್ಥವಾಗುವುದಿಲ್ಲ; ಯಾವುದೇ ಬಲವಾದ ಮತ್ತು ಗೌರವಾನ್ವಿತವಾದ ನಂಬಿಕೆಯನ್ನು ನಿರಾಶೆಗೊಳಿಸ–ಲಾಗುವುದಿಲ್ಲ, ಯಾವುದೇ ನಿರೀಕ್ಷೆಯನ್ನು ಎಂದಿಗೂ ವಂಚಿಸಲಾಗುವುದಿಲ್ಲ.

ನನ್ನ ಹೃದಯವು ಬಳಲಿದೆ ಮತ್ತು ದುಃಖಿಸಿದೆ, ಅತೀವ ದುಃಖದಡಿಯಲ್ಲಿ ಕುಸಿದು ಹೋಗಿದೆ, ಅತೀವ ನೋವಿನಡಿಯಲ್ಲಿ ಬಹುತೇಕ ಮುಳುಗಿ ಹೋಗಿದೆ.... ಆದರೆ ನಾನು ನಿನ್ನನ್ನು ನೆನೆದಿದ್ದೇನೆ, ಓ ದೈವೀ ಸಾಂತ್ವನಕಾರ, ನಾನು ನಿನ್ನನ್ನು ದೃಢವಾಗಿ ಪ್ರಾರ್ಥಿಸಿದ್ದೇನೆ, ನಿನ್ನ ಬೆರಗುಗೊಳಿಸುವ ವೈಭವಯುತವಾದ ಬೆಳಕು ನನಗೆ ಕಾಣಿಸಿಕೊಂಡಿತು ಮತ್ತು ನನ್ನನ್ನು ಪುನಶ್ಚೇತನಗೊಳಿಸಿತು.

ನಿನ್ನ ತೇಜಸ್ಸಿನ ಕಿರಣಗಳು ನನ್ನ ಇಡೀ ಅಸ್ತಿತ್ವವನ್ನು ಭೇದಿಸಿದಂತೆ ಮತ್ತು ಬೆಳಗಿದಂತೆ, ನಾನು ಅನುಸರಿಸಬೇಕಾದ ಮಾರ್ಗವನ್ನು ಸ್ಪಷ್ಟವಾಗಿ ಗ್ರಹಿಸಿದೆ, ದುಃಖದಿಂದ ಮಾಡಿಕೊಳ್ಳಬಹುದಾದ ಉಪಯೋಗವನ್ನು ಗ್ರಹಿಸಿದೆ; ನನ್ನನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದ ದುಃಖವು ಭೂಮಿಯ ಕ್ಲೇಶದ ಮಂಕಾದ ಪ್ರತಿಬಿಂಬವಾಗಿದೆ, ಈ ಯಾತನೆಯ ಮತ್ತು ನೋವಿನ ಪ್ರಪಾತವಾಗಿದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.

ಯಾತನೆಯನ್ನು ಅನುಭವಿಸಿದವರು ಮಾತ್ರ ಇತರರ ಯಾತನೆಯನ್ನು ಅರ್ಥಮಾಡಿಕೊಳ್ಳಬಲ್ಲರು; ಅದನ್ನು ಅರ್ಥಮಾಡಿಕೊಳ್ಳಿ, ಅದರೊಂದಿಗೆ ಸಂವಹನ ನಡೆಸಿ ಮತ್ತು ಅದನ್ನು ಉಪಶಮನಮಾಡಿ. ನಾನು ಅರ್ಥಮಾಡಿಕೊಂಡಿದ್ದೇನೆ, ಓ ದೈವೀ ಸಾಂತ್ವನಕಾರ, ಉದಾತ್ತ ಸರ್ವನಾಶಕ, ನಮ್ಮ ಎಲ್ಲಾ ತೊಂದರೆಗಳಲ್ಲಿ ನಮ್ಮನ್ನು ಉಳಿಸಿಕೊಳ್ಳಲು, ನಮ್ಮ ಎಲ್ಲಾ ನೋವುಗಳನ್ನು ಶಮನಗೊಳಿಸಲು, ನೀನು ಭೂಮಿಯ ಮತ್ತು ಮನುಷ್ಯನ ಎಲ್ಲಾ ದುಃಖಗಳನ್ನು (ಯಾವುದೇ ವಿನಾಯಿತಿ ಇಲ್ಲದೆ) ತಿಳಿದಿರಬೇಕು ಮತ್ತು ಅನುಭವಿಸಬೇಕು ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ನಿನ್ನ ಆರಾಧಕರೆಂದು ಹೇಳಿಕೊಳ್ಳುವವರಲ್ಲಿ, ಕೆಲವರು ನಿನ್ನನ್ನು ಒಬ್ಬ ಕ್ರೂರ ಚಿತ್ರಹಿಂಸೆಗಾರನೆಂದು, ನಿನ್ನಿಂದ ಸಹಿಸಲ್ಪಡುವ ಅಥವಾ ನಿನ್ನಪೇಕ್ಷೆಯಿಂದ ಸೃಷ್ಟಿಯಾದ ಯಾತನೆಗಳನ್ನು ವೀಕ್ಷಿಸುವ ಒಬ್ಬ ಕಠೋರ ನ್ಯಾಯಮೂರ್ತಿಯೆಂದು ಪರಿಗಣಿಸುವುದು ಹೇಗೆ?

ಇಲ್ಲ, ಈ ನೋವುಗಳು ಭೌತ ವಸ್ತುವಿನ ಅಪರಿಪೂರ್ಣತೆಯಿಂದ ಬಂದಿವೆ ಎಂದು ನಾನು ಈಗ ಗ್ರಹಿಸಿದ್ದೇನೆ, ಈ ಭೌತ ವಸ್ತು ತನ್ನ ಅಸ್ತವ್ಯಸ್ತತೆಯಲ್ಲಿ ಹಾಗೂ ಒರಟುತನದಲ್ಲಿ ನಿನ್ನನ್ನು ಅಭಿವ್ಯಕ್ತಗೊಳಿಸಲು ಅರ್ಹತೆಯನ್ನು ಹೊಂದಿಲ್ಲ; ಅದರಿಂದ ಬಳಲುವ, ಗೋಳಾಡುವ ಮೊದಲ ವ್ಯಕ್ತಿ ನೀನಾಗುವಿ, ಅವ್ಯಸ್ಥಿತವಾದುದನ್ನು ವ್ಯವಸ್ಥಿತವನ್ನಾಗಿ, ಯಾತನೆಯನ್ನು ಸಂತೋಷವನ್ನಾಗಿ, ವೈಷಮ್ಯವನ್ನು ಸಾಮರಸ್ಯವನ್ನಾಗಿ ಬದಲಾಯಿಸಲು ನಿನ್ನ ಉತ್ಕಟ ಬಯಕೆಯಲ್ಲಿ ಶ್ರಮಿಸುವವರಲ್ಲಿ ಮತ್ತು ಪ್ರಯತ್ನಿಸುವವರಲ್ಲಿ ನೀನು ಮೊದಲಿಗನಾಗುವಿ.

ಸಂಕಟವು ಅನಿವಾರ್ಯ ಅಥವಾ ಅಪೇಕ್ಷಣೀಯೂ ಸಹ ಅಲ್ಲ, ಆದರೆ ಅದು ಬಂದಾಗ, ಅದು ನಮಗೆಷ್ಟು ಸಹಾಯಕವಾಗಬಹುದು!

ನಮ್ಮ ಹೃದಯ ಒಡೆದು ಚೂರಾಗುತ್ತದೆ ಎಂದು ನಾವು ಭಾವಿಸಿದಾಗ, ನಮ್ಮೊಳಗಿನ ಆಳವಾದ ಬಾಗಿಲೊಂದು ತೆರೆಯುತ್ತದೆ, ಆಗ ಅದು ಗುಪ್ತ ನಿಧಿಗಳಲ್ಲಿ ಇದುವರೆಗೆ ಸಮೃದ್ಧವಾದ ಹೊಸ ದಿಗಂತಗಳನ್ನು ತೆರೆದಿಡುತ್ತದೆ, ಅದರ ಚಿನ್ನದ ಒಳಹರಿವು ಮತ್ತೊಮ್ಮೆ ವಿನಾಶದ ಅಂಚಿನಲ್ಲಿರುವ ಜೀವಿಗೆ ಹೊಸದಾದ ಜೀವನವನ್ನು ತರುತ್ತದೆ.

ಈ ಸತತ ಅವರೋಹಣಗಳಿಂದ, ಏಳುತ್ತಿರುವ ಪರದೆಯನ್ನು ನಾವು ತಲುಪಿದಾಗ ಅದು ನಿನ್ನನ್ನು ಅಭಿವ್ಯಕ್ತಗೊಳಿಸುತ್ತದೆ, ಓ ಕರ್ತನೇ, ಪೂರ್ಣ

ಜೀವಿಯನ್ನು ಪ್ರವೇಶಿಸುವ ಜೀವನದ ತೀವ್ರತೆಯನ್ನು, ಬೆಳಕಿನ ಪ್ರಭೆಯನ್ನು ತುಂಬಿಸುವುದನ್ನು, ಪ್ರೀತಿಯ ಭವ್ಯತೆಯನ್ನು ಶಾಶ್ವತವಾಗಿ ಪರಿವರ್ತಿಸುವುದನ್ನು ಯಾರು ವಿವರಿಸಬಲ್ಲರು!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/20–21**

**ಈ ಅದ್ಭುತ ದೈವೀ ಪ್ರೀತಿ**

ನಮ್ಮ ಪ್ರಚೋದನೆಗಳು ಮತ್ತು ನಮ್ಮ ಬಯಕೆಗಳು, ನಮ್ಮ ವೇದನೆ ಮತ್ತು ಹಿಂಸೆ, ನಮ್ಮ ಸಂಕಟಗಳು ಮತ್ತು ಹೋರಾಟಗಳು, ನಮ್ಮ ಅಶಿಸ್ತಿನ ಕಲ್ಪನೆಯಿಂದ ಅನಗತ್ಯವಾಗಿ ನಾಟಕೀಯಗೊಳಿಸಲ್ಪಟ್ಟ ಈ ಎಲ್ಲಾ ಆಂತರಿಕ ವಿಪತ್ತುಗಳು ಯಾವ ಮೌಲ್ಯವನ್ನು ಹೊಂದಿವೆ – ನಮ್ಮ ಇರುವಿಕೆಯ ಆಳದಿಂದ ನಮ್ಮನ್ನಾವರಿಸುತ್ತಿರುವ, ನಮ್ಮ ದೌರ್ಬಲ್ಯಗಳನ್ನು ಸಹಿಸಿಕೊಳ್ಳುತ್ತಿರುವ, ನಮ್ಮ ತಪ್ಪುಗಳನ್ನು ಸರಿಪಡಿಸುತ್ತಿರುವ, ನಮ್ಮ ಗಾಯಗಳನ್ನು ಗುಣಪಡಿಸುತ್ತಿರುವ, ಪುನಶ್ಚೇತನಗೊಳಿಸುವ, ತನ್ನ ತೊರೆಯಿಂದ ಶುದ್ಧೀಸ್ನಾನಮಾಡಿಸುತ್ತಿರುವ ಈ ಶ್ರೇಷ್ಠ, ಈ ಉದಾತ್ತ ದೈವೀ ಪ್ರೀತಿಯ ಮುಂದೆ ಅವುಗಳು ಯಾವ ಮೌಲ್ಯವನ್ನು ಹೊಂದಿವೆ?

ನಮ್ಮಲ್ಲಿರುವ ಆಂತರಿಕ ದೈವತ್ವವು ಅವಳಷ್ಟಕ್ಕೆ ಎಂದಿಗೂ ಏನನ್ನೂ (ಷರತ್ತುಗಳನ್ನು/ನಿಯಮಗಳನ್ನು) ವಿಧಿಸುವುದಿಲ್ಲವಾದ್ದರಿಂದ, ಅವಳು ಬೇಡಿಕೆಯನ್ನು ಇರಿಸುವುದಿಲ್ಲ ಅಥವಾ ಹೆದರಿಸುವುದಿಲ್ಲ; ಅವಳು ತನ್ನನ್ನು ತಾನು ಅರ್ಪಣೆ ಮಾಡಿಕೊಳ್ಳುತ್ತಾಳೆ ಮತ್ತು ನೀಡುತ್ತಾಳೆ, ಎಲ್ಲಾ ಜೀವಿಗಳ ಮತ್ತು ವಸ್ತುಗಳ ಹೃದಯದಲ್ಲಿ ತನ್ನನ್ನು ತಾನು ಮರೆಮಾಡಿಕೊಳ್ಳುತ್ತಾಳೆ ಮತ್ತು ಮರೆತುಬಿಡುತ್ತಾಳೆ; ಅವಳು ಎಂದಿಗೂ ದೂಷಿಸುವುದಿಲ್ಲ, ವಿಮರ್ಶಿಸುವುದಿಲ್ಲ ಅಥವಾ ಶಪಿಸುವುದಿಲ್ಲ ಅಥವಾ ಖಂಡಿಸುವುದಿಲ್ಲ, ಆದರೆ ಯಾವುದೇ ನಿರ್ಬಂಧವಿಲ್ಲದೆ ಪರಿಪೂರ್ಣತೆಯನ್ನು ಸಾಧಿಸಲು, ಆಕ್ಷೇಪಣೆಯಿಲ್ಲದೆ ಸರಿಪಡಿಸಲು, ಅಸಹನೆ ಇಲ್ಲದೆ ಪ್ರೋತ್ಸಾಹಿಸಲು, ಪ್ರತಿಯೊಬ್ಬರನ್ನು ಅವನು ಪಡೆಯಬಹುದಾದ ಎಲ್ಲಾ ಸಂಪತ್ತಿನಿಂದ ಶ್ರೀಮಂತಗೊಳಿಸಲು ನಿರಂತರವಾಗಿ ಕೆಲಸ ಮಾಡುತ್ತಾಳೆ; ಆಕೆಯು ಪ್ರೀತಿ ಫಲವನ್ನು ನೀಡುವ, ಪೋಷಿಸುವ, ಕಾಯುವ, ರಕ್ಷಿಸುವ, ಉಪದೇಶಿಸುವ ಮತ್ತು ಸಮಾಧಾನ ಪಡಿಸುವ ತಾಯಿಯಾಗಿದ್ದಾಳೆ; ಅವಳು ಎಲ್ಲವನ್ನೂ ಅರ್ಥಮಾಡಿಕೊಂಡಿರುವುದರಿಂದ, ಅವಳು ಎಲ್ಲವನ್ನೂ ಸಹಿಸಿಕೊಳ್ಳಬಹುದು, ಎಲ್ಲವನ್ನೂ ಕ್ಷಮಿಸಬಹುದು, ಎಲ್ಲದಕ್ಕೂ ನಿರೀಕ್ಷಿಸಬಹುದು

ಮತ್ತು ತಯಾರಿ ಮಾಡಬಹುದು; ಎಲ್ಲವನ್ನೂ ತನ್ನೊಳಗೆ ಸಹಿಸಿಕೊಂಡು, ಎಲ್ಲರಿಗೂ ಸೇರದ ಯಾವುದನ್ನೂ ಅವಳು ಹೊಂದಿಲ್ಲ, ಮತ್ತು ಅವಳು ಎಲ್ಲವನ್ನೂ ಆಳುವ ಕಾರಣ, ಅವಳು ಎಲ್ಲರ ಸೇವಕಿ; ಅದಕ್ಕಾಗಿಯೇ ಅವಳೊಂದಿಗೆ ಪ್ರಭಾವಿಯಾಗಲು ಮತ್ತು ಅವಳಲ್ಲಿ ಅಂತರ್ಯಾಮಿಯಾಗಲು ಬಯಸುವ ದೊಡ್ಡವರು ಹಾಗೂ ಚಿಕ್ಕವರೆಲ್ಲರೂ ಅವಳಂತೆ ನಿರಂಕುಶಾಧಿಕಾರಿ ಆಗದೆ, ತಮ್ಮ ಸಹೋದರರಲ್ಲಿ ಸೇವಕರಾಗಲು ಬಯಸುತ್ತಾರೆ.

ಈ ವಿನಮ್ರ ಸೇವಕನ ಪಾತ್ರ, ಎಲ್ಲರೊಳಗಿರುವ ದೇವರನ್ನು ಬಹಿರಂಗ–ಪಡಿಸುವ ಮತ್ತು ಸಾರುವವರೆಲ್ಲರ ಪಾತ್ರ, ಎಲ್ಲವನ್ನೂ ಚೇತನಗೊಳಿಸುವ ದೈವೀ ಪ್ರೀತಿಯ.... ಎಷ್ಟು ಸುಂದರವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/42–43**

**ಬಳಲಿ ಪರಾಭವ ಹೊಂದಿದವರಿಗಾಗಿ**

ಈಗಾಗಲೇ ತೋರಿಕೆಯ ಫಲಪ್ರದವಲ್ಲದ ಪ್ರಯತ್ನಗಳನ್ನು ಮಾಡಿದವರಿಗೆ, ಸಾಧನೆಯ ಮಾರ್ಗದಲ್ಲಿ ಏಳು–ಬೀಳುಗಳನ್ನು ಎದುರಿಸಿದವರಿಗೆ ಮತ್ತು ಅವರ ದೌರ್ಬಲ್ಯವನ್ನು ಕಂಡುಕೊಂಡವರಿಗೆ, ತಮ್ಮ ಆತ್ಮವಿಶ್ವಾಸ ಮತ್ತು ಧೈರ್ಯವನ್ನು ಕಳೆದುಕೊಳ್ಳುವ ಅಪಾಯದಲ್ಲಿರುವವರಿಗೆ ನಾನು ಕೆಲವು ಪುಟಗಳನ್ನು ಸೇರಿಸುತ್ತೇನೆ. ನರಳುತ್ತಿರುವವರ ಹೃದಯದಲ್ಲಿ ಭರವಸೆಯನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ, ಎಲ್ಲಾ ರೀತಿಯ ಅಗ್ನಿಪರೀಕ್ಷೆಗಳು ಶುದ್ಧೀಕರಿಸುವ ಜ್ವಾಲೆಗಳಂತೆ ಸಾಧಕನ ಮೇಲೆ ಬೀಳುವ ಸಮಯದಲ್ಲಿ ಒಬ್ಬ ಆಧ್ಯಾತ್ಮಿಕ ಸಾಧಕನಿಂದ ಈ ಪುಟಗಳು ಬರೆಯಲ್ಪಟ್ಟವು.

ದಣಿದಿರುವ, ಕುಗ್ಗಿದ ಮತ್ತು ಗಾಯಗೊಂಡ, ಬೀಳುವ, ಬಹುಶಃ ನೀವು ಸೋತಿದ್ದೀರಿ ಎಂದು ಭಾವಿಸುವ ಸ್ನೇಹಿತನ ಧ್ವನಿಯನ್ನು ಕೇಳುತ್ತೀರಿ. ಅವರು ನಿಮ್ಮ ದುಃಖಗಳನ್ನು ಅರಿತುಕೊಂಡಿದ್ದಾರೆ, ಅವನು ಅವುಗಳನ್ನು ಹಂಚಿಕೊಂಡಿದ್ದಾನೆ, ಅವನು ನಿಮ್ಮಂತೆ ಭೂಮಿಯ ಅಸ್ವಸ್ಥೆಯಿಂದ ಬಳಲಿದ್ದಾನೆ; ನಿಮ್ಮಂತೆಯೇ ಅವನು ದಿನದ ಹೊರೆಯ ಅಡಿಯಲ್ಲಿ ಅನೇಕ ಮರುಭೂಮಿಗಳನ್ನು ದಾಟಿದ್ದಾನೆ (ಜೀವನದಲ್ಲಿ ಬರುವ ಕಷ್ಟಗಳನ್ನು ದಾಟುವುದು), ಅವನು ಬಾಯಾರಿಕೆ ಮತ್ತು ಹಸಿವು, ಏಕಾಂತತೆ ಮತ್ತು ಪರಿತ್ಯಾಗವನ್ನು ತಿಳಿದಿದ್ದಾನೆ ಮತ್ತು ಎಲ್ಲ ಬಯಕೆಗಳಲ್ಲಿ ಅತ್ಯಂತ ಕ್ರೂರವಾದ, ಹೃದಯದ ಬಡತನವನ್ನು ತಿಳಿದಿದ್ದಾನೆ.

ಆಯ್ಕೆ ಮಾಡಿಕೊಳ್ಳಬಹುದು! ಅವರು ಅನುಮಾನದ ಘಳಿಗೆಗಳನ್ನು, ದೋಷಗಳನ್ನು, ವೈಫಲ್ಯಗನ್ನು, ಪ್ರತಿಯೊಂದು ದೌರ್ಬಲ್ಯಗಳನ್ನು ಸಹ ತಿಳಿದಿದ್ದಾನೆ.

ಆದರೆ ಅವನು ನಿಮಗೆ ಹೇಳುತ್ತಾನೆ: ಧೈರ್ಯ! ಪ್ರತಿದಿನ ಬೆಳಿಗ್ಗೆ ಉದಯಿಸುವ ಸೂರ್ಯನು ತನ್ನ ಮೊದಲ ಕಿರಣಗಳೊಂದಿಗೆ ಭೂಮಿಗೆ ತರುವ ಪಾಠವನ್ನು ಆಲಿಸಿ. ಇದು ಭರವಸೆಯ ಪಾಠ, ಸಮಾಧಾನದ ಸಂದೇಶ.

ಅಳುವವರು, ನರಳುವವರು ಮತ್ತು ಅದಿರಾಡುವವರು, ನಿಮ್ಮ ಕಾಯಿಲೆಗಳಿಗೆ(ಬೇನೆಗಳಿಗೆ) ಅಂತ್ಯವನ್ನು, ನಿಮ್ಮ ನೋವುಗಳಿಗೆ ಸಮಸ್ಯೆಯನ್ನು ನಿರೀಕ್ಷಿಸುವ ಧೈರ್ಯವಿಲ್ಲದವರು, ಇಗೋ ಇಲ್ಲಿ ನೋಡಿ: ಉದಯಕಾಲವಿಲ್ಲದೆ ರಾತ್ರಿ ಇಲ್ಲ ಮತ್ತು ಕತ್ತಲೆ ಕಳೆದ ಮೇಲೆ ಹಗಲು ಬರಲೇಬೇಕು; ಸೂರ್ಯನು ಚದುರಿಸದ ಮಂಜು ಇಲ್ಲ, ಹೊಳೆಯದ ಮೋಡವಿಲ್ಲ, ಒಂದು ದಿನ ಒಣಗದ ಕಣ್ಣೀರಿಲ್ಲ, ಹೊಳೆಯುವ ವಿಜಯದ ಬಿಲ್ಲನ್ನು ಅನುಸರಿಸದ ಬಿರುಗಾಳಿ ಇಲ್ಲ; ಅದು ಕರಗಿಸದ ಹಿಮವಿಲ್ಲ, ಅಥವಾ ಅದು ಉಜ್ವಲವಾದ ವಸಂತವಾಗಿ ಬದಲಾಗದ ಚಳಿಗಾಲವಿಲ್ಲ.

ಮತ್ತು ನಿನಗೂ ಸಹ, ತನ್ನ ವೈಭವದ ಪರಿಮಾಣವನ್ನು ತರದ ಯಾವುದೇ ಕ್ಲೇಶವಿಲ್ಲ, ಆನಂದವನ್ನಾಗಿ ಪರಿವರ್ತಿಸಲಾಗದ ಯಾವುದೇ ಸಂಕಟವಿಲ್ಲ, ಅಥವಾ ಗೆಲುವನ್ನಾಗಿ ಪರಿವರ್ತಿಸದ ಅಪಜಯವಿಲ್ಲ, ಅಥವಾ ಉನ್ನತ ಆರೋಹಣವನ್ನಾಗಿ ಪರಿವರ್ತಿಸದ ಅವರೋಹಣವಿಲ್ಲ, ಅಥವಾ ಜೀವನದ ಕೇಂದ್ರವಾಗಿ ಹೊರಸೂಸದ ಏಕಾಂತತೆ ಇಲ್ಲ, ಅಥವಾ ಸಾಮರಸ್ಯವನ್ನಾಗಿ ಪರಿವರ್ತಿಸದ ಅಪಶ್ರುತಿ ಇಲ್ಲ – ಕೆಲವೊಮ್ಮೆ ಇದು ಎರಡು ಮನಸ್ಸುಗಳ ನಡುವಿನ ತಪ್ಪು ತಿಳುವಳಿಕೆಯಾಗಿದ್ದು ಅದು ಎರಡು ಹೃದಯಗಳನ್ನು ಪರಸ್ಪರ ಬಾಂಧವ್ಯಕ್ಕೆ ತೆರೆದುಕೊಳ್ಳಲು ಒತ್ತಾಯಿಸುತ್ತದೆ; ಕೊನೆಯದಾಗಿ, ಶಕ್ತಿಯನ್ನಾಗಿ ಬದಲಾಯಿಸಲಾಗದ ಅನಂತ ದೌರ್ಬಲ್ಯವಿಲ್ಲ. ಮತ್ತು ಪರಮ ದೌರ್ಬಲ್ಯದಲ್ಲಿಯೂ ಸಹ ಸರ್ವಶಕ್ತತೆಯು ತನ್ನನ್ನು ತಾನು ಬಹಿರಂಗಪಡಿಸಲು ಆರಿಸಿಕೊಳ್ಳುತ್ತದೆ!

ನನ್ನ ಪುಟ್ಟ ಮಗುವೆ ಕೇಳು, ಇಂದು ತುಂಬಾ ಕುಗ್ಗಿದ ಭಾವನೆ ಹೊಂದಿದ ನೀನು, ಬಹುಶಃ ತುಂಬಾ ಕುಸಿತದ ಭಾವನೆ ಹೊಂದಿದ ನೀನು, ಏನೂ ಹೊಂದಿರದ ನೀನು, ನಿನ್ನ ದುಃಖವನ್ನು ಮರೆಮಾಚಲು ಮತ್ತು ನಿನ್ನ ಹೆಮ್ಮೆಯನ್ನು ಪೋಷಿಸಲು ಏನೂ ಇಲ್ಲದ ನೀನು: ನೀನು ಹಿಂದೆಂದೂ ಇಷ್ಟು

ಶ್ರೇಷ್ಠನಾಗಿರಲಿಲ್ಲವೆ! ಆಳದಲ್ಲಿ ಎಚ್ಚರಗೊಳ್ಳುವವನು ಶೃಂಗಗಳಿಗೆ ಎಷ್ಟು ಹತ್ತಿರವಾಗಿದ್ದಾನೆ, ಪ್ರಪಾತವು ಆಳವಿದ್ದಷ್ಟು ಶೃಂಗಗಳು ಹೆಚ್ಚು ತಮ್ಮನ್ನು ತಾವು ತೋರ್ಪಡಿಸಿಕೊಳ್ಳುತ್ತವೆ!

ಓಹ್, ಅತ್ಯಂತ ಅಸ್ಪಷ್ಟವಾದ ನಮ್ರತೆಯೊಂದಿಗೆ ಸರ್ವೋತ್ತಮ ಪ್ರೀತಿಯ, ರಾಜವೈಭವದ ಪ್ರಕಾಶದೊಂದಿಗೆ ಹಂಬಲಿಸುವ ನೆರಳಿನ ಉದಾತ್ತ (ವಿವಾಹ) ಬಾಂಧವ್ಯಗಳೆ! ಅನಂತದ ಅತ್ಯಂತ ಮಹೋನ್ನತವಾದ ಶಕ್ತಿಗಳು ಭೌತ ವಸ್ತುವಿನ ಅಪಾರದರ್ಶಕವಾದ ಮುಸುಕುಗಳಲ್ಲಿ ತಮ್ಮನ್ನು ತಾವು ಜೋಡಿಸಿಕೊಳ್ಳಲು ಬಯಸುತ್ತವೆ ಎನ್ನುವುದು ನಿಮಗೆ ತಿಳಿದಿಲ್ಲವೆ?

**ಅಗ್ನಿಪರೀಕ್ಷೆ ಅಥವಾ ದೋಷವು ನಿಮ್ಮನ್ನು ಎದೆಗುಂದಿಸಿದ್ದರೆ**

ಅಗ್ನಿಪರೀಕ್ಷೆ ಅಥವಾ ದೋಷವು ನಿಮ್ಮನ್ನು ಎದೆಗುಂದಿಸಿದ್ದರೆ, ನೀವು ದುಃಖದ ಆಳದಲ್ಲಿ ಮುಳುಗಿದ್ದರೆ, ದುಃಖಿಸಬೇಡಿ – ಏಕೆಂದರೆ, ಅಲ್ಲಿ ದೈವೀ ಪ್ರೀತಿ ಮತ್ತು ಅತ್ಯುಚ್ಚ ಆಶೀರ್ವಾದವು ನಿಮ್ಮನ್ನು ತಲುಪಬಹುದು! ನೀವು ದುಃಖಗಳನ್ನು ಶುದ್ಧೀಕರಿಸುವ ಅಗ್ನಿ ಪರೀಕ್ಷೆಗಳ ಮೂಲಕ ಹಾದುಹೋದ ಕಾರಣ, ಅದ್ಭುತವಾದ ಆರೋಹಣಗಳು ನಿಮ್ಮದಾಗಿದೆ.

ನೀವು ನಿರ್ಜನ ಪ್ರದೇಶದಲ್ಲಿದ್ದೀರಿ: ಅಲ್ಲಿ ಮೌನದ ಧ್ವನಿಗಳನ್ನಾಲಿಸಿ. ಹೊಗಳಿಕೆಯ ಮಾತುಗಳ ಮತ್ತು ಹೊರಗಿನ ಚಪ್ಪಾಳೆಗಳ ಗದ್ದಲ ನಿಮ್ಮ ಕಿವಿಗಳನ್ನು ಸಂತೋಷಪಡಿಸಿವೆ, ಆದರೆ ಮೌನದ ಧ್ವನಿಗಳು ನಿಮ್ಮ ಆತ್ಮವನ್ನು ಸಂತೋಷಪಡಿಸುತ್ತವೆ ಮತ್ತು ನಿಮ್ಮೊಳಗೆ ಆಳದ ಪ್ರತಿಧ್ವನಿಯನ್ನು, ದೈವೀ ಸಾಮರಸ್ಯಗಳ ಪಠಣವನ್ನು ಜಾಗೃತಗೊಳಿಸುತ್ತವೆ!

ರಾತ್ರಿಯ ನೀರವ ಮೌನದಲ್ಲಿ ನೀವು ನಡೆಯುತ್ತಿದ್ದೀರಿ: ಆಗ ಆ ರಾತ್ರಿಯ ಅಮೂಲ್ಯವಾದ ಸಂಪತ್ತನ್ನು ಸಂಗ್ರಹಿಸಿ. ಪ್ರಕಾಶಮಾನವಾದ ಸೂರ್ಯನ ಬೆಳಕಿನಲ್ಲಿ, ಬುದ್ಧಿವಂತಿಕೆಯ ಮಾರ್ಗಗಳು ತೆರೆದುಕೊಳ್ಳುತ್ತವೆ, ಆದರೆ ರಾತ್ರಿಯ ಶ್ವೇತ ಹೊಳಪುಗಳಲ್ಲಿ ಪರಿಪೂರ್ಣತೆಯ ಗುಪ್ತ ಮಾರ್ಗಗಳು, ಆಧ್ಯಾತ್ಮಿಕ ಸಂಪತ್ತಿನ ರಹಸ್ಯವು ನೆಲೆಸಿರುತ್ತವೆ. ನಿಮ್ಮಿಂದ ಎಲ್ಲವನ್ನೂ ಕಸಿದುಕೊಳ್ಳಲಾಗುತ್ತದೆ: ಅದು ಸಮಗ್ರತೆಯ/ಪೂರ್ಣತೆಯ ಕಡೆಗೆ ದಾರಿ. ನಿಮ್ಮಲ್ಲಿ ಏನೂ ಉಳಿದಿಲ್ಲದಿದ್ದಾಗ, ಎಲ್ಲವನ್ನೂ ನಿಮಗೆ ನೀಡಲಾಗುವುದು. ಏಕೆಂದರೆ ಪ್ರಾಮಾಣಿಕರಾದವರಿಗೆ ಮತ್ತು ಸತ್ಯವಂತರಿಗೆ, ಕೆಟ್ಟದರಿಂದ ಉತ್ತಮವು ಯಾವಾಗಲೂ ಬರುತ್ತದೆ.

ಭೂಮಿಯಲ್ಲಿ ಬಿತ್ತಿದ ಪ್ರತಿಯೊಂದು ಧಾನ್ಯವು ಸಾವಿರದಷ್ಟು ಹೆಚ್ಚು ಉತ್ಪಾದಿಸುತ್ತದೆ. ದುಃಖದ ಪ್ರತಿಯೊಂದು ರೆಕ್ಕೆ–ಬಡಿತವೂ ವೈಭವದ ಕಡೆಗೆ ಕರೆದೊಯ್ಯಬಹುದು. ಮತ್ತು ಎದುರಾಳಿಯು ಪಟ್ಟುಬಿಡದೆ ಮನುಷ್ಯನನ್ನು ಹಿಂಬಾಲಿಸಿದಾಗ, ಅವನನ್ನು ನಾಶಮಾಡಲು ಅವನು ಮಾಡುವ ಎಲ್ಲವೂ ಅವನನ್ನು ದೊಡ್ಡವನನ್ನಾಗಿ ಮಾಡುತ್ತದೆ.

ಲೋಕಗಳ ಕಥೆಯನ್ನು ಕೇಳು, ನೋಡು: ಮಹಾ ಶತ್ರು ಜಯಶಾಲಿ–ಯಾಗುತ್ತಾನೆಂದು ತೋರುತ್ತದೆ. ಅವನು ಬೆಳಕಿನ ಜೀವಿಗಳನ್ನು ರಾತ್ರಿಯಲ್ಲಿ ಹೊಯ್ಯುತ್ತಾನೆ ಮತ್ತು ರಾತ್ರಿಯು ನಕ್ಷತ್ರಗಳಿಂದ ತುಂಬುತ್ತದೆ. ಅವನು ಬ್ರಹ್ಮಾಂಡ ಕಾರ್ಯದ ವಿರುದ್ಧ ಸಿಡಿದೇಳುತ್ತಾನೆ, ಅವನು ಕಾರ್ಯಕ್ಷೇತ್ರದ (ಪ್ರಪಂಚದ) ಸಾಮ್ರಾಜ್ಯದ ಸಮಗ್ರತೆಯನ್ನು ಆಕ್ರಮಿಸುತ್ತಾನೆ, ಅದರ ಸಾಮರಸ್ಯವನ್ನು ಛಿದ್ರಗೊಳಿಸುತ್ತಾನೆ, ಅದನ್ನು ವಿಭಜಿಸುತ್ತಾನೆ ಮತ್ತು ಉಪವಿಂಗಡಿಸುತ್ತಾನೆ, ಅದರ ಧೂಳನ್ನು ಅನಂತತೆಯ ನಾಲ್ಕೂ ಮುನ್ಸೂಚಕಗಳಿಗೆ ಹರಡುತ್ತಾನೆ, ಮತ್ತು ಇಗೋ! ಧೂಳನ್ನು ಚಿನ್ನದ ಬೀಜವನ್ನಾಗಿ ಬದಲಾಯಿಸಲಾಗುತ್ತದೆ, ಅನಂತವನ್ನು ಫಲವತ್ತಾಗಿಸುವುದು ಮತ್ತು ಆಕಾಶದ ವಿಶಾಲ ಕಕ್ಷೆಯಲ್ಲಿ ತನ್ನ ಶಾಶ್ವತ ಕೇಂದ್ರದ ಸುತ್ತ ಈಗ ಆಕರ್ಷಿತವಾಗಿರುವ ಪ್ರಪಂಚಗಳಿಂದ ಅನಂತವನ್ನು ಸ್ಥಾಪನೆ ಮಾಡುವುದು – ಅದರಿಂದ ವಿಭಜನೆಯು ಶ್ರೀಮಂತವಾದ ಮತ್ತು ಗಾಢವಾದ ಏಕತೆಯನ್ನು ಸೃಷ್ಟಿಸುತ್ತದೆ ಮತ್ತು ಭೌತಿಕ ಬ್ರಹ್ಮಾಂಡದ ಮೇಲ್ಮೈಗಳನ್ನು ಅಧಿಕಗೊಳಿಸುವ ಮೂಲಕ, ಅದು ನಾಶಮಾಡಲು ಹೊರಟ ಸಾಮ್ರಾಜ್ಯವನ್ನು ವಿಸ್ತರಿಸುತ್ತದೆ.

ಅಗಾಧತೆಯ ಎದೆಯಲ್ಲಿ ತೂಗಿದ ಆದಿಸ್ವರೂಪದ ಪ್ರಪಂಚದ ಜೋಗುಳ ಹಾಡು ನಿಜವಾಗಿಯೂ ಸುಂದರವಾಗಿತ್ತು, ಆದರೆ ನಕ್ಷತ್ರ ಪುಂಜಗಳ ಸ್ವರಮೇಳ, ಪ್ರಪಂಚಗಳ ಸಂಗೀತ, ಸ್ವರ್ಗಗಳನ್ನು ಅನಂತ ಸ್ತೋತ್ರದಿಂದ ತುಂಬುವ ಅಗಾಧ ವಾದ್ಯಮೇಳ ಎಷ್ಟು ಸುಂದರವಾಗಿದೆ ಹಾಗೂ ಹರ್ಷದಾಯಕವಾಗಿದೆ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/43–46**

**ಮೌನವಾಗಿ ಮತ್ತು ಶಾಂತಯುತವಾಗಿರಲು ಉತ್ತಮ ಸಾಧನ**

ವಾಸ್ತವದಲ್ಲಿ, ಕೇವಲ ಸ್ವಯಂ ಕಾರಣಕ್ಕಾಗಿ, ಒಳ್ಳೆಯದನ್ನು ಮಾಡಲು, ನ್ಯಾಯಯುತವಾಗಿರಲು, ನೇರವಾಗಿರಲು(ನಡೆ–ನುಡಿ), ಪ್ರಾಮಾಣಿಕವಾಗಿರಲು

ಮೌನವಾಗಿ ಮತ್ತು ಶಾಂತಿಯುತವಾಗಿರುವುದು, ನಮ್ಮ ಆತಂಕವನ್ನು ಕಡಿಮೆ ಮಾಡಲು ಉತ್ತಮ ಸಾಧನವಾಗಿದೆ. ಅಲ್ಲದೆ, ನಾವು ಆಸಕ್ತಿ ಹೊಂದಿಲ್ಲದಿದ್ದರೆ, ವೈಯಕ್ತಿಕ ಆಕಾಂಕ್ಷೆಗಳಿಂದ ಮತ್ತು ಅಹಂಕಾರದಿಂದ ಮುಕ್ತನಾಗಿದ್ದರೆ, ಆಗ ನಾವು ನಿಜವಾಗಿಯೂ ಸಂತೋಷವಾಗಿರಲು ಸಾಧ್ಯವಾಗುತ್ತದೆ.

ನೀವು ನಿಮ್ಮೊಂದಿಗೆ, ನಿಮ್ಮ ಸುತ್ತ–ಮುತ್ತ, ನಿಮ್ಮಲ್ಲಿ, ನಿಮ್ಮ ಕ್ರಿಯೆಗಳಿಂದ ರಚಿತವಾದ ವಾತಾವರಣವನ್ನು ಒಯ್ಯುತ್ತೀರಿ, ಮತ್ತು ನೀವು ಮಾಡುತ್ತಿರುವುದು ಸುಂದರವಾಗಿದ್ದರೆ, ಒಳ್ಳೆಯದಾಗಿದ್ದರೆ, ಸಾಮರಸ್ಯಪೂರ್ಣವಾಗಿದ್ದರೆ, ನಿಮ್ಮ ವಾತಾವರಣವು ಸುಂದರವಾಗಿರುತ್ತದೆ, ಉತ್ತಮವಾಗಿರುತ್ತದೆ ಮತ್ತು ಸಾಮರಸ್ಯದಿಂದ ಕೂಡಿರುತ್ತದೆ; ಮತ್ತೊಂದೆಡೆ, ನೀವು ಮಲಿನವಾದ ಸ್ವಾರ್ಥತೆಯಲ್ಲಿ, ನಿರ್ಲಜ್ಜೆಯ ಸ್ವಹಿತಾಸಕ್ತಿಯಲ್ಲಿ, ನಿಷ್ಕರುಣ ಅಪಾಯಕಾರಿ ಇರಾದೆಯಲ್ಲಿ ವಾಸಿಸುತ್ತಿದ್ದರೆ, ನಿಮ್ಮ ಜೀವನದ ಪ್ರತಿ ಕ್ಷಣವನ್ನು ಅದನ್ನೇ ಉಸಿರಾಡುವಿರಿ, ಇದರರ್ಥ ದುಃಖ, ನಿರಂತರ ಅಶಾಂತಿ; ತನ್ನ ಸ್ವಂತ ವಿಕಾರತೆಯಿಂದ ಹತಾಶೆಯಾಗುವ ವಿಕಾರತೆ ಎಂದರ್ಥ.

ನಿಮ್ಮ ದೇಹವನ್ನು ತೊರೆಯುವ ಮೂಲಕ ಈ ವಾತಾವರಣದಿಂದ ನಿಮ್ಮನ್ನು ನೀವು ಮುಕ್ತಗೊಳಿಸಿಕೊಳ್ಳಿತ್ತೀರಿ ಎಂದು ನಂಬಬಾರದು; ಇದಕ್ಕೆ ವ್ಯತಿರಿಕ್ತವಾಗಿ, ದೇಹವು ಸಂಕಟದ ತೀವ್ರತೆಯನ್ನು ಕಡಿಮೆ ಮಾಡುವ ಒಂದು ರೀತಿಯ ಪ್ರಜ್ಞಾಹೀನತೆಯ ಮುಸುಕಾಗಿದೆ. ನೀವು (ಬಹತೇಕ) ಭೌತಿಕ ಜೀವನದಲ್ಲಿ ದೇಹದ ರಕ್ಷಣೆಯನ್ನು ಹೊಂದಿಲ್ಲದಿದ್ದರೆ, ಸಂಕಟವು ಹೆಚ್ಚು ತೀವ್ರವಾಗುತ್ತದೆ ಮತ್ತು ಬದಲಾಯಿಸಬೇಕಾದದ್ದನ್ನು ಬದಲಾಯಿಸಲು, ಸರಿಪಡಿಸಬೇಕಾದದ್ದನ್ನು ಸರಿಪಡಿಸಲು, ನಿಮ್ಮನ್ನು ಉನ್ನತ, ಸಂತೋಷ, ಮತ್ತು ಉಜ್ವಲವಾದ ಜೀವನಕ್ಕೆ ಮತ್ತು ಪ್ರಜ್ಞೆಗೆ ತೆರೆದುಕೊಳ್ಳಲು ಇನ್ನು ಮುಂದೆ ಅವಕಾಶವಿರುವುದಿಲ್ಲ.

ನಿಮ್ಮ ಕೆಲಸವನ್ನು ಇಲ್ಲಿ ಮಾಡಲು ನೀವು ಆತುರಪಡಬೇಕು, ಏಕೆಂದರೆ ಇಲ್ಲಿ ನೀವು ಅದನ್ನು ನಿಜವಾಗಿಯೂ ಮಾಡಬಹುದು.

ಸಾವಿನಿಂದ ಏನನ್ನೂ ನಿರೀಕ್ಷಿಸಬೇಡಿ. ಜೀವನವು ನಿಮ್ಮ ಮೋಕ್ಷವಾಗಿದೆ. ನೀವು ಈ ಜೀವನದಲ್ಲಿ ನಿಮ್ಮನ್ನು ಪರಿವರ್ತಿಸಿಕೊಳ್ಳಬೇಕು. ನೀವು ಪ್ರಗತಿ ಸಾಧಿಸುವುದು ಭೂಮಿಯ ಮೇಲೆ ಮತ್ತು ನೀವು ಸಾಕ್ಷಾತ್ಕಾರಮಾಡಿಕೊಳ್ಳುವುದು ಭೂಮಿಯ ಮೇಲೆ. ನೀವು ಜಯಗಳಿಸುವುದು ದೇಹದಲ್ಲಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/197–98**

**ಪ್ರಜ್ಞೆಯಲ್ಲಿ ಮೇಲಕ್ಕೇರಿರಿ**

ಈ ಮೇಲ್ಕೈ ಸಂಗತಿಗಳು ಅವುಗಳ ಬಗ್ಗೆ ಅನಿರೀಕ್ಷಿತವಾದ್ದನ್ನು ಏನೂ ಹೊಂದಿಲ್ಲ. ಅವುಗಳು ನನಗೆ ಸಾಬೂನಿನ ಗುಳ್ಳೆಗಳಂತೆ ತೋರುತ್ತಿವೆ, ವಿಶೇಷವಾಗಿ ಫೆಬ್ರವರಿ ಮೂರನೇ ತಾರೀಖಿನಿಂದ.

ಹತಾಶೆಯಿಂದ, ಕಣ್ಣೀರಿನಲ್ಲಿ, ಭಯಾನಕ ಮಾನಸಿಕ ಸಂಕಟದಲ್ಲಿ ನನ್ನ ಬಳಿಗೆ ಬರುವ ಜನರಿದ್ದಾರೆ; ನಾನು ಅವರನ್ನು ಈ ರೀತಿ ನೋಡಿದಾಗ, ನಿಮ್ಮೆಲ್ಲರನ್ನೊಳಗೊಂಡ ನನ್ನ ಪ್ರಜ್ಞೆಯಲ್ಲಿ ನಾನು ಸೂಜಿಯನ್ನು (ನೋಟವನ್ನು) ಸ್ವಲ್ಪಮಟ್ಟಿಗೆ ಕದಲಿಸುತ್ತೇನೆ ಮತ್ತು ಅವರು ಹೊರಟುಹೋದಾಗ ಸಂಪೂರ್ಣವಾಗಿ ಸಮಾಧಾನಗೊಂಡಿರುತ್ತಾರೆ. ಅದು ದಿಕ್ಸೂಚಿಯಲ್ಲಿನ ಸೂಜಿ ಇದ್ದಂತೆ; ನಾವು ಪ್ರಜ್ಞೆಯಲ್ಲಿ ಸೂಜಿಯನ್ನು ಸ್ವಲ್ಪ ಕದಲಿಸಿದರೆ, ಎಲ್ಲವೂ ಮುಗಿದಂತೆ. ನಂತರ ಇದು ಅಭ್ಯಾಸ ಬಲದಿಂದ ಸಹಜವಾಗಿ ಹಿಂತಿರುಗುತ್ತದೆ. ಅವು ಸೋಪಿನ ಗುಳ್ಳೆಗಳಲ್ಲದೆ ಬೇರೇನೂ ಅಲ್ಲ.

ನಾನು ಸಂಕಟವೇನೆಂಬುದನ್ನೂ ಸಹ ತಿಳಿದುಕೊಂಡಿದ್ದೇನೆ, ಆದರೆ ಹಿಂದೆ (ಬೆಂಗಾವಲಾಗಿ), ಬೇರೆಯಾಗಿ ನಿಲ್ಲುವುದು ಹೇಗೆಂದು ತಿಳಿದಿರುವ ನನ್ನ ಒಂದು ಅಂಶವು ಯಾವಾಗಲೂ ಅಲ್ಲಿತ್ತು.

ಜಗತ್ತಿನಲ್ಲಿ ನನಗೆ ಈಗ ಸಹಿಸಕೊಳ್ಳಲಾರದಂತೆ ತೋರುತ್ತಿರುವ ಏಕೈಕ ವಿಷಯವೆಂದರೆ, ದೈಹಿಕ ದುರ್ಬಲತೆ, ದೈಹಿಕ ನೋವು, ವಿಕಾರತೆ, ಪ್ರತಿ ಜೀವಿಯಲ್ಲಿರುವ ಸೌಂದರ್ಯದ ಸಾಮರ್ಥ್ಯವನ್ನು ವ್ಯಕ್ತಪಡಿಸುವ ಅಸಮರ್ಥತೆ. ಆದರೆ ಅದೆಲ್ಲವನ್ನೂ ಮುಂದೊಂದು ದಿನ ಜಯಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/282–83**

**ಶಕ್ತಿ ಮತ್ತು ರೂಪಗಳ ಸ್ವೀಕರಣೆ–ತಿರಸ್ಕರಣೆ**

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

ನಾವೆಲ್ಲರೂ ವೈಶ್ವಿಕ ಕಾಲದ ಅವಿಭಾಜ್ಯ ಅಂಗವಾಗಿದ್ದು, ನಮಗೇ ಗೊತ್ತಿರದಂತೆ ನಾವು ಸದಾ ಕೆಲವೊಂದು ಚಿತ್ರಗಳನ್ನು, ರಚನೆಗಳನ್ನು ನಮ್ಮ ಅಂತಃಸತ್ವದ ಬಲದಿಂದ ರೂಪಿಸುತ್ತ ಅವುಗಳನ್ನು ಸುತ್ತಲಿನ ವಾತಾವರಣಕ್ಕೆ ಬಿತ್ತರಿಸುತ್ತಿರುತ್ತೇವೆ. ನಮ್ಮಿಂದ ರೂಪಿತವಾದ ಆ ಚಿತ್ರ–ರಚನೆಗಳು ಪ್ರಕೃತಿಯಲ್ಲಿ

ಸಂಚಾರಗೈಯುತ್ತ, ಒಬ್ಬರ ಅಂತರಂಗದಿಂದ ಇನ್ನೊಬ್ಬರ ಅಂತರಂಗಕ್ಕೆ ಪ್ರವಹಿಸುತ್ತ, ತನ್ನ ಸಮಾನ ಮನಸ್ಕವಾದ ಚೈತನ್ಯಗಳೊಂದಿಗೆ ತಾದ್ಯಾತ್ಮ ಹೊಂದುತ್ತ, ಕೆಲಮೊಮ್ಮೆ ಆತ್ಮೀಯ ಬಂಧದಲ್ಲಿ ಒಂದಾಗಿ ಸಂತಸವನ್ನನುಭವಿಸುತ್ತ, ಇನ್ನು ಕೆಲವೊಮ್ಮೆ ವೈರುದ್ಧವನ್ನು ಸಾಧಿಸುತ್ತ ಘರ್ಷಣೆಗಳನ್ನು ಸೃಷ್ಟಿಸುತ್ತ, ಘೋರ ಯುದ್ಧಗಳ ಆರಂಭಕ್ಕೂ ಕಾರಣವಾಗುತ್ತವೆ. ನಮ್ಮ ಮನೋಮಯದ ಸ್ತರದಲ್ಲಿ ನಿರ್ಮಿತವಾಗುವ ಈ ಕಲ್ಪನೆಗಳಲ್ಲಿ ಇಚ್ಛೆಯ ಸಣ್ಣ ಅಂಶವೊಂದು ಕಾರ್ಯಪ್ರವೃತ್ತವಾಗಿದ್ದು, ಅದು ಸದಾ ತನ್ನನ್ನು ತಾನು ಅರಿತುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಈ ಇಚ್ಛೆಯ ಸಹಕಾರದೊಂದಿಗೆ ಪ್ರತಿಯೊಬ್ಬರೂ ತಮ್ಮ ಬಯಕೆಗಳನ್ನು ಚಿತ್ರಗಳ ರೂಪದಲ್ಲಿ ಸೃಷ್ಟಿಸಿ, ಅವುಗಳನ್ನು ಪ್ರಕೃತಿಗೆ ಹರಿಬಿಡುತ್ತಾರೆ. ಈ ಮೂಲಕ ತಮ್ಮ ಮರ್ತ್ಯದ ಆಸೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಕಾದಿರುತ್ತಾರೆ. ಹೀಗೆ ಅಸಂಖ್ಯಾತ ಮನಸ್ಸುಗಳಿಂದ ಪ್ರಕೃತಿಗೆ ಎಸೆಯಲ್ಪಟ್ಟ ಚಿತ್ರಗಳ ಸಂತೆಯಿಂದ, ಗೊಂದಲದ ವಾತಾವರಣವು ಸೃಷ್ಟಿಯಾಗುತ್ತದೆ. ಒಂದು ವೇಳೆ ನಿಮ್ಮ ಅಕ್ಷಿಪಟಲಗಳು ಇಂತಹ ಮನೋಚಿತ್ರಗಳನ್ನು ನೋಡಲು ಶಕ್ಯವಾಗಿದ್ದರೆ, ನೀವು ಈ ಪ್ರಕೃತಿಯಲ್ಲಿ ಹಲವು ಅದ್ಭುತವಾದ ವಿಷಯಗಳನ್ನು ಕಾಣುತ್ತೀರಿ. ಈ ಚಿತ್ರ ಸಂತೆಯಲ್ಲಿ ಯುದ್ಧಭೂಮಿಗಳು, ವಿವಿಧ ಕಂಪನಗಳು, ಆಕ್ರಮಣಕಾರಿ ದೃಶ್ಯಗಳು ಮತ್ತು ತಮ್ಮನ್ನು ತಾವು ಅರ್ಥೈಸಿಕೊಳ್ಳುವಲ್ಲಿ ವಿಫಲವಾದ ಅಲ್ಪಮನದ ಜೀವಿಗಳ ಗುಂಪುಗಳನ್ನು ಕಾಣಬಹುದು. ಇಂತಹ ಅಸಂಖ್ಯ ಚಿತ್ರರೂಪಕಗಳು ಭೌತಿಕ ರೂಪದಲ್ಲಿ ಪ್ರಕಟಗೊಂಡು ತಮ್ಮನ್ನು ರಚಿಸಿದ ಮರ್ತ್ಯರ ಆಕಾಂಕ್ಷೆಗಳನ್ನು ಈಡೇರಿಸಲೆಂದು ಕಾಯುತ್ತಿರುತ್ತವೆ. ಇಂತಹ ಭಾವನೆಗಳು ಅನಂತ ಸಂಖ್ಯೆಯಲ್ಲಿದ್ದು ವಾತಾವರಣದಲ್ಲಿ ಪ್ರಕ್ಷುಬ್ಧ ಸಾಗರದಂತೆ ಹೊಯ್ದಾಡುತ್ತಿರುತ್ತವೆ. ಅವೆಲ್ಲವನ್ನೂ ಸ್ಥೂಲ ರೂಪದಲ್ಲಿ ಪ್ರಕಟಿಸಲು ಈ ಭುವಿಯಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲ. ಆ ಭಾವನಾ ಚಿತ್ರಗಳು ಒಟ್ಟಾಗಿ ಒಂದು ಸೈನ್ಯದಂತೆ ಕಾರ್ಯಪ್ರವೃತ್ತವಾಗಿ ತಮ್ಮ ನಡೆಯಲ್ಲಿ ಸಹಾಯಕವಾಗದಿರುವ ಅಂಶಗಳನ್ನು ಹಿಂದೆ ತಳ್ಳುತ್ತ ಮುನ್ನುಗ್ಗುತ್ತವೆ. ಇಂತಹ ಶಿಸ್ತಿನ ನಿಯಮವನ್ನು ಪಾಲಿಸಿದ ರೂಪಕಗಳು ಮಾತ್ರ ತಮ್ಮ ಬಯಕೆಯನ್ನು ಸಫಲಗೊಳಿಸುತ್ತವೆ. ಅದಾಗ್ಯೂ ವಾತಾವರಣಕ್ಕೆ ನಿರಂತರವಾಗಿ ಎಸೆಯಲ್ಪಡುವ ಎಲ್ಲಾ ಕಲ್ಪಿತ ಚಿತ್ರಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಋತವು ಪ್ರಯತ್ನಿಸಿದರೂ ಸಹ, ಮೃಣ್ಮಯದಲ್ಲಿ ಅದಕ್ಕೆ ಸಾಕಷ್ಟು ಸ್ಥಳಾವಕಾಶವಿಲ್ಲದಿರುವ ಕಾರಣಕ್ಕಾಗಿ ಮರ್ತ್ಯವಲಯದಲ್ಲಿ ಎಲ್ಲರೂ ಸಾಧನೆಗೈಯಲು ಸಾಧ್ಯವಾಗುವದಿಲ್ಲ.

ವಾತಾವರಣದಲ್ಲಿ ಸಂಭವಿಸುವ ಈ ಚಿತ್ರ ಸಂತೆಯ ಪ್ರಕ್ರಿಯೆಯನ್ನು ಅರಿಯದ ಮರ್ತ್ಯಮನಗಳು ನಿರಂತರವಾಗಿ ತಮ್ಮ ಅಭೀಪ್ಸೆಗಳನ್ನು ಸೃಷ್ಟಿಸುತ್ತ, ಅವುಗಳನ್ನು ಬಾಹ್ಯ ಜಗತ್ತಿಗೆ ಎಸೆಯುತ್ತಲೇ ಇರುತ್ತವೆ. ಒಂದೊಮ್ಮೆ ಬಿತ್ತರಿಸಿದ ಚಿತ್ರಗಳನ್ನು ಕೊಂಚ ವ್ಯತ್ಯಯಗಳೊಂದಿಗೆ ಬದಲಾಯಿಸುತ್ತ, ಮರುಕ್ಷಣವೇ ಹೊಸದಾದ ಚಿತ್ರಗಳನ್ನು ಪ್ರಕಟಿಸುತ್ತವೆ. ಕೊಲವೊಮ್ಮೆ ಈ ಹಿಂದಣ ಭಾವನೆಗಳಿಗೆ ಸಂಬಂಧವೇ ಇಲ್ಲದಂತಹ ಪೂರ್ತಿ ವಿಭಿನ್ನವಾದ ಬೇರೆಯ ಚಿತ್ರಗಳೇ ಅವರಿಂದ ರಚಿತವಾಗುತ್ತಿರುತ್ತವೆ. ಅವರು ನಿರಂತರವಾಗಿ ಒಂದು ಭಾವನಾ ವಿಷಯದಿಂದ ಮತ್ತೊಂದು ಭಾವನಾ ವಿಷಯಕ್ಕೆ ಜಿಗಿಯುತ್ತಲೇ ಇರುತ್ತಾರೆ. ಆಸೆ–ನಿರಾಸೆ, ಸುಖ–ದುಃಖ, ಸಂತೋಷ–ಹತಾಶೆ, ಸ್ವೀಕರಣೆ–ನಿರಾಕರಣೆ ಹೀಗೇ ಅವರ ದೃಷ್ಟಿ ವ್ಯತ್ಯಯವಾಗುತ್ತಲೇ ಸಾಗುತ್ತಿರುತ್ತವೆ. ಏಕೆಂದರೆ ಅವರಿಗೆ ಇಂತಹ ವಿಷಯಗಳ ಮೇಲೆ ಯಾವುದೇ ನಿಯಂತ್ರಣವಾಗಲೀ–ಪಾಂಡಿತ್ಯವಾಗಲೀ ಇರುವದಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವೆಂಬಂತೆ ನಮ್ಮಲ್ಲಿ ಉದಯಿಸುತ್ತಿರುವ ಬೌದ್ಧಿಕತೆಯು ಮೊದಲು ತನ್ನನ್ನು ತಾನು ಅರಿತುಕೊಳ್ಳುತ್ತ, ತಾನು ಸೃಜಿಸುತ್ತಿರುವ ಸ್ಮೃತಿಚಿತ್ರಗಳ ಸರಣಿಗೂ, ಅವು ಪ್ರಕಟಗೊಳ್ಳುವ ಪ್ರಕ್ರಿಯೆಗೂ ಇರುವ ಅಂತರವನ್ನು ತಿಳಿಯಲು ಪ್ರಯತ್ನಿಸುತ್ತದೆ. ಏಕೆಂದರೆ ಅದು ತನ್ನ ಸುತ್ತಲೂ ಎಸೆಯಲ್ಪಡುತ್ತಿರುವ ಕಲ್ಪನೆಗಳ ಮೂಲವಾದ ಅಸಂಖ್ಯ ಅಲ್ಪಮನದ ಜೀವಿಗಳ ಅಂತಃಸತ್ವವನ್ನು ಅರಿತು ಮುನ್ನಡೆಯುತ್ತಿರುತ್ತದೆ. ಒಂದೊಮ್ಮೆ ಈ ಬೌದ್ಧಿಕತೆಯು ನಮ್ಮೊಳಗೆ ಸ್ಥಿರವಾಗಿ ಸ್ಥಾಪಿತವಾದಲ್ಲಿ, ನಾವು ನಮ್ಮಿಂದ ಸೃಷ್ಟಿಯಾದ ನಮ್ಮವೇ ಕಲ್ಪನಾ ಚಿತ್ರಗಳ ರಾಶಿಯಿಂದ ಸರಿಯಾದ–ವೈರುದ್ಧ್ಯವಾದ ಚಿತ್ರಗಳನ್ನು ವಿಂಗಡಿಸಿ, ಅವುಗಳಲ್ಲಿ ಕೆಡುಕನ್ನುಂಟು ಮಾಡುವ, ನಮ್ಮ ಅತ್ಯುನ್ನತ ಇಚ್ಛೆ ಅಥವಾ ಆಕಾಂಕ್ಷೆಗೆ ಅನುಗುಣವಾಗಿ ಇರದೇ ಇರುವ ಅಸುರೀ ಭಾವನೆಗಳನ್ನು ವಾತಾವರಣದಿಂದ ಮತ್ತೆ ಹಿಂದೆಗೆದುಕೊಂಡು, ನಮ್ಮ ಪ್ರಗತಿ ಮತ್ತು ಅಭಿವೃದ್ಧಿಯಲ್ಲಿ ಪೂರಕವಾಗಲಿರುವ ರಚನೆಗಳನ್ನು ಮಾತ್ರ ಮುನ್ನಡೆಸುತ್ತ, ಅವುಗಳನ್ನು ಭೌತಿಕ ರೂಪದಲ್ಲಿ ಇಳಿಸಲು ಮಾಡಬೇಕಿರುವ ಕರ್ತವ್ಯಗಳನ್ನು ನಡೆಸಲು ಶಕ್ಯವಾಗುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/386–87**

## ಕಲ್ಪನೆಗಳನ್ನು ನಿಯಂತ್ರಿಸುವ ವಿಧಾನ

ಸದಾ ತಮ್ಮ ಸ್ವಭಾವಕ್ಕೆ ವಿರೋಧಾತ್ಮಕವಾಗಿರುವ ಆಲೋಚನೆಗಳನ್ನೇ ಮಾಡುವಂತಹ ಕೆಲವು ಜನರನ್ನು ನಾನು ಬಲ್ಲೆ. ಒಂದು ದಿನ ಅವರು ತಮ್ಮ

ಪ್ರಗತಿಗೆ ಪೂರಕವಾಗುವಂತಹ ಭವ್ಯವೂ–ದಿವ್ಯವೂ, ಪ್ರಕಾಶಮಾನವೂ–ಶಕ್ತಿಯುತವೂ ಆದಂತಹ ಒಂದು ರಚನೆಯನ್ನು ಬಿತ್ತರಿಸುತ್ತಾರೆ. ಆದರೆ ಮರುದಿನವೇ ಸೋಲೊಪ್ಪಿಕೊಂಡಿರುವೆನೋ ಎಂಬಂತೆ ಕಾಳ–ಕರಾಳವಾದ, ಜುಗುಪ್ಸೆಯುತ–ಹತಾಶೆಭರಿತವಾದಂತಹ ರಚನೆಯನ್ನು ಸೃಜಿಸುತ್ತಾರೆ. ಆದರೆ ಅವರಿಂದ ಸೃಷ್ಟಿಯಾದ ಎರಡೂ ವಿಭಿನ್ನವಾದ ರಚನೆಗಳು ಅದಾಗಲೆ ವಾತಾವರಣವನ್ನು ಪ್ರವೇಶಿಸಿಬಿಟ್ಟಿರುತ್ತವೆ. ಕೆಲ ಸಮಯದ ನಂತರ ಅವರು ತಮ್ಮ ನಿಯಮಗಳನ್ನು ಸುಂದರವಾಗಿ ಮರುರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ, ಅವರ ಮೊದಲ ಪ್ರಕಾಶಮಾನವಾದ ಭಾವನೆಯನ್ನು, ಎರಡನೆಯ ಕತ್ತಲೆಯ ಭಾವನೆಯು ನುಂಗಿ ಅದನ್ನು ರಾಹುಗ್ರಸ್ತವಾಗಿರಿಸಿರುತ್ತದೆ. ಇದರಿಂದಾಗಿಯೇ ಜೀವನದ ದೀರ್ಘ ಸಾಲುಗಳು ಅತಿ ಚಿಕ್ಕ ವಿವರಗಳಲ್ಲಿ ಸುಪ್ತವಾಗಿರುವಂತೆ ಭಾಸವಾಗುತ್ತವೆ. ಇದಕ್ಕೆ ಕಾರಣವೆಂದರೆ ಮರ್ತ್ಯರು ತಮ್ಮ ಯೋಚನೆಗಳನ್ನು ಸರಿಯಾದ ದಿಕ್ಕಿನಲ್ಲಿ ನಡೆಸದೇ ಇರುವುದೇ ಆಗಿದೆ. ಏಕೆಂದರೆ ಅವರುಗಳು ತಮ್ಮನ್ನು ತಾವು ಪ್ರಕೃತಿಯ ವಿರೋಧಾತ್ಮಕ ದ್ವಂದ್ವದ ಗುಲಾಮರೆಂದೂ, ಅದು ನಡೆಸುವ ದಾರಿಯಲ್ಲೇ ತಾವು ಕ್ರಮಿಸಬೇಕೆಂದೂ ನಿರ್ಧರಿಸಿರುತ್ತಾರೆ. ಉದಾಹರಣೆಗೆ ತನ್ನ ಸ್ವಪ್ರಯತ್ನದ ಮೇಲೆ ಭರವಸೆಯಿರದ ಕೇವಲ ವಿಧಿಯೊಂದನ್ನೇ ನೆಚ್ಚಿಕೊಂಡ ವ್ಯಕ್ತಿಯೋರ್ವ, “ಓಹ್! ಇಂದೇಕೋ ನನಗೆ ಹುಷಾರಿಲ್ಲ. ಓಹ್! ಈ ದಿನವೇಕೋ ನನಗೆ ದುಃಖದಾಯಕವಾಗಿರುವಂತೆ ತೋರುತ್ತಿದೆ” ಎಂದು ನುಡಿಯುತ್ತ ಕೈಕಟ್ಟಿ ಕುಳಿತುಕೊಳ್ಳುತ್ತಾನೆ. ಅದೇ ತಮ್ಮ ಸ್ವಸಾಮರ್ಥ್ಯದ ಮೇಲೆ ಭರವಸೆಯನ್ನಿಟ್ಟುಕೊಂಡ ಸಾಧಕನು ಒಂದು ಹೆಜ್ಜೆ ಮುಂದಿಟ್ಟು, ತನ್ನ ಎಲ್ಲಾ ಕಲ್ಪನೆಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಅವುಗಳ ಸ್ಥೂಲ ರೂಪದ ಅವತರಣಕ್ಕಾಗಿ ದುಡಿಯುತ್ತ ತನ್ನ ಅತ್ಯುನ್ನತ ಆಕಾಂಕ್ಷೆಯನ್ನು ಫಲಪ್ರದವನ್ನಾಗಿಸಿಕೊಳ್ಳುತ್ತಾನೆ. ಇದನ್ನೇ ನಾನು ‘ಕಲ್ಪನೆಗಳ ನಿಯಂತ್ರಣಾ ವಿಧಾನ’ ಎಂದು ಕರೆದಿರುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/388**

ಮರ್ತ್ಯದ ಭೌತಿಕ ಪ್ರಜ್ಞೆ ಮತ್ತು ಭೌತಿಕ ಮನಗಳು ತಮ್ಮ ಕ್ರಿಯಾ ಚಟುವಟಿಕೆಗಳನ್ನು ನಡೆಸುತ್ತ, ಪ್ರಯತ್ನಪೂರ್ವಕವಾಗಿ ಅವು ತಮ್ಮ ಮಾರ್ಗದಲ್ಲಿ ಮುನ್ನಡೆಯಬೇಕಾದರೆ, ಅದಕ್ಕೆ ಪಾಶವೀ ರೀತಿಯ ದಂಡ ಪ್ರಹಾರದ ಅಗತ್ಯವಿದೆ. ಏಕೆಂದರೆ, ಪೂರ್ವ ಕಾಲದಿಂದಲೂ ಈ ಭೌತಿಕ ಪ್ರಜ್ಞಾ–ಮನಗಳು ಈ ಪ್ರಬಲ

ಚಾವಟಿ ಏಟುಗಳಿಗೆ ಒಗ್ಗಿಕೊಂಡೇ ಬಂದಿವೆ. ಪ್ರಹಾರಗೈಯದಿದ್ದರೇ ಅವು ತಮ್ಮ ಚಲನೆಯನ್ನು ಕುಂಠಿತಗೊಳಿಸುತ್ತ, ಕ್ರಮೇಣ ತಾಮಸೀ ಪ್ರವೃತ್ತಿಗಳ ಅಡಿಯಾಳಾಗಿ ದುಡಿಯಲು ಆರಂಭಿಸುತ್ತವೆ. 'ಅಸುರೀ ಶಕ್ತಿಯೊಂದು ಸದಾ ತನ್ನನ್ನು ನಿಯಂತ್ರಿಸುತ್ತ ತನ್ನ ದಾರಿಯಲ್ಲಿ ತೊಂದರೆ–ಅಡಚಣೆ–ವೈರುದ್ಧ್ಯಗಳನ್ನು ಸೃಷ್ಟಿಸುತ್ತ ತನ್ನನ್ನು ಜೊತೆಗೆ ಏನನ್ನೂ ಮುನ್ನಡೆಯದಂತೆ ತಡೆಯುತ್ತಿದೆ' ಎಂದು ಕಲ್ಪಿಸಿಕೊಳ್ಳುತ್ತ ತನ್ನ ಚಲನೆಯನ್ನು ತೀವ್ರಗತಿಯಲ್ಲಿ ಮಂದಗೊಳಿಸುತ್ತ ಕೊನೆಗೊಮ್ಮೆ ನಿಶ್ಚಲ ಸ್ಥಿತಿಗೆ ತಲುಪಿಬಿಡುವ ಸಂಭವವಿದೆ. ಆ ಪ್ರಜ್ಞಾ–ಮನಗಳಿಗೆ ಅವುಗಳ ಎಲ್ಲಾ ಕಷ್ಟಗಳ ಹಿಂದೆ ಒಂದು ದೈವಕೃಪೆಯೊಂದು ಸದಾ ಕಾರ್ಯ ನಿರ್ವಹಿಸುತ್ತಿದೆಯೆಂದು, ಅವುಗಳ ಎಲ್ಲಾ ನೋವು–ಸಂಕಟ–ವಿರೋದಾಭಾಸಗಳ ಹಿಂದೆ ಚ್ಯುತಿಯಿರದ ಆನಂದನ ಝರಿಯೊಂದು ಉದ್ಭುದಿಸುತ್ತಿರುತ್ತದೆಯೆಂದು ಅವುಗಳಿಗೆ ತಿಳಿಯಪಡಿಸುವುದು ತುಂಬಾ ಕಠಿಣ! ಇದನ್ನು ತಿಳಿಸಬೇಕಾದರೆ ಆ ಪ್ರಜ್ಞಾ–ಮನಗಳಿಗೆ ಸ್ಪಷ್ಟವಾದ ದರ್ಶನಾನುಭವಗಳು ಪದೇ–ಪದೇ ಘಟಿಸುತ್ತಲೇ ಇರಬೇಕಾಗುತ್ತದೆ. ಈ ಪ್ರಕ್ರಿಯೆ ಫಲಕಾರಿಯಾದಲ್ಲಿ ನೀವು ನಿಮ್ಮ ಸಾಧನೆಯಲ್ಲಿ ತೊಡಕಾಗಬಹುದಾದ ನಿರಾಶೆ–ಅನುಮಾನ–ಕಲ್ಪನೆಯಂತಹ ತ್ರಿವಿಧ ಪ್ರತಿಬಂಧಕಗಳನ್ನು ಸಮರ್ಥವಾಗಿ ತೊಡೆದುಹಾಕಿ ಮುನ್ನುಗ್ಗಲು ಶಕ್ತರಾಗುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/2**

ಮೃಣ್ಮಯದಲ್ಲಿ ದಿವ್ಯತೆಯ ಅವತರಣವನ್ನು ಬಯಸದ ಅಸುರೀ ಶಕ್ತಿಗಳೇ ನಮ್ಮ ಸುತ್ತಲಿನ ಪ್ರಕೃತಿಯನ್ನು ಸೃಷ್ಟಿಸುತ್ತಿವೆ. ಆ ಮೂಲಕ ದಿವ್ಯತೆಯ ಆರಾಧಕರಾದ ಮರ್ತ್ಯಮಾನವರನ್ನು ಅವರ ಸಾಧನೆಯಿಂದ ಹಿಂದೆಗೆಯುವಂತೆಯೂ, ಅವರ ಸಾಹಸೀ ಪ್ರವೃತ್ತಿಗಳನ್ನು ನಿರುತ್ಸಾಹದ ಬಲೆಯಲ್ಲಿ ಸಿಕ್ಕಿಸಿ, ಅವರನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕೆಂಬುದೇ ಅವುಗಳ ಉದ್ದೇಶವಾಗಿದೆ. ಆದರೆ ದಿವ್ಯತೆಯ ಪುತ್ರರಾದ ನೀವುಗಳು ಮಾತ್ರ ಅದರ ಯಾವುದೇ ಚೋದನೆಗಳಿಗೂ ಗಮನ ಕೊಡದೇ, ಅದರ ರಕ್ಕಸ ಮಾರ್ಗದೆಡೆಗೆ ದೃಷ್ಟಿಯನ್ನೂ ಹರಿಸದೇ ನಿಮ್ಮ ಸ್ಪಷ್ಟವಾದ ದಾರಿಯಲ್ಲಿಯೇ ನೀವು ನಡೆಯುತ್ತಿರಬೇಕು. ನಿರಾಶಾವಾದವೊಂದೇ ಅದರ ಪ್ರಬಲ ಅಸ್ತ್ರವಾಗಿದ್ದು, ಅದರಿಂದಲೇ ಮರ್ತ್ಯಮನಗಳನ್ನು ಗೆಲ್ಲಲು ಆ ಶಕ್ತಿಯು ಸದಾ ಹೊಂಚುಹಾಕುತ್ತ ಕಾದು ಕುಳಿತುಕೊಂಡಿರುತ್ತದೆ. ನಾವುಗಳು ಮಾತ್ರ ಅದರ ಯಾವುದೇ ಪ್ರಲೋಭನೆಗಳನ್ನೂ ಲಕ್ಷಿಸದೆ ನಡೆಯುವುದೇ – ನಮ್ಮ ಸಾಧನೆಯನ್ನು ಕುಂಠಿತಗೊಳಿಸಲೆಂದು ಬರುವ ಪ್ರತಿಕೂಲ ಶಕ್ತಿಗಳ ವಿರುದ್ಧ

ಕೈಗೊಳ್ಳುವ – ನಿರ್ಣಾಯಕ ವಿಜಯವಾಗಿರುತ್ತದೆ. ಏಕೆಂದರೆ, ನಿಮ್ಮ ಪ್ರಜ್ಞೆಯನ್ನು ಆಕ್ರಮಿಸಿಕೊಳ್ಳಲೆಂದು ಬರುವ ಆ ದುಷ್ಟ ಬಲಗಳು ತಮ್ಮನ್ನು ತಾವು ಸಾಧ್ಯವಾದಷ್ಟು ರಕ್ಷಿಸಿಕೊಳ್ಳುತ್ತಲೇ ನಿಮ್ಮನ್ನು ಹಿಂಬಾಲಿಸುತ್ತಿರುತ್ತವೆ. ಒಮ್ಮೊಮ್ಮೆ ನಿಮ್ಮ ದಾರಿಯಲ್ಲಿಯೇ ನಿರಾಶವಾದದ ಭೂತವನ್ನು ಪ್ರತ್ಯಕ್ಷಗೊಳಿಸಿ, ನಿಮ್ಮನ್ನು ಬೀಳಿಸಲೆಂದು ಕಾಯುತ್ತಿರುತ್ತವೆ. ಅದನ್ನು ಸಮರ್ಥವಾಗಿ ನಿಭಾಯಿಸಿ ನೀವು ಮುನ್ನಡೆದರೂ, ಕತ್ತಲಲ್ಲಿ ಕಾಣದೆ ಆ ನಿರಾಶಾವಾದ ಭೂತದ ಬಾಲವನ್ನಷ್ಟೇ ಈಕ್ಷಿಸಿದರೂ ಸಾಕು ಅದು ನಿಮ್ಮನ್ನು ನಿರ್ವೀರ್ಯರನ್ನಾಗಿಸಿ ಬಿಡುತ್ತದೆ. ಏಕೆಂದರೆ ಆ ನಿರಾಶಾವಾದವೇ ಈ ಅಸುರೀ ಶಕ್ತಿಯ ಪ್ರಬಲ ಅಸ್ತ್ರವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/256–57**

**ಹೆಜ್ಜೆಯ ಹಿಂದೆಗೆಯುವಿಕೆ**

ನಿಮ್ಮಲ್ಲಿ ಅನೇಕರು ತಮ್ಮ ಅಸ್ತಿತ್ವದ ಮೇಲ್ಮೈಯಲ್ಲಿಯೇ ಬದುಕುತ್ತಿರುತ್ತಿರುತ್ತಾರೆ, ಬಾಹ್ಯದ ಸ್ಪಂದನೆಗಳಿಗೆ ಮಾತ್ರ ಅವರು ಹೊಂದಿಕೊಂಡಿರುತ್ತಾರೆ. ನೀವು ಬಹುತೇಕ ನಿಮ್ಮ ಸ್ವಂತ ದೇಹದ ಹೊರಗಿನ ಯೋಜನೆಗಳಲ್ಲಿಯೇ ಜೀವಿಸುತ್ತಿರುತ್ತೀರಿ. ಕೆಲವೊಮ್ಮೆ ನೀವು ನಿಮಗಾಗದೇ ಇರುವ ವ್ಯಕ್ತಿಗಳನ್ನು ಕಂಡಾಗ ನಿಮ್ಮಲ್ಲಿ ಅಸಮಾಧಾನವು ಭುಗಿಲೇಳುತ್ತದೆ. ಏಕೆಂದರೆ, ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನೀವು ನಿಮ್ಮ ಹೆಜ್ಜೆಯನ್ನು ಹಿಂದೆಗೆದುಕೊಳ್ಳಲು ಸಿದ್ಧರಾಗಿರುವದಿಲ್ಲ. ಆ ಕಾರಣದಿಂದಾಗಿಯೇ ಅಂತಹ ಸಂದರ್ಭಗಳಲ್ಲಿ ಜರುಗುವ ದುಷ್ಪರಿಣಾಮಗಳನ್ನು ನೀವು ನೇರವಾಗಿ ನಿಮ್ಮ ಮೇಲೆಯೇ ಎಳೆದುಕೊಂಡಂತಾಗುತ್ತದೆ. ಹಾಗಾಗಿ ನೀವು ನಿಮ್ಮ ಹೆಜ್ಜೆಯನ್ನು ಬಹಿರಂಗದಿಂದ ಹಿಂದೆಗೆದುಕೊಂಡು, ಅಂತರಂಗಕ್ಕಿಳಿಯುವ ಪ್ರಯತ್ನವನ್ನು ಮಾಡಬೇಕು. ನಿಮ್ಮಂತರಂಗದಲ್ಲಿ ನೀವು ಸದಾ ಸುರಕ್ಷಿತರಾಗಿರುವಿರಿ. ಅಲ್ಲಿ ಬಾಹ್ಯ ಜಗತ್ತಿನ ಯಾವ ಅಪಾಯಗಳಿಗೂ ಪ್ರವೇಶವಿರುವದಿಲ್ಲ. ನಿಮ್ಮ ಹೊರಗಿನ ಪ್ರಪಂಚದಲ್ಲಿ ದುರ್–ವ್ಯವಸ್ಥೆಗಳನ್ನು ಸೃಷ್ಟಿಸುತ್ತಿರುವ ಶಕ್ತಿಗಳೆಡೆ ನೀವು ಗಮನವನ್ನೇ ಹರಿಸದಿರಿ. ನೀವು ಆತುರಾತುರವಾಗಿ ಯಾವುದಾದರೂ ಕಾರ್ಯವನ್ನು ಮಾಡಿ ಮುಗಿಸಬೇಕೆಂದು ಪ್ರಯತ್ನಿಸುತ್ತಿದ್ದರೆ, ಒಂದು ಕ್ಷಣ ನಿಂತು, ನಿಮ್ಮ ಹೆಜ್ಜೆಯನ್ನು ಸ್ವಲ್ಪ ಹಿಂದೆಗೆದುಕೊಂಡು, ಆಂತರ್ಯಕ್ಕಿಳಿದು, ಅದರ ಸಹಾಯದಿಂದ ಮುನ್ನಡೆಯಿರಿ. ಆಗ ನೀವು ನಿಮ್ಮ ಕಾರ್ಯದಲ್ಲಿ ಎಂತಹ ಶೀಘ್ರ ಯಶಸ್ಸನ್ನು

ಪಡೆಯುತ್ತೀರಿ ಎಂಬುದು ನಿಮಗರಿವಾಗುತ್ತದೆ. ಯಾರಾದರೂ ನಿಮ್ಮ ಮೇಲೆ ಕೋಪಗೊಂಡು ಕೂಗಾಡಿದರು ಎಂದಿಟ್ಟುಕೊಳ್ಳಿ. ಆಗ ಕೂಡಲೇ ನೀವು ಅವರ ಭಾವನಾಕಂಪನದ ಬಲೆಯಲ್ಲಿ ಸಿಲುಕಿಕೊಳ್ಳಬೇಡಿ. ಒಂದ್ಹೆಜ್ಜೆ ಹಿಂದಿಟ್ಟು ನಿರಾತಂಕವಾಗಿ ಯಾವುದೇ ಪ್ರತಿಕ್ರಿಯೆಯನ್ನು ತೋರದೇ ತಟಸ್ಥವಾಗಿ ಉಳಿದುಬಿಡಿ. ಆಗ ಸಹಜವಾಗಿಯೇ ಎದುರಿಗಿರುವ ವ್ಯಕ್ತಿಯ ತತ್‌ಕ್ಷಣದ ಕೋಪವು ಮಾಯವಾಗಿ, ಅವರಲ್ಲಿ ಶಾಂತಿ ನೆಲೆಸುತ್ತದೆ. ಘಟಿಸಬಹುದಾಗಿದ್ದ ಅನಾಹುತವೊಂದನ್ನು ಕೇವಲ ಹೆಜ್ಜೆಯನ್ನು ಹಿಂದೆಗೆಯುವಿಕೆಯಿಂದಲೇ ತಪ್ಪಿಸಬಹುದು. ಯಾವಾಗಲೂ ನಿಮ್ಮೊಳಗೆ ಶಾಂತಿಯನ್ನು ಕಾಪಾಡಿಕೊಂಡಿರಿ. ಅದನ್ನು ಕದಡಲು ಬರುವ ಪ್ರಲೋಭನೆಗಳನ್ನು ವಿರೋಧಿಸಿರಿ. ಹೆಜ್ಜೆಯನ್ನು ಹಿಂದೆಗೆಯದೆ ಯಾವುದನ್ನೂ ನಿರ್ಧರಿಸಬೇಡಿ, ಹೆಜ್ಜೆಯನ್ನು ಹಿಂದೆಗೆಯದೆ ಯಾವ ಮಾತನ್ನೂ ಆಡದಿರಿ, ಹೆಜ್ಜೆಯನ್ನು ಹಿಂದೆಗೆಯದೆ ಯಾವುದೇ ನೂತನ ಕಾರ್ಯಗಳನ್ನು ಕೈಗೊಳ್ಳಬೇಡಿ. ಬಾಹ್ಯ ಜಗತ್ತಿಗೆ ಸೇರಿದ ಯಾವುದೇ ದ್ರವ್ಯಗಳೂ ಶಾಶ್ವತವಲ್ಲ. ಹಾಗಾಗಿ ಅವುಗಳಿಂದ ಪಡೆದುಕೊಳ್ಳುವದಾಗಲೀ–ಕಳೆದುಕೊಳ್ಳುವದಾಗಲೀ ಯಾವುದೂ ಇಲ್ಲ. ಈ ವಿಶ್ವದಲ್ಲಿ ಯಾವುದು ಶಾಶ್ವತವೋ–ಅಮರವೋ–ಅನಂತವೋ ಅಂತಹ ದಿವ್ಯಪ್ರೇಮ, ದಿವ್ಯಪ್ರಕಾಶ, ದಿವ್ಯಜೀವನ, ಪರಮಶಾಂತಿ, ಪರಮಾನಂದ ಮತ್ತು ಮರ್ತ್ಯದ ಎಲ್ಲಾ ಜ್ಞಾನಗಳಿಗೂ ಮುಕುಟಪ್ರಾಯವಾಗಿವೆಯೋ, ಅಂತಹ ದಿವ್ಯಜ್ಞಾನಗಳು ಮಾತ್ರ ಅನುಭವಿಸಲು–ಸಾಕ್ಷಾತ್ಕರಿಸಿಕೊಳ್ಳಲು ಯೋಗ್ಯವಾಗಿವೆ. ಕೆಲವೊಮ್ಮೆ ನೀವು ಬಾಹ್ಯ ಜಗತ್ತಿನ ದ್ರವ್ಯದ ಸಾಮಿಪ್ಯವನ್ನು ಅನುಭವಿಸಿದಾಗ ಅದರೊಡನೆ ಹೇಗೆ ವರ್ತಿಸಬೇಕೆಂದು ನಿಮಗರಿವಿಲ್ಲದಿದ್ದಾಗ, ನೀವು ಸಹಜವಾಗಿಯೇ ನಿಮ್ಮ ಹೆಜ್ಜೆಯನ್ನು ಹಿಂದೆಗೆದು ಪ್ರಜ್ಞೆಯೊಡನೆ ವ್ಯವಹರಿಸುವಿರಿ, ದಿವ್ಯಶಕ್ತಿಯನ್ನು ನಿಮ್ಮ ಕಾರ್ಯದಲ್ಲಿ ಸಹಾಯಕವಾಗಲೆಂದು ಪ್ರಾರ್ಥಿಸುವಿರಿ, ಅದರ ದಿವ್ಯ ಉತ್ತರಕ್ಕಾಗಿ ಕಾಯುವಿರಿ. ಈ ಕಾಯುವಿಕೆಗೆ ಕಾಲಮಿತಿಯಿಲ್ಲ. ಹಾಗಾಗಿ ಅದು ನಿಮ್ಮ ತಾಳ್ಮೆಯನ್ನು ಪರೀಕ್ಷಿಸಬಹುದು. ಅದನ್ನು ಸಾಧಿಸಬೇಕೆಂದರೆ ನಿಮಗೆ ತಾಳ್ಮೆ ಮತ್ತು ಶಾಂತಿಯ ಅವಶ್ಯಕತೆಯಿದೆ. ಆಗ ಮಾತ್ರ ನೀವು ದಿವ್ಯತೆಯ ಮೂಲದಿಂದ ಅನುಸ್ಪಂದನವನ್ನು ಪಡೆಕೊಳ್ಳುವಿರಿ. ಹಾಗಾಗಿ ಈಗಿಂದಲೇ ಆ ಶಾಂತಿಯನ್ನು ತಳೆಯಲು ಅಭ್ಯಾಸ ಮಾಡಿಕೊಳ್ಳಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/160**

## ನಿಮ್ಮೊಳಗಿನ ಆಂತರ್ಯಕ್ಕಿಳಿದು ನೋಡಿ

ಬಾಹ್ಯದ ಜಡ ಭೌತಿಕ ಪ್ರಪಂಚವನ್ನು ಬಿಟ್ಟು ಒಮ್ಮೆ ನಿಮ್ಮೊಳಗಿನ ಆಂತರ್ಯಕ್ಕಿಳಿದು ನೋಡಿ. ಅಲ್ಲಿ ಪ್ರೇಮ, ಶಾಂತಿ, ಪ್ರಕಾಶ ಮತ್ತು ಶಕ್ತಿಯ ಸೆಲೆಯನ್ನೇಕಾಣುವಿರಿ.

ಪ್ರೇಮವಿಲ್ಲದೆ ಋತವು ಪ್ರಕಟಗೊಳ್ಳದು. ಪ್ರೇಮವೆಂಬುದು ನಮ್ಮ ಹೃದಯಾಂತರಾಳದಲ್ಲಿ ಜ್ವಲಿಸುತ್ತಿರುವ ಪವಿತ್ರಾಗ್ನಿ. ಈ ಪ್ರೇಮದ ಅಗ್ನಿದಿವ್ಯದ ಮೂಲಕವೇ ನಾವು ಋತದ ಪರಂಧಾಮವನ್ನು ಪ್ರವೇಶಿಸಬಹುದು. ಪ್ರೇಮವೊಂದೇ ನಿಮ್ಮನ್ನು ರಕ್ಷಿಸುವ ಪರಮ ದ್ರವ್ಯವಾಗಿದೆ. ಈ ಪ್ರೇಮದಿಂದಲೇ ವಿಶ್ವದ ಪದರಗಳು ವರ್ಣ–ವರ್ಣವಾಗಿ ತೆರೆದುಕೊಳ್ಳುವುದು. ನಾನು ಸದಾ ಪರಮಾತ್ಮನನ್ನು ಪ್ರಾರ್ಥಿಸುವಾಗ, "ಓ ಪರಮ ಪುರುಷನೇ, ನಿನ್ನ ದಿವ್ಯ ಪ್ರೇಮವನ್ನು ನನ್ನೆಡೆಗೆ ಹರಿಸಿ, ನನ್ನನ್ನು ನಿನ್ನ ಪ್ರೇಮ ವಲಯದ ಶಾಶ್ವತ ನಿವಾಸಿಯನ್ನಾಗಿಸು" ಎಂದು ಬೇಡಿಕೊಳ್ಳುತ್ತೇನೆ. ಒಂದೊಮ್ಮೆ ನೀವು ನಿಮ್ಮ ಆಂತರ್ಯಕ್ಕಿಳಿದು ನೋಡಿ, ಅಲ್ಲಿ ದಿವ್ಯತೆಯ ಅನುಗ್ರಹವು ನಿಮಗಾಗಿ ನೆಲೆಸಿರುತ್ತದೆ. ಆ ಪ್ರಭಾ ವಲಯದಲ್ಲಿ ಪ್ರೇಮದ ಹೊರತಾಗಿ ಬೇರೆ ಇನ್ನೇನೂ ನಿಮಗೆ ಕಾಣಸಿಗದು. ಅಲ್ಲಿ **'ನಾನು', 'ನೀನು', 'ಆನು'(ಪುರುಷ), 'ತಾನು'**ಗಳೆಂಬ ಯಾವ ಪ್ರಭೇದವೂ ಗೋಚರಿಸದು. ಅಲ್ಲಿರುವುದು ಕೇವಲ ಪ್ರೇಮ. ಆ ಪ್ರೇಮವೇ ನಿಮಗೆ ಶಕ್ತಿ–ಸಹನೆಗಳನ್ನು ನೀಡಿ ನಿಮ್ಮನ್ನು ಮುನ್ನಡೆಸುತ್ತವೆ.

ಬಾಹ್ಯ ಪ್ರಪಂಚವು ಗೊಂದಲದ ಗೂಡಾಗಿ ನಿಮ್ಮ ಬದುಕನ್ನು ಅಸ್ತವ್ಯಸ್ತವನ್ನಾಗಿಸಲು ಪ್ರಯತ್ನಿಸುತ್ತಿದ್ದರೆ. ನಿಮ್ಮೊಳಗಿನ ಚಿರಂತನ ಪ್ರೇಮವು ನಿಮ್ಮನ್ನು ವೈಫಲ್ಯಗಳಿಂದ ದೂರವಿರಿಸಿ, ನಿಮ್ಮನ್ನು ಸಾಧನೆಯ ಸಾಮಿಪ್ಯಕ್ಕೆ ಕೊಂಡೊಯ್ಯುತ್ತದೆ.

ಎಲ್ಲಿ ಪ್ರೇಮವು ಅದರ ಮೂಲ ರೂಪದಲ್ಲಿಯೇ ನೆಲೆಸಿದೆಯೋ, ಅಂತಹ ಅಂತರಂಗದ ಲೋಕವನ್ನು ಪ್ರವೇಶಿಸಿ ಅಲ್ಲಿನ ಖಾಯಂ ನಿವಾಸಿಗಳಾಗುತ್ತ ಜೀವಿಸಿರಿ.

**ಶ್ರೀಮಾತೆಯವರು ನುಡಿದಂತೆ 29.4.64**

## ವಿಶ್ವಾಸಕ್ಕಿರುವ ಅಗಾಧ ಶಕ್ತಿ

ದಿವ್ಯತೆಯು ಮರ್ತ್ಯದ ಪ್ರತಿಯೋರ್ವ ವ್ಯಕ್ತಿಯ ಸರ್ವ ಇಚ್ಛೆಗಳನ್ನೂ ಈಡೇರಿಸಲು ಸದಾ ಸಿದ್ಧವಾಗಿರುತ್ತದೆ. ನಾವೆಲ್ಲರೂ ಬಯಸುವ ಯಾವುದೇ

ದ್ರವ್ಯಗಳನ್ನಾಗಲಿ ಅದನ್ನು ದಿವ್ಯತೆಯಿಂದ ನೇರವಾಗಿ ಪಡೆಯಬಹುದು. 'ದಿವ್ಯತೆಯ ಋತಮೂಲವು ನಮ್ಮಿಂದ ಬಹು ದೂರದಲ್ಲಿದ್ದು, ಅದು ನಮ್ಮ ಇಚ್ಛೆಗೆ ವಿರುದ್ಧವಾಗಿಯೂ–ಕ್ರೂರಿಯಾಗಿಯೂ ಇದೆ'ಯೆಂದು ನೀವು ಭಾವಿಸಿದಲ್ಲಿ, ಅದು ನಿಮ್ಮಿಂದ ದೂರವಾಗಿ ಕ್ರೂರತನವನ್ನೇ ತೋರುತ್ತದೆ. ಏಕೆಂದರೆ ನೀವು ಶುದ್ಧಾತ್ಮರಾಗಲು ಆ ದಿವ್ಯತೆಯ ಕ್ರೂರತ್ವವನ್ನು ಅನುಭವಿಸುವುದು ಅತ್ಯವಶ್ಯಕ; ಆ ದಿವ್ಯತೆಯು ಕಾಳಿಮಾತೆಯ ಆರಾಧಕರಿಗೆ ಕಾಳಿಯ ರೂಪದಲ್ಲಿಯೂ, ಜ್ಞಾನದ ಅನ್ವೇಷಣೆಗೆಂದು ಹೊರಡುವ ಅಪೇಕ್ಷಿಗೆ ಸರ್ವ ಜ್ಞಾನದ ಭಾಂಡಾರದ ರೂಪದಲ್ಲಿಯೂ, ಭ್ರಮಾವಾದಿಯೋರ್ವನಿಗೆ ಅತೀಂದ್ರಿಯವೂ–ನಿರಾಕಾರವೂ ಆದ ರೂಪದಲ್ಲಿಯೂ ದರ್ಶನವೀಯುವುದು; 'ನಾಸ್ತಿಕನೊಳಗೆ ನಾಸ್ತಿಕವಾಗಿಯೂ, ಪ್ರೇಮಿಯೊಳಗೆ ಪ್ರೇಮವಾಗಿಯೂ ನೆಲೆಸಿರುವ ಆ ದಿವ್ಯತೆಯನ್ನು ತನ್ನ ಆಂತರ್ಯದ ಮಾರ್ಗದರ್ಶಿ'ಯೆಂದು ನಂಬಿರುವ ಪ್ರತಿಯೋರ್ವ ವ್ಯಕ್ತಿಯೊಡನೆ ದಿವ್ಯತೆಯು ಆತ್ಮೀಯ ಸ್ನೇಹಿತನೂ, ನಿಷ್ಠಾವಂತ ಸಹೋದರನೂ ಆಗಿ, ಅವನ ಸಾಧನೆಯಲ್ಲಿ ಸಹಕಾರಿಯಾಗಿ ನಿಲ್ಲುತ್ತದೆ; 'ದಿವ್ಯತೆಯೆಂಬುದು ತನ್ನ ತಪ್ಪುಗಳನ್ನೆಲ್ಲ ಅಳಿಸಿ ಹಾಕಬಲ್ಲ ಮಹಾಶಕ್ತಿ' ಎಂದು ನಂಬಿರುವ ವ್ಯಕ್ತಿಯ ದೋಷಗಳೆಲ್ಲವನ್ನು ಪರಿಹರಿಸಿ, ಅದು ಆತನನ್ನು ಶುದ್ಧೀಕರಿಸುವುದು; ನಮ್ಮ ಬದುಕಿನಲ್ಲಿ ಅದು ಸದಾ ಅನುಗ್ರಹವನ್ನು ತೋರುತ್ತ ನಮ್ಮನ್ನು ಮುನ್ನಡೆಸುವುದು; ಹಾಗಾಗಿ ನಮ್ಮ ಆಂತರ್ಯದ ಆಳದಲ್ಲಿ ನಾವು ನಂಬಿಕೆಯಿಂದ ಏನನ್ನು ಪ್ರತೀಕ್ಷಿಸುತ್ತೇವೆಯೋ ಅದೆಲ್ಲವೂ ದಿವ್ಯತೆಯ ಮೂಲದಿಂದಲೇ ಪ್ರಕಟಗೊಂಡಿರುವದಾಗಿರುತ್ತದೆ.

ದಿವ್ಯತೆಯು ನಿಮ್ಮ ಪ್ರತಿಯೊಂದು ಅಭೀಪ್ಸೆಗೂ ಜೊತೆಗಾರನಾಗಿ ನಿಲ್ಲುತ್ತದೆ. ಹಾಗೆಂದು ಅದು ನಿಮ್ಮ ಬಾಹ್ಯ ಪ್ರವೃತ್ತಿಯೊಂದಿಗೆ ನಡೆಯುವುದು ಎಂದರ್ಥವಲ್ಲ. ಬದಲಾಗಿ ನಿಮ್ಮ ಅಸ್ತಿತ್ವದೊಡನೆ ಮಾತ್ರ ಅದು ನೆಲೆಸಿರುತ್ತದೆ. ಕೆಲವೊಮ್ಮೆ ಅದು ನಿಮ್ಮ ಬಾಹ್ಯ ಅಪೇಕ್ಷೆಗಳಿಗನುಗುಣವಾಗಿ ತನ್ನನ್ನು ತಾನೇ ಮರುರೂಪಿಸಿಕೊಳ್ಳುತ್ತದೆ. ಒಂದು ವೇಳೆ ನೀವು ಏಕಾಂಗಿಯಾಗಿ, ಋತದಿಂದ ಪ್ರತ್ಯೇಕವಾಗಿ, ಹತಾಶೆ–ನಿರಾಶೆಯಲ್ಲಿಯೇ ಬದುಕಬೇಕೆಂದು ನಿರ್ಧರಿಸಿದ್ದಲ್ಲಿ, ದಿವ್ಯತೆಯೂ ಸಹ ನಿಮ್ಮಿಂದ ಬೇರ್ಪಟ್ಟು, ಮುಂದೊಮ್ಮೆ ನೀವು ಬಯಸಿದಾಗ ಮತ್ತೆ ನಿಮ್ಮೊಡನೆ ಒಂದಾಗುತ್ತದೆ. ಅದು ನಿಮ್ಮ ಬಾಹ್ಯ ವರ್ತನೆಯೇ ಆಗಿರಲಿ, ಒಟ್ಟಿನಲ್ಲಿ ವರ್ತನೆಯೆಂಬುದು ನಿಮ್ಮ ಅಭೀಪ್ಸೆಯನ್ನು ಪ್ರಕಾಶಗೊಳಿಸಲು ಬಹು

ಮುಖ್ಯ ಆಕರವಾಗಿರುತ್ತದೆ. ಮರ್ತ್ಯವು ಇನ್ನೂ ಸಹ ನಂಬಿಕೆ(ವಿಶ್ವಾಸಕ್ಕೆ ಇರುವ)ಗಿರುವ ಪ್ರಾಮುಖ್ಯತೆಯನ್ನು, ನಂಬಿಕೆಗಿರುವ ಅತೀಂದ್ರಿಯ ಶಕ್ತಿಯನ್ನು, ಆ ಅತೀಂದ್ರಿಯ ಶಕ್ತಿಗಳನ್ನು ಸೃಷ್ಟಿಸುತ್ತಿರುವ ಪುರುಷನ ಬಗ್ಗೆಯಾಗಲೀ ಇನ್ನೂ ಅರಿತೇ ಇಲ್ಲ. ಒಂದು ವೇಳೆ ನೀವು ದಿವ್ಯತೆಯೇ ಇಳಿದು ಬಂದು, ನಿಮ್ಮನ್ನು ಋತದ ಮೂಲದೆಡೆಗೆ ಕರೆದೊಯ್ಯಲೆಂದು ಬಯಸಿದರೆ, ಅದು ಖಂಡಿತವಾಗಿಯೂ ಊರ್ಧ್ವ ಮೂಲದಿಂದ ಅವರೋಹಿಸಿ, ನಿಮ್ಮನ್ನು ಮೇಲಿನ ಸ್ತರಗಳಿಗೆ ಕೊಂಡೊಯ್ಯುತ್ತದೆ. ಅದು ಸದಾ ನಿಮ್ಮೊಡನೆ–ನಿಮ್ಮೊಳಗೇ ಜಾಗೃತವಾಗಿ ನೆಲೆಸಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/76**

### ಸತ್ಯ ಪ್ರವರ್ತಿಗಿರುವ ಶಕ್ತಿ

ನಮ್ಮನ್ನು ಸದಾ ಕಾಡುವ ಒಂದು ಪ್ರಶ್ನೆಯೆಂದರೆ, ನಮ್ಮ ಬದುಕಿನಲ್ಲಿ ನಡೆದ ಘಟನೆಗಳೆಲ್ಲವೂ ಒಳ್ಳೆಯದಕ್ಕಾಗಿಯೇ ಸಂಭವಿಸಿವೆಯೇ? ಎಂಬುದೇ ಆಗಿದೆ. ಆದರೆ ನಾವು ಅರಿತುಕೊಳ್ಳಬೇಕಾಗಿರುವದೇನೆಂದರೆ, ಇಲ್ಲಿಯವರೆಗೂ ಘಟಿಸಿದ್ದೆಲ್ಲವೂ ಸಂಭವಿಸಲೇಬೇಕಾಗಿತ್ತು. ಹಾಗೂ ಅದು ಬೇರೆ ರೀತಿಯಾಗಿ ಘಟಿಸಲು ಸಾಧ್ಯವೇ ಇರಲಿಲ್ಲ. ಋತದ ಸಾರ್ವತ್ರಿಕ ನಿರ್ಣಯದಿಂದ ಅದು ಈಗ ಸಂಭವಿಸಿದ ರೀತಿಯಲ್ಲಿಯೇ ಅದು ಘಟಿಸಿದೆ. ಈ ಘಟನೆಗಳನ್ನು ನಾವು ಮೊದಲೇ ತಿಳಿದುಕೊಳ್ಳಲು ಸಾಧ್ಯವಿಲ್ಲ. ಅದು ಘಟಿಸಿದ ನಂತರವೇ ಅದರ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಏಕೆಂದರೆ ಆ ಘಟನೆ ಸಂಭವಿಸಲು ಕಾರಣವಾಗಿರುವ ಸಮಸ್ಯೆಯು ಒಬ್ಬ ವ್ಯಕ್ತಿಯದ್ದೇ ಆಗಿರಲಿ ಅಥವಾ ಒಂದು ರಾಷ್ಟ್ರದ ಸರ್ವ ಜನತೆಯದ್ದೇ ಆಗಿರಲಿ, ಅದು ಆಯಾ ವ್ಯಕ್ತಿಗತ–ದೇಶಗತದ ಮನೋಭಾವನೆಯನ್ನು ಅವಲಂಬಿಸಿರುತ್ತದೆ. ಹಾಗೆಯೇ ನಿಮ್ಮ ಮನೋಭಾವನೆಯ ಬದಲಾವಣೆಯಿಂದ ಸಂಭವಿಸಲಿರುವ ಘಟನೆಯ ಬದಲಾವಣೆಯ ಕುರಿತಾಗಿ ಹೇಳಬಹುದಾದರೆ, ನೀವು ನಿಮ್ಮ ಪ್ರಜ್ಞೆಯನ್ನು ಅತಿಮಾನಸದ ಅತ್ಯುನ್ನತ ಪ್ರಜ್ಞೆಯೊಂದಿಗೆ ತಾದ್ಯಾತ್ಮಗೊಳಿಸಿಕೊಂಡಿದ್ದೇ ಆದಲ್ಲಿ ಆ ಘಟನೆಗಳ ಭವಿತವ್ಯವನ್ನು ನೀವು ದರ್ಶಿಸಬಹುದು. ಆದರೆ ಜರುಗಬೇಕಿರುವ ಘಟನೆಯನ್ನು ತಪ್ಪಿಸುವ ಅಥವಾ ಬದಲಿಸುವ ಭರದಲ್ಲಿ ನಿಮ್ಮ ಪ್ರಜ್ಞೆಯು ಊರ್ಧ್ವ ಸ್ತರದಿಂದ ಕೂಡಲೆ ಕೆಳಮಟ್ಟಕ್ಕೆ ಬಿದ್ದರೆ, ನಿಮ್ಮ ಕಾರ್ಯ ಸಫಲವಾಗುವದಿಲ್ಲ. ಆದರೆ ನಿಮ್ಮ

ಪ್ರವೃತ್ತಿಗಿರುವ ಶಕ್ತಿಯಿಂದ ನೀವು ಸಂಭವಿಸಲಿರುವ ಘಟನೆಯ ರೂಪವನ್ನು ದರ್ಶಿಸಲು ಮತ್ತು ಅದನ್ನು ನಿಮಗೆ ಬೇಕಾದಂತೆ ಬದಲಿಸಿಕೊಳ್ಳಲು ಸಾಧ್ಯವಿದೆ! ಉದಾಹರಣೆಗೆ ಯಾರಾದರೊಬ್ಬರು ನಿಮ್ಮನ್ನು ಕೊಲ್ಲಲೆಂದು ಬರುತ್ತಿದ್ದಾರೆಂದು–ಕೊಳ್ಳಿ. ಆಗ ನೀವು ಸಾಮಾನ್ಯ ಪ್ರಜ್ಞೆಯಲ್ಲಿಯೇ ಇದ್ದುಕೊಂಡು, ನಿಮ್ಮ ಬೌದ್ಧಿಕ ಸ್ತರದಿಂದ ವರ್ತಿಸುತ್ತ ಭಯಭೀತಿಯಿಂದ ತತ್ತರಿಸುತ್ತಿದ್ದರೆ. ಆ ಕೊಲೆಗಾರನು ನೇರವಾಗಿ ಬಂದು ತನ್ನ ಕಾರ್ಯವನ್ನು ಮುಗಿಸಿಕೊಂಡು ಹೋಗುತ್ತಿರುತ್ತಾನೆ. ಅದೇ ನೀವು ನಿಮ್ಮ ಪ್ರಜ್ಞೆಯನ್ನು ಊರ್ಧ್ವದ ಪ್ರಜ್ಞೆಯೊಡನೆ ತಾದ್ಯಾತ್ಮೀಕರಿಸಿಕೊಂಡು, ನಿಮ್ಮ ಭಯವನ್ನು ಹತ್ತಿಕ್ಕಿ, ದೈವವನ್ನು ನಿಮ್ಮ ಸಹಾಯಕ್ಕೆಂದು ಆಮಂತ್ರಿಸಿದ್ದಲ್ಲಿ ನಡೆವ ಘಟನೆಯಲ್ಲಿ ಅದರ ಪ್ರಭಾವ ಕೊಂಚ ತಗ್ಗಿ ನಿಮಗೆ ಸ್ವಲ್ಪ ಗಾಯವಾಗಬಹುದು. ಆದರೂ ಅದು ನಿಮ್ಮ ವಿರುದ್ಧ ರೂಪಿತವಾದ ಸಂಚನ್ನು ಸಂಪೂರ್ಣವಾಗಿ ವೈಫಲ್ಯವಾಗುವಂತೆ ಮಾಡುತ್ತದೆ. ಈ ಸತ್ಯ ಪ್ರವೃತ್ತಿಯೇ ಕೆಡುಕುಗಳನ್ನು ರೂಪಾಂತರಿಸುವ ಕೀಲಿಕೈಯಾಗಿದೆ. ಅದನ್ನು ಸಫಲವಾಗಿಸಬೇಕಾದರೆ ನೀವು ಸದಾ ದಿವ್ಯತೆಯೊಂದಿಗೆ ಸಂಪರ್ಕದಲ್ಲಿರಿ, ಅದನ್ನು ನಿಮ್ಮ ಸಾಧನೆಗೆ ಸಹಕಾರಿಯಾಗುವಂತೆ ಆಮಂತ್ರಿಸಿ. ಇದರಿಂದ ನಿಮ್ಮ ಬದುಕಿನಲ್ಲಿ ಉತ್ತಮ ಘಟನೆಗಳು ಸಂಭವಿಸುತ್ತವೆ. ಪ್ರಪಂಚವು ಒಮ್ಮೆಗೆ ಬದಲಾಗುವದಿಲ್ಲ. ಆದರೆ ದಿವ್ಯತೆಯ ಅವತರಣದಿಂದ ಅದು ಸಾಧ್ಯವಾದಷ್ಟು ಶೀಘ್ರ ಗತಿಯಲ್ಲಿ ಮುಂದುವರಿಯುತ್ತದೆ. ಇದನ್ನು ಸಾಧಿಸಬೇಕಾದರೆ, ನೀವು ಯೋಗಿಕ ಮಾರ್ಗದಲ್ಲಿಯೇ ಮುನ್ನಡೆಯಬೇಕೆ ಹೊರತು ಅನ್ಯ ಮಾರ್ಗದಿಂದ ಇದು ಸಾಧ್ಯವಾಗುವದಿಲ್ಲ. ಈ ಅನ್ಯ ಮಾರ್ಗದಲ್ಲಿ ನೀವು ನಡೆದಲ್ಲಿ, ಕಾಡೊಂದರಲ್ಲಿ ದಾರಿತಪ್ಪಿ ಅಲೆವ ಅಲೆಮಾರಿ ಪಯಣಿಗನಂತಾಗುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/154–55**

**ಗೊಂದಲದ ವಾತಾವರಣವು ಸೃಷ್ಟಿಯಾದಾಗ**

ಗೊಂದಲವೆಂಬುದು ನಮ್ಮ ದೈನಂದಿನ ಜೀವನದಲ್ಲಿ ನಾವು ಹೇಗೆ ಬದುಕಬೇಕೆಂಬುದನ್ನು ಕಲಿಸಿಕೊಡುವ ಸಹಾಯಕ ಅಂಶವಾಗಿದೆ. ಇದರರ್ಥ ನೀವು ಸದಾ ಮುಂದೇನಾಗುತ್ತದೆ? ಮುಂದೇನಾಗಬಹುದು? ಎಂದು ಚಿಂತಿಸುತ್ತ ಕೂರುವದಲ್ಲ. ಬದಲಾಗಿ ನಮ್ಮ ಪ್ರತಿದಿನದ ಕಾರ್ಯಗಳಲ್ಲಿ ತೊಡಗಿಕೊಂಡು ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು. ಇದಕ್ಕೆ ವ್ಯತಿರಿಕ್ತವೆಂಬಂತೆ ನಾಳಿನ

ಬದುಕಿಗಾಗಿ ನಾವು ಕೈಗೊಳ್ಳುವ ಯೋಜನೆಗಳು, ಪೂರ್ವನಿಯೋಜನೆಗಳು, ವ್ಯವಸ್ಥೆಗಳು ಬದುಕಿನ ಅಸ್ವಸ್ಥತೆಗೆ ಕಾರಣವಾಗುತ್ತವೆ.

ಪ್ರತಿಕ್ಷಣವೂ ನಾವು ಮೇಲಿನ ಸ್ತರಕ್ಕೇರಬೇಕೆಂದು ಪ್ರಯತ್ನಿಸುತ್ತೇವೆ. ಅದಕ್ಕಾಗಿ ನಾವು ಆಗಿನ ಕ್ಷಣದಲ್ಲಿ ಮಾಡಬೇಕಾದ ಕಾರ್ಯಗಳೆಡೆ ಗಮನ ಕೊಟ್ಟು, ನಂತರ ನಮ್ಮ ಸರ್ವ ಪ್ರಜ್ಞೆಯನ್ನು ಆ ಕಾರ್ಯವನ್ನು ನಿರ್ಧರಿಸಲು ಅನುವು ಮಾಡಿಕೊಡುತ್ತೇವೆ. ಇದರಿಂದ ನಾವೆಂದಿಗೂ ವಿಶಾಲ ದೃಷ್ಟಿಯನ್ನು ಹೊಂದಲು ಸಾಧ್ಯವಾಗುವದಿಲ್ಲ. ಅಲ್ಲಿ ನಾವು ಕೇವಲ ಭಾಗಶಃ ದೃಷ್ಟಿಯನ್ನು ಮಾತ್ರ ಹೊಂದುತ್ತೇವೆ. ಹಾಗಾಗಿ ನಾವು ನಮ್ಮ ಕಾಣ್ಕೆಯನ್ನು ವಿಸ್ತರಿಸಿಕೊಳ್ಳಬೇಕಿದೆ. ಅದನ್ನು ಬಿಟ್ಟು ಅಪಾಯಕಾರಿಯಾದ ನಿಲುವುಗಳಿಗೆ ನೀವು ಹೆಚ್ಚಿನ ಒತ್ತನ್ನು ಕೊಟ್ಟಿದ್ದೇ ಆದಲ್ಲಿ ಅದು ನಿಮ್ಮ ಸಂಕುಚಿತ ದೃಷ್ಟಿಯನ್ನು ಇನ್ನಷ್ಟು ಸಂಕುಚಿತ–ಗೊಳ್ಳುವಂತೆ ಪ್ರೇರೆಪಿಸುತ್ತದೆ. ನಿಮ್ಮ ಈ ಪ್ರವೃತ್ತಿಯಿಂದ ದಿವ್ಯಮಾತೆಯು ನಿಮ್ಮ ಸಾಧನೆಯ ಕುರಿತು ಚಿಂತಿತಳಾಗುತ್ತಾಳೆ. ಅದಕ್ಕಾಗಿ ಯಾವಾಗ್ಯಾವಾಗ ನಿಮ್ಮ ದೃಷ್ಟಿಯು ಗೊಂದಲದ ಗೂಡಾಗಿ ಮಾರ್ಪಡುತ್ತದೆಯೋ ಆಗೆಲ್ಲ ನೀವು ಮಾಡಬೇಕಿರುವುದು ಇಷ್ಟೇ. ನೀವು ನಿಮ್ಮ ಪ್ರಜ್ಞೆಯಾಳಕ್ಕಿಳಿದು ನೋಡಬೇಕು. ಅಲ್ಲಿ ನಿಮಗೆ ಆ ಏಕ ಅಸ್ತಿತ್ವ, ಏಕ ಪ್ರಜ್ಞೆ, ಏಕ ಶಕ್ತಿಯ ಸಾನಿಧ್ಯದ ಸಾಮೀಪ್ಯವುಂಟಾಗಿ ಆಂತರ್ಯದ ಏಕಮೇವತೆಯ ಅನುಭವವಾಗುತ್ತದೆ. ಅಲ್ಲಿ ನಮ್ಮ ಅಲ್ಪದೃಷ್ಟಿ, ಅಲ್ಪಜ್ಞಾನ, ಕೀಳರಿಮೆಯ ತೀರ್ಪುಗಳೆಲ್ಲವೂ ಆ ಏಕಮೇವತೆಯ ದರ್ಶನದೆದುರು ಅತಿ ಸೂಕ್ಷ್ಮವಾಗಿ ತೋರುತ್ತದೆ. ಹಾಗಾಗಿ ನಾವು ನಮ್ಮಲ್ಲಿರುವ ಪ್ರತ್ಯೇಕತಾ ಮನೋಭಾವನೆಯ ಮೂಲವನ್ನಿರಬೇಕಾದರೆ ಅದಕ್ಕೆ ಅತಿಮುಖ್ಯ ಕಾರಣವಾಗಿರುವ ನಮ್ಮಲ್ಲಿನ ಕನಿಷ್ಠ ಪ್ರಜ್ಞೆಯನ್ನು ಅರಿತುಕೊಳ್ಳಬೇಕು. ಹಾಗೂ ಅದನ್ನು ನಿರ್ಮೂಲಿಸಲು ನಮ್ಮ ನಂಬಿಕೆ, ಸ್ವ–ಅರ್ಪಣೆ, ಸಮರ್ಪಣೆಯ ಭಾವನೆಗಳನ್ನು ಇನ್ನಷ್ಟು ಬಲಗೊಳಿಸಬೇಕು. ಇದರಿಂದಾಗಿಯೇ ನಿಮ್ಮ ಪೂರ್ಣ ವ್ಯಕ್ತಿತ್ವವು ರೂಪುಗೊಳ್ಳುವುದು.

ಇಲ್ಲದಿದ್ದರೆ ನಿಮ್ಮ ದೃಷ್ಟಿಯು ಕೇವಲ phantasmagoria(ಅರ್ಧಕನಸರ್ಧ ಎಚ್ಚರವಿರುವ ಸಂದರ್ಭದಲ್ಲಿ ಉಂಟಾಗುವ ಸನ್ನಿದರ್ಶನಗಳು)ಗೆ ಮಾತ್ರ ಸೀಮಿತವಾಗುಳಿಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/185**

ಮತ್ತೊಮ್ಮೆ ಕೇಳಿ: ಮಾನವನು ತನ್ನ ದಿವ್ಯತೆಯ ಮೂಲದಿಂದ ಬೇರ್ಪಟ್ಟು ಪೃಥ್ವಿಯನ್ನು ಪ್ರವೇಶಿಸಿದಾಗ, ಅವನ ಮೇಲೆ ಯಾವುದೇ ಪ್ರಭಾವವನ್ನು ಹೇರಲಾಗಿರಲಿಲ್ಲ. ಸ್ವರ್ಗೀಯ ನೆಲೆಗಳಿಂದ ಚ್ಯುತರಾದ ಆತ್ಮಗಳು ಅಪರಾಧಿಗಳಾಗಿ ಈ ಭೂಮಿಯೆಂಬ ಬಂಧೀಖಾನೆಗೆ ಬಂದು ಸೇರುತ್ತವೆ. ಮತ್ತು ಇಲ್ಲಿ ಆ ಆತ್ಮಗಳನ್ನು ಕಾಯಲೆಂದು ಕ್ಷಿತಿಜದಂಚಿನಲ್ಲಿ ಜ್ವಲಂತ ಶಸ್ತ್ರಗಳನ್ನು ಹಿಡಿದ ನಿರೀಕ್ಷಕ ದೂತರು ಸದಾ ಪಹರೆ ಸುತ್ತುತಿರುತ್ತಾರೆ. ಅವನು ತನ್ನ ಪ್ರಜ್ಞೆಯ ಔನ್ನತ್ಯಕ್ಕೇರಲು ಪ್ರಯತ್ನಿಸುತ್ತಿರುವದನ್ನು ಅಲ್ಲಿಂದಲೇ ಅವರು ಗಮನಿಸುತ್ತಿರುತ್ತಾರೆ. ಆದರೆ ಭುವಿಗೆ ಬಂದ ಮಾನವನು, ತನ್ನನ್ನು ತನ್ನ ಕರ್ಮ ಬಂಧನದಿಂದ ಬಿಡಿಸಿ, ತನ್ನನ್ನು ಪ್ರಜ್ಞೆಯ ಊರ್ಧ್ವ ಸ್ತರಗಳೆಡೆ ಕರೆದೊಯ್ಯಲೆಂದು ಕಾಯುತ್ತಿರುವ ಬೆಳಕಿನ ಮೂಲವನ್ನು ಅಲಕ್ಷಿಸುತ್ತ, ಭುವಿಯ ಜಂಜಡಗಳಲ್ಲಿಯೇ ಮುಳುಗಿ ಬಿದ್ದಲ್ಲೇ ಬಿದ್ದ ಮೆದ್ದ–ಹಾವಿನಂತಾಗಿರಲು, ಆ ಪ್ರಕಾಶದ ಮೂಲವು ಅವನಿಗೆ ಇನ್ನೂ ಹತ್ತಿರವಾಗಿ ಸಹಕರಿಸಲೆಂದು ಅವನ ಆಂತರ್ಯದ ಆಳದಲ್ಲಿಯೇ ಹುದುಗಿ ನೆಲೆಗೊಂಡಿತು. ಯಾವಾಗ ಮಾನವನು ತನ್ನೊಡನೆ ಭುವಿಗೆ ಬಂದ ಅತಿಮಾನಸ ಪ್ರೇಮವನ್ನು ತೊರೆದು ಅದರೊಡನೆ ಇರುವ ತನ್ನ ಸಂಪರ್ಕವನ್ನು ಸಂಪೂರ್ಣವಾಗಿ ತೊರೆದುಕೊಂಡನೋ, ಆವಾಗ ಆ ಪ್ರೇಮವು ತನ್ನ ಪ್ರವೃತ್ತಿಯನ್ನು ಪರಿವರ್ತಿಸಿಕೊಂಡು, ಯುಗಮಾನದಲ್ಲಿ ನಡೆದ ಅಸಂಖ್ಯ ಹತ್ಯಾ ಕಾಂಡದಲ್ಲಿ ಕಳೆದುಹೋಯಿತು. ಮತ್ತು ಭೂಮಂಡಲದ ಮಾನವನಾದಿಯಾದ ಅಸಂಖ್ಯ ಜೀವ ಸಂಕುಲಗಳ ಆಂತರ್ಯವನ್ನೇ ತನ್ನ ಆವಾಸ ಸ್ಥಾನವಾಗಿ ಮಾಡಿಕೊಂಡು ಅಲ್ಲಿಯೇ ಗುಟ್ಟಾಗಿ ನೆಲೆಸಲಾರಂಭಿಸಿತು. ಹೀಗಾಗಿಯೇ ಮರ್ತ್ಯದ ಪ್ರತಿಯೊಂದು ಕೆಡುಕು ಮತ್ತು ತಿರಸ್ಕಾರಗಳು ತಮ್ಮೊಳಗೆ ಪ್ರೇಮದ ಸೆಲೆಯೊಂದನ್ನು, ದೈವಿಕ ಚಿಂತನೆಯೊಂದನ್ನು ಹೊಂದಿರುತ್ತವೆ. ಈ ಇಡೀ ವಿಶ್ವದಲ್ಲಿ ದಿವ್ಯತೆಗೇರುವ ಶಕ್ತಿಯಿರುವುದು ಮಾನವನಿಗೆ ಮಾತ್ರ. ಅವನೊಳಗೆ ಋತ, ಸತ್ಯ, ಚೇತನಗಳ ಆಗರವೇ ಅಡಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/46**

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**16**

## ಅಧ್ಯಾಯ – 15

## ಅವತಾರದ ಪರಿಕಲ್ಪನೆಯ ಸಾಧ್ಯತೆ ಮತ್ತು ಉದ್ದೇಶ

ಕೃಷ್ಣನು ಹೇಳುತ್ತಿರುವ ಯೋಗದಲ್ಲಿ ಜ್ಞಾನ ಮತ್ತು ಕರ್ಮಗಳು ಎರಡೂ ಒಂದಾಗುತ್ತವೆ; ಕರ್ಮಗಳ ಯೋಗವು ಜ್ಞಾನ ಯಜ್ಞದ ಯೋಗದ ಜೊತೆ ಸೇರಿ ಒಂದಾಗುತ್ತದೆ; ಕರ್ಮಗಳು ಜ್ಞಾನದಲ್ಲಿ ಕೃತಕೃತ್ಯತೆ ಪಡೆಯುತ್ತವೆ; ಜ್ಞಾನವು ಕರ್ಮಗಳಿಗೆ ಸಹಾಯಕವಾಗಿ ನಿಲ್ಲುತ್ತದೆ, ಸ್ವರೂಪ ಬದಲಾವಣೆ ಮಾಡುತ್ತದೆ ಮತ್ತು ಅವುಗಳಲ್ಲಿ ಪ್ರಕಾಶವನ್ನು ತುಂಬುತ್ತದೆ, ಅವುಗಳಲ್ಲಿನ ಅಜ್ಞಾನವನ್ನು ದೂರಗೊಳಿಸುತ್ತದೆ ಹಾಗೂ ಜ್ಞಾನ ಮತ್ತು ಕರ್ಮ ಎರಡನ್ನು ಪುರುಷೋತ್ತಮನಿಗೆ ಸಮರ್ಪಿಸುತ್ತದೆ; ಪರಮೋಚ್ಚ ದೇವಾಧಿದೇವನಾದ ಪುರುಷೋತ್ತಮನೇ ನಮ್ಮೊಳಗೆ, ನಮ್ಮ ಅಂತರಂಗದಲ್ಲಿ ನಾರಾಯಣನ ರೂಪದಲ್ಲಿ ಇದ್ದಾನೆ. ಅವನೇ ನಮ್ಮೆಲ್ಲರ ಸತ್ತೆಯೆ, ಕರ್ಮಗಳ ಪ್ರಭು, ನಮ್ಮ ಹೃದ್ಗುಹೆಯಲ್ಲಿ ಕಾಣದಂತೆ ರಹಸ್ಯವಾಗಿ ಸ್ಥಿತನಾಗಿದ್ದಾನೆ. ಅವನೇ ಮಾನವ ದೇಹಧಾರಣ ಮಾಡಿ ಭೂಮಿಯ ಮೇಲೆ ಅವತರಿಸುತ್ತಾನೆ. ಪರಮ ಪುರುಷನೇ ಮಾನವನಾಗಿ ಕಾಣಿಸಿಕೊಳ್ಳುತ್ತಾನೆ, ಮಾತಿನ ಮಧ್ಯದಲ್ಲಿ ಈ ರಹಸ್ಯವನ್ನು ತಾವು ಸೂರ್ಯದೇವ, ವಿವಸ್ವಾನನಿಗೆ ಹೇಳಿಕೊಟ್ಟಿರುವುದನ್ನು, ವಿವಸ್ವಾನನು ತನ್ನ ಪುತ್ರ ಮನುವಿಗೂ, ಮನುವು ಇಕ್ಷ್ವಾಕುವಿಗೂ ಹೇಳಿರುವುದಾಗಿ ಈ ವಿಧವಾಗಿ ಋಷಿಗಳಿಂದ ಋಷಿಗಳಿಗೆ ಈ ರಹಸ್ಯ ಬಂದಿತೆಂದು ಕೃಷ್ಣನು ತಿಳಿಸುತ್ತಾನೆ. ಆದರೆ ಕಾಲಾಂತರದಲ್ಲಿ ಅದು ಕಳೆದು–ಹೋಗಿರುವುದರಿಂದ ತಾನು ಅರ್ಜುನನಿಗೀಗ ಮತ್ತೆ ಹೇಳಿಕೊಡುತ್ತಿರುವುದಾಗಿ ಸಾರುತ್ತಾನೆ. ಅರ್ಜುನನು ತನಗೆ ಅತ್ಯಂತ ಪ್ರಿಯನಾದವನು, ಅತೀ ಆಪ್ತಮಿತ್ರ ಹಾಗೂ ಸಹಚರನೆಂದೂ ಅಂತೆಯೇ ಅವತಾರ ಸ್ವರೂಪನಾದ ತಾವು ಅವನಿಗೆ ರಹಸ್ಯವನ್ನುಯಿರಿಸುವುದಾಗಿ ಹೇಳುತ್ತಾನೆ. ಇದೇ ಅತ್ಯಂತ ಗೂಢವಾದ ವಿದ್ಯೆ, ಇದು ಎಲ್ಲ ಯೋಗಗಳಿಗಿಂತ ಶ್ರೇಷ್ಠವಾದದ್ದು; ಉಳಿದೆಲ್ಲ ಯೋಗಗಳು ಒಂದೋ ನಿರ್ಗುಣ ಬ್ರಹ್ಮನ ಕಡೆಗೆ ಅಥವಾ ಸಗುಣ ಪರಮಾತ್ಮನ ಕಡೆಗೆ, ನಿಷ್ಕ್ರಿಯವಾದ ಮೋಕ್ಷ ಜ್ಞಾನದ ಕಡೆಗೆ, ಅದರ ಅತ್ಯಂತ ಘನಿಷ್ಠ ಆನಂದದೆಡೆಗೆ ಒಯ್ಯುತ್ತವೆ;

ಆದರೆ ಈ ಯೋಗವು ಮಾತ್ರ ಅತ್ಯಂತ ಉನ್ನತವಾದ ಸತ್ಯವನ್ನು ಸಮಗ್ರ ಸತ್ಯವನ್ನು, ರಹಸ್ಯವನ್ನು ನೀಡುತ್ತದೆ. ಇದು ದೈವೀ ಶಾಂತಿಯ ಜೊತೆಗೆ ದೈವೀ ಕರ್ಮಗಳನ್ನು ಮಾಡುವಂತೆ ಪ್ರೇರಿಸುತ್ತದೆ, ದೈವೀ ಜ್ಞಾನವನ್ನು ಸಂಪಾದಿಸಿಕೊಡುತ್ತದೆ, ಪರಿಪೂರ್ಣವಾದ ಸ್ವಾತಂತ್ರ್ಯದಲ್ಲಿ (ಮುಕ್ತಿಯಲ್ಲಿ) ಕರ್ಮ ಹಾಗೂ ದೈವೀ ಆನಂದಗಳನ್ನು ಏಕೀಕರಿಸುತ್ತದೆ. ಇದು ಯೋಗದ ಎಲ್ಲ ಪ್ರಕಾರಗಳನ್ನೂ ಸಮನ್ವಯಗೊಳಿಸುತ್ತದೆ, ಪರಮಾತ್ಮನ ಎಲ್ಲ ಮಾರ್ಗಗಳನ್ನು, ಪಂಥಗಳನ್ನು ಏಕೀಕರಿಸುತ್ತದೆ, ಆತನ ಎಲ್ಲ ಅಷ್ಟೇ ಏಕೆ ವಿರೋಧಿ ಶಕ್ತಿಗಳನ್ನು ಕೂಡ ಸಮೀಕರಿಸುತ್ತದೆ. ಪರಮಾತ್ಮನ ಎಲ್ಲ ಪ್ರಕಾಶ ಸ್ವರೂಪಗಳನ್ನು, ಶಕ್ತಿಗಳನ್ನು ಏಕೀಕರಿಸುತ್ತದೆ, ಆದ್ದರಿಂದ ಗೀತೆಯು, ಅನೇಕರು ತಿಳಿದಿರುವಂತೆ ಹಾಗೂ ಹೇಳುವಂತೆ, ಕೇವಲ ಕರ್ಮ ಯೋಗವನ್ನು ಉಪದೇಶಿಸುವುದಿಲ್ಲ; ಅವರ ಪ್ರಕಾರ ಹಾಗೆ ನೋಡಿದರೆ ಕರ್ಮ ಮಾರ್ಗವು ಕನಿಷ್ಠ ಪಥ, ಆದರೆ ಅದು ಸರ್ವೋತ್ತಮ ಯೋಗವಾಗಿದೆ. ಎಲ್ಲವನ್ನು ಸಮನ್ವಯಗೊಳಿಸಿ ಮಾಡುವ ಪೂರ್ಣ ಯೋಗವಾಗಿದೆ, ನಮ್ಮ ಅಸ್ತಿತ್ವದ ಸಕಲ ಶಕ್ತಿಗಳನ್ನು ಪರಮಾತ್ಮಭಿಮುಖಗೊಳಿಸಿ, ನಮ್ಮ ಸಮಸ್ತ ಅಸ್ವಿತ್ವವನ್ನು ಅವನೆಡೆಗೆ ಎತ್ತರಿಸುವ ಪ್ರಯತ್ನ ಮಾಡುತ್ತದೆ.

ಯೋಗ ಪರಂಪರೆಯ ಬೆಳವಣಿಗೆಯನ್ನು ನಿಜವಾಗಿ ಇನ್ನೊಂದು ವಿಶೇಷವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕಾಗಿತ್ತು, ಆದರೆ ಅರ್ಜುನನು ಮಾತ್ರ ಅತಿ ಸ್ಥೂಲ ಅರ್ಥದಲ್ಲಿ ಗ್ರಹಿಸಿದನು, ಅವನು ಕೃಷ್ಣನನ್ನು ಪ್ರಶ್ನಿಸಿದ್ದೇನೆಂದರೆ, ಸೂರ್ಯ, ಪ್ರಜಾಪತಿ, ಇಕ್ಷ್ವಾಕು ವಂಶದ ಎಲ್ಲ ಪೂರ್ವಜರು ಕೃಷ್ಣನಿಗಿಂತ ಅತ್ಯಂತ ಪ್ರಾಚೀನರು; ಹೀಗಿರುವಾಗ ಅವರಿಗೆ ಕೃಷ್ಣನು ಈ ಯೋಗವನ್ನು ಹೇಳಿಕೊಟ್ಟದ್ದು ಹೇಗೆ? ಕೃಷ್ಣನೇನೋ ಇತ್ತೀಚಿಗೆ ಜನಿಸಿದವನು, ತನ್ನ ಸಮಕಾಲೀನನು ಎಂಬ ಭಾವ ಅವನಿಗೆ. ಕೃಷ್ಣನು ಅವನಿಗೆ ಉತ್ತರ ಕೊಡುವುದಿಲ್ಲ. ಅವನೇನೋ ದೇವರು, ಅವನಿಗೆಲ್ಲ ಗೊತ್ತು, ಅವನೇ ಎಲ್ಲ ಜ್ಞಾನದ ತವನಿಧಿ; ಆದ್ದರಿಂದ ಎಲ್ಲ ದೇವತೆಗಳಿಗೆ ಸೂರ್ಯ ಮುಂತಾದವರಿಗೆ ಜ್ಞಾನ ಕೊಟ್ಟಿದ್ದಾನೆ ಎಂದು ತಿಳಿಯುವುದರಲ್ಲಿ ತಪ್ಪೇನಿದೆ? ಭರ್ಗೋ ಸವಿತುಃ ದೇವಸ್ಯ ಯೋನಃ ಧಿಯಃ ಪ್ರಚೋದಯಾತ್ ಅಂದರೆ ಅವನೇ ದೇವಾನುದೇವತೆಗಳ ಬುದ್ಧಿಯನ್ನು, ಜ್ಞಾನವನ್ನು ಬೆಳಗಿಸುವವನು ಎಂದು ಗಾಯತ್ರಿ ಮಂತ್ರ ಕೂಡ ಹೇಳುತ್ತದೆ. ಆದರೆ ಕೃಷ್ಣ ಹೀಗೆ ಉತ್ತರಿಸುವುದಿಲ್ಲ. ತನ್ನೊಳಗಿರುವ ದೈವತ್ವವನ್ನು (ಜಗತ್ತಿಗೆ) ಅರ್ಜುನನಿಗೆ ತಿಳಿಸುವ ಸಮಯವೆಂದು ಆ ಪ್ರಶ್ನೆಯನ್ನು ಸ್ವೀಕಾರ ಮಾಡುತ್ತಾನೆ. ತಾನು ಈ ಮೊದಲೇ ಅರ್ಜುನನಿಗೆ ಹೇಳಿದ್ದಾಗಿದೆ, ಕರ್ಮ ಯೋಗವನ್ನು

ವಿವರಿಸುವಾಗ ಕರ್ಮ ಮಾಡಿಯೂ ಮಾಡದಂತೆ ಹೇಗಿರಬೇಕು ಎಂಬುದನ್ನು ತಿಳಿಸಿದ್ದಾನೆ. ತನ್ನನ್ನು ದೈವೀ ಉದಾಹರಣೆಯಾಗಿ ನೀಡಿದ್ದಾನೆ. ಆದರೆ ಅಲ್ಲಿ ಈ ತತ್ವವನ್ನು ಪೂರ್ತಿಯಾಗಿ ವಿಸ್ತಾರ ಮಾಡಿ ಹೇಳಲಿಲ್ಲ. ಆದರೆ ಆ ಸಂಧಿಯನ್ನು ಈಗ ಬಳಸಿಕೊಂಡು ತಾನು ಪುರುಷೋತ್ತಮನ ಅವತಾರ ಎಂಬುದನ್ನು ಸ್ಪಷ್ಟಪಡಿಸುತ್ತಾನೆ, ಸ್ಪಷ್ಟ ಶಬ್ದಗಳಲ್ಲಿ ಘೋಷಿಸುತ್ತಾನೆ ಕೂಡ.

"ದೇವ ಗುರು" ಅನ್ನುವ ಎರಡನೆಯ ಅಧ್ಯಾಯದಲ್ಲಿ ಗೀತೆಗೆ ಸಮ್ಮತವಾಗಿರುವ ವೇದಾಂತದ ಪರಿಕಲ್ಪನೆಯ ಅವತಾರ ಸಿದ್ಧಾಂತವನ್ನೂ ನಾವೀಗಾಗಲೇ ಸಂಕ್ಷಿಪ್ತವಾಗಿ ನೋಡಿದ್ದೇವೆ; ಅದೇ ಅವತಾರ ತತ್ವವನ್ನು ಕುರಿತು ಈಗ ವಿವರವಾಗಿ ವಿಶ್ಲೇಷಣೆ ಮಾಡೋಣ, ಅವತಾರವು ದಿವ್ಯ ಜನ್ಮದ ವೈಶಿಷ್ಟ್ಯ ಹೊಂದಿದೆ. ದಿವ್ಯ ಜನ್ಮದ ಬಾಹ್ಯ ರೂಪವನ್ನೇ ನಾವು ಅವತಾರ, ಅವತಾರ ಪುರುಷ ಎಂದು ಕರೆಯುತ್ತೇವೆ. ಗೀತೆಯ ಸಮಗ್ರ ಬೋಧನೆಯಲ್ಲಿ ಅವತಾರದ ಪರಿಕಲ್ಪನೆಯೊಂದು ಮಹತ್ವದ ಸೇತುವೆಯ ಹಾಗಿದೆ. ಗೀತಾಚಾರ್ಯನಾದ ಕೃಷ್ಣನ ಮಾತುಗಳನ್ನೇ ನಾವಿಲ್ಲಿ ನೇರವಾಗಿ ಅನುವಾದ ಮಾಡಿ ನೋಡೋಣ; ಅವತಾರದ ಸ್ವಭಾವ, ಅದರ ಪ್ರಕಟನೆಯ ಉದ್ದೇಶ ಎಲ್ಲವನ್ನೂ ಅವನು ಸ್ಪಷ್ಟವಾಗಿ ಹೇಳಿರುವುದನ್ನು ನಾವಿಲ್ಲಿ ಕಾಣುತ್ತೇವೆ ಹಾಗೂ ಅವತಾರದ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಆಧಾರಗಳ ನೆನಪು ತಾನಾಗಿ ಆಗುವಷ್ಟು ಪ್ರಚೋದನೆಕಾರಿಯಾಗಿದೆ ಕೃಷ್ಣನ ವಿವರಣೆ, "ಅರ್ಜುನಾ! ನಾನಿಲ್ಲಿಯವರೆಗೆ ಎಷ್ಟೋ ಜನ್ಮಗಳನ್ನೆತ್ತಿದ್ದೇನೆ. ಅದೇ ತರಹ ನೀನೂ ಸಹ ಅಗಣಿತ ಜನ್ಮಗಳನ್ನೆತ್ತಿರುವಿ. ಆದರೆ ವ್ಯತ್ಯಾಸವಿಷ್ಟೇ, ಅವೆಲ್ಲವನ್ನೂ ನಾನು ಬಲ್ಲೆ, ನನಗೆ ಮರೆತು ಹೋಗಿಲ್ಲ. ಆದರೆ ನಿನಗೆ ನಿನ್ನ ಗತ ಜನ್ಮಗಳ ಬಗ್ಗೆ ಏನೂ ಗೊತ್ತಿಲ್ಲ, ಎಲ್ಲ ಮರೆತು ಹೋಗಿದೆ. ನಾನು ಅಜನೂ, ಅವ್ಯಯನೂ ಆಗಿದ್ದೇನೆ. ಸರ್ವ ಭೂತ ಮಹೇಶ್ವರ ಎಂದರೆ ನಾನೇ. ನಾನು ನನ್ನ ಪ್ರಕೃತಿಯನ್ನು ಅಧಿಷ್ಠಾನವನ್ನಾಗಿ ಮಾಡಿಕೊಂಡು ಆತ್ಮ ಮಾಯೆಯಿಂದ ಜನ್ಮ ತಾಳುತ್ತೇನೆ. ಯಾವಾಗ ಧರ್ಮಕ್ಕೆ ಗ್ಲಾನಿಯುಂಟಾಗುವುದೋ, ಅಧರ್ಮವು ಹೆಚ್ಚುವುದೋ ಆಗ ನಾನು ಜನ್ಮ ತಾಳುತ್ತೇನೆ. ಸಜ್ಜನರ ಸಂರಕ್ಷಣೆಗಾಗಿ ದುರ್ಜನರ ವಿನಾಶಕ್ಕಾಗಿ, ನ್ಯಾಯ, ಧರ್ಮಗಳ ಸಂಸ್ಥಾಪನೆಗಾಗಿ ಯುಗ–ಯುಗಗಳಲ್ಲಿ ನಾನು ಜನ್ಮ ತಳೆದು ಬರುತ್ತೇನೆ. ನನ್ನ ದಿವ್ಯ ಜನ್ಮ ಹಾಗೂ ದಿವ್ಯ ಕರ್ಮಗಳನ್ನು ಯಾರು ತತ್ವತಃ ತಿಳಿದುಕೊಳ್ಳುತ್ತಾರೋ, ಅವರು ದೇಹ ತ್ಯಾಗದ ನಂತರ ಪುನಃ ಜನ್ಮ ತಾಳುವುದಿಲ್ಲ, ಅವರು ನನ್ನನ್ನು ಸೇರಿಕೊಳ್ಳುತ್ತಾರೆ. ಅರ್ಜುನ! ಇಷ್ಟಾ ನಿಷ್ಟ, ಭಯ, ಕ್ರೋಧ ಇವುಗಳನ್ನು ತ್ಯಾಗ ಮಾಡಿ ಯಾರು

ನನ್ನನ್ನು ನಿತ್ಯ ಭಜಿಸುತ್ತಾರೋ (ಚಿಂತಿಸುತ್ತಾರೋ), ನನ್ನನ್ನೇ ಆಶ್ರಯಿಸುತ್ತಾರೋ ಅಂಥವರು ಜ್ಞಾನ ತಪಸ್ಸುಗಳಿಂದ ಶುದ್ಧರಾಗಿ ನನ್ನ ಪ್ರಕೃತಿಯಲ್ಲಿ ಬಂದು ಸೇರುತ್ತಾರೆ. ಮದ್‌ಭಾವ ಮಾಗತಾಃ. ಯಾರು ಯಾವ ವೃತ್ತಿಯಿಂದ (ಮನೋಧರ್ಮದಿಂದ) ನನ್ನೆಡೆಗೆ ಬರುತ್ತಾರೋ ಅಂಥವರ ವೃತ್ತಿಯನ್ನನುಲಕ್ಷಿಸಿ ನಾನು ನನ್ನ ಪ್ರೀತಿಯನ್ನು ಧಾರೆಯೆರೆಯುತ್ತೇನೆ – ಭಜಾಮ್ಯಹಮ್. ಹೇ ಪಾರ್ಥನೇ! ಮಾನವನು ಸರ್ವಥಾ ನನ್ನೆಡೆಗೇ ನಡೆದು ಬರುತ್ತಾನೆ, ಯಾವುದೇ ಮಾರ್ಗ, ಮತ ಪಂಥ ಅನುಸರಿಸಿದರೂ ಕೊನೆಗೆ ನನ್ನ ಬಳಿಯೇ ಬರುತ್ತಾನೆ, ನನ್ನ ಮಾರ್ಗವನ್ನೇ ತುಳಿಯುತ್ತಾನೆ.” (4.5–11)

ಮುಂದುವರಿದು ಗೀತೆ ಹೀಗೆ ಹೇಳುತ್ತದೆ, ಮಾನವರು ಸಾಮಾನ್ಯವಾಗಿ ತಾವು ಮಾಡುವ ಕೆಲಸ, ಕಾರ್ಯ, ಕರ್ಮಗಳು ಯಶಸ್ವಿಯಾಗಲೆಂಬ ಉದ್ದೇಶದಿಂದ, ಕರ್ಮಫಲ ಪ್ರಾಪ್ತಿಯಾಗಲೆಂಬ ಉದ್ದೇಶದಿಂದ ದೇವತೆಗಳನ್ನು ಯಜ್ಞಯಾಗಾದಿಗಳ ಮೂಲಕ ಆರಾಧಿಸುತ್ತಾರೆ. ಈ ದೇವತೆಗಳೆಂದರೆ ಏಕಮೇವಾದ್ವಿತೀಯನಾಗಿರುವ ಪರಮಾತ್ಮನ ವಿವಿಧ ರೂಪಗಳೇ ಆಗಿದ್ದಾರೆ. ಒಬ್ಬನೇ ಆಗಿರುವ ದೇವಾಧಿದೇವನ ವಿವಿಧ ವ್ಯಕ್ತಿ ಭೂತ ದರ್ಶನ ಇದು. ಕರ್ಮ ಯಜ್ಞದಿಂದ ದೇವತೆಗಳನ್ನು ಆರಾಧನೆ ಮಾಡುವುದರಿಂದ, ಈ ಮಾನವ ಲೋಕದಲ್ಲಿ ಜ್ಞಾನ ರಹಿತ ಕರ್ಮಗಳು ಯಾವ ಸಿದ್ಧಿಯ ಸಲುವಾಗಿ ಪರಿವರ್ತಿತವಾಗಿರುವುವೋ ಅವು ಬೇಗನೇ ಮತ್ತು ಸುಲಭವಾಗಿ ಲಭ್ಯವಾಗುತ್ತವೆ. ಮಾನವ ಲೋಕದಲ್ಲಿ ಮಾತ್ರ ಈ ತೆರನಾದ ಸಿದ್ಧಿಯ ಸಾಧ್ಯತೆ ಇದೆ. ಅಂದರೆ ಇಂಥ ಸಿದ್ಧಿಗಳ ಕ್ಷೇತ್ರವು ಮಾನವ ಲೋಕವೊಂದೇ ಆಗಿದೆ. ಸರ್ವ ಶ್ರೇಷ್ಠನಾದ ಪರಮಾತ್ಮನನ್ನೇ ಉದ್ದೇಶಿಸಿ, ಜ್ಞಾನಯುಕ್ತ ಯಜ್ಞ ಮಾಡಿ ಮಾನವನು ಪಡೆಯಬಹುದಾದ ಆತ್ಮಸಿದ್ಧಿಯು ಮೇಲೆ ಹೇಳಿದ ಸಿದ್ಧಿಗಳಿಗಿಂತ ಬಹಳ ದುರ್ಲಭವಾಗಿದೆ. ಈ ಸಿದ್ಧಿಯ ಲಾಭವು ಅಸ್ತಿತ್ವದ ಉಚ್ಚ ಭೂಮಿಕೆಗೆ ಹೋದವರಿಗೆ ಮಾತ್ರ ಸಿಕ್ಕುವುದು. ಅಂಥ ಸಿದ್ಧಿಯ ಸ್ವರೂಪವು ಸಾಮಾನ್ಯ ಮಾನವನ ಕಲ್ಪನೆಗೆ ಬೇಗನೇ ಎಟಕುವುದಿಲ್ಲ, ತಿಳಿಯುವುದಿಲ್ಲ. ಆದ್ದರಿಂದ ಸಾಮಾನ್ಯ ಮಾನವರಿಗಾಗಿ ತಮ್ಮ ತಮ್ಮ ಪ್ರಕೃತಿ, ಗುಣ, ಕರ್ಮ ಹಾಗೂ ವೃತ್ತಿಗನುಸಾರವಾಗಿ ಚತುರ್ವಿಧ್ಯ ಧರ್ಮ ಮಾರ್ಗವನ್ನನುಸರಿಸಲು ಕೃಷ್ಣ ಆದೇಶಿಸುತ್ತಾನೆ. ಇದನ್ನೇ ಚಾತುರ್ವರ್ಣ್ಯ ವ್ಯವಸ್ಥೆ ಎಂದು ಕರೆಯುತ್ತಾರೆ. ಈ ಚಾತುರ್ವರ್ಣ್ಯ ಪದ್ಧತಿಯ ಮೂಲಕ ಧರ್ಮವನ್ನು ಸಂಗ್ರಹಿಸುವ, ಐಹಿಕ ಪಾತಳಿಯ ಮೇಲೆ ತಾತ್ವಿಕವಾಗಿ ಪರಮಾತ್ಮನನ್ನು ಶೋಧಿಸುವ ಕರ್ಮವನ್ನು

ಮಾನವನು ಸದಾ ಮಾಡುತ್ತಾನೆ. ಕೃಷ್ಣನು ಹೇಳುತ್ತಾನೆ, "ಚಾತುರ್ವಣ್ಯವನ್ನು ನಾನೇ ಕಲ್ಪಿಸಿದ್ದೇನೆ. ಮಾನವರ ಗುಣ–ಕರ್ಮಗಳಿಗನುಸಾರವಾಗಿ ಕರ್ಮ ಮಾಡಲು ನಾನು ಈ ಪದ್ಧತಿಯಲ್ಲಿ ಅವಕಾಶ ಕಲ್ಪಿಸಿ ಕೊಟ್ಟಿದ್ದೇನೆ. ಆದರೆ ನಾನು ಮಾತ್ರ ಅಕರ್ತಾರನೇ, ನಾನು ಅವ್ಯಯ, ಅಕ್ಷರ, ಆತ್ಮ ಸ್ವರೂಪನಾಗಿದ್ದೇನೆ. ನನಗೆ ಯಾವ ಕರ್ಮವೂ ಲೇಪನವಾಗುವುದಿಲ್ಲ, ಬಂಧನವಾಗುವುದಿಲ್ಲ. ನನಗೆ ಕರ್ಮ ಫಲದ ನಿರೀಕ್ಷೆಯೇ ಇಲ್ಲ" (4.13) ಇದರರ್ಥವೇನೆಂದರೆ ಮಾನವನ ಅಹಂವಾದಿ ವ್ಯಕ್ತಿತ್ವದ ಆಚೆಗೆ ಈಶ್ವರನ ನಿರ್ವೈಯಕ್ತಿಕ ಸ್ಥಿತಿಯ ಸ್ವರೂಪ ಇದೆ. ಮಾನವನ ಪ್ರಕೃತಿಯಲ್ಲಿರುವ ಗುಣಗಳ ಸಂಘರ್ಷವು ಈ ನಿರ್ವೈಯಕ್ತಿಕ ಅವಸ್ಥೆಯಲ್ಲಿ ಇರುವುದಿಲ್ಲ. ಇಂಥ ನಿರ್ವೈಯಕ್ತಿಕ ಈಶ್ವರನೇ ಪುರುಷೋತ್ತಮ, ನಿರ್ವೈಯಕ್ತಿಕ ವ್ಯಕ್ತಿ ಆಗಿರುವುದರಿಂದ, ಅವನು ಕರ್ಮ ಮಾಡುತ್ತಿದ್ದರೂ ಸಹ ನಿರ್ವೈಯಕ್ತಿಕ ಹಾಗೂ ಸರ್ವೋತ್ತಮ ಸ್ವಾತಂತ್ರ್ಯವನ್ನನುಭವಿಸುತ್ತಲೇ ಇರುತ್ತಾನೆ. ಇದಕ್ಕಾಗಿ ದಿವ್ಯ ಕರ್ಮಗಳನ್ನು ಮಾಡುವ, ನಿರ್ವೈಯಕ್ತಿಕ ರೂಪದಲ್ಲಿ ಚಾತುರ್ವಣ್ಯ ಪದ್ಧತಿಯನ್ನು ಮೀರದಲೆ ಪರಿಪಾಲಿಸುವ ಮಹಾ ಸಾಧಕನಿರುತ್ತಾನೆ. ದಿವ್ಯ ಕರ್ಮಗಳನ್ನು ಮಾಡಬಯಸುವ ಜನರು ಈ ಸಾಧನೆಯನ್ನು ತೀವ್ರವಾಗಿ ಮಾಡಬೇಕು. "ನನ್ನನ್ನು ಕುರಿತು ಯಾರಿಗೆ ಈ ಸ್ಪಷ್ಟ ಜ್ಞಾನ ಆಗಿದೆಯೋ ಅವರನ್ನು ಕರ್ಮಗಳು ಬಾಧಿಸುವುದಿಲ್ಲ. ಮುಮುಕ್ಷುಗಳು ಅಂದರೆ ಮೋಕ್ಷ ಬಯಸಿದ ಋಷಿ–ಮುನಿಗಳು ಇದನ್ನರಿತುಕೊಂಡೇ ನಿಷ್ಪೃಹರಾಗಿ ಕರ್ಮ ಯೋಗ ಮಾಡಿದರು. ನೀನಾದರೂ ಸಹ ಇದೇ ರೀತಿ ನಿಷ್ಪೃಹನಾಗಿ ಕರ್ಮಗಳನ್ನು ಮಾಡು." (4.15)

ದಿವ್ಯ ಕರ್ಮಗಳು ಯಾವ ಸ್ವರೂಪದ್ದಿರುತ್ತವೆ ಎಂಬುದನ್ನು ಮೇಲಿನ ಪರಿಚ್ಛೇದದಲ್ಲಿ ಸ್ಪಷ್ಟಪಡಿಸಲಾಗಿದೆ. ದಿವ್ಯ ಕರ್ಮಗಳ ತಾತ್ವಿಕ ವಿವರಣೆಯನ್ನು ಕೂಡ ಈ ಹಿಂದಿನ ಅಧ್ಯಾಯದಲ್ಲಿ ಮಾಡಲಾಗಿದೆ. ದಿವ್ಯ ಜನ್ಮ, ಅವತಾರದ ಮಾರ್ಗದ ಮೂಲಕ ಕೃಷ್ಣನು ಕೆಳಗಿಳಿದು ಬಂದುದನ್ನು ಕೂಡ ಸ್ಪಷ್ಟ ಶಬ್ದಗಳಲ್ಲಿ ದೃಢಪಡಿಸಲಾಗಿದೆ. ಈಗ ಇನ್ನು ಮುಂದೆ ಹೇಳಬೇಕಾದ ವಿಷಯವೇನೆಂದರೆ ಅವತಾರದ ಹೇತು ಅಥವಾ ಉದ್ದೇಶವು ಧರ್ಮ ಸಂಸ್ಥಾಪನೆ ಒಂದೇ ಆಗಿರುವುದಿಲ್ಲ. ಆ ಒಂದು ಕೆಲಸಕ್ಕಾಗಿ ಸ್ವತಃ ಆ ಈಶ್ವರನೇ ಮಾನವಾಗಿ ಜನ್ಮ ತಾಳಿ ಬರಬೇಕಾಗಿಲ್ಲ; ಈ ರಹಸ್ಯಮಯ ಘಟನೆಯ ಹಿಂದೆ ಇನ್ನೂ ಹೆಚ್ಚಿನ ಉದ್ದೇಶ ಇರಲೇಬೇಕು. ಏಸು ಕ್ರಿಸ್ತ, ಕೃಷ್ಣ ಅಥವಾ ಬುದ್ಧನಂಥ ಮಹಾ ಧರ್ಮ ಸಂಸ್ಥಾಪಕರು ಕೇವಲ ಅದೊಂದೇ ಉದ್ದೇಶದಿಂದ ಅವತರಿಸಿ ಬಂದಿಲ್ಲ. ಧರ್ಮ ಸಂಸ್ಥಾಪನೆಯು ಅತ್ಯಂತ ಶ್ರೇಷ್ಠವಾದ, ಶಾಶ್ವತವಾಗಿ ನೆಲೆ ನಿಲ್ಲಬಲ್ಲ ಸಂಗತಿಯೂ

ಅಲ್ಲ. ಅದಕ್ಕಿಂತ ಹಿರಿದಾದ, ಮಹತ್ತರವಾದ ಕಾರ್ಯವೊಂದು ಇರಲೇಬೇಕು, ಅದರ ಸಾಧನೆಯ ನಿಟ್ಟಿನಲ್ಲಿ ಧರ್ಮ ಸಂಸ್ಥಾಪನೆಯೊಂದು ಕೇವಲ ಉಪಕರಣ ಅಥವಾ ಒಂದು ಮೆಟ್ಟಿಲು ಮಾತ್ರ. ಈ ರೀತಿಯ ದೈವೀ ಅವತರಣಕ್ಕೆ ಎರಡು ಆಯಾಮಗಳಿರುತ್ತವೆ; ಒಂದು ಅವತರಣ ಅಥವಾ ಸಾಕ್ಷಾತ್ ಈಶ್ವರನೇ ಮಾನವ ರೂಪಧಾರಣ ಮಾಡಿ ಮಾನವನಾಗಿ ಜನ್ಮ ತಾಳುವುದು, ಇದು ಅವತಾರವೆನಿಸುವುದು, ಇನ್ನು ಎರಡನೇಯದು ಆರೋಹಣವು, ಮಾನವನು ದೇವ ಮಾನವನಾಗಿ ಜನ್ಮ ತಾಳುವುದು, ಮಾನವನು ದೈವೀ ಪ್ರಕೃತಿಯನಾಂತು, ದೈವೀ ಪ್ರಜ್ಞೆಯನ್ನು ಪಡೆಯಲು ಶ್ರಮಿಸುವುದು. ಇದನ್ನೇ "ಮದ್ಭಾವ ಮಾಗತಃ" ಅಂದರೆ ಈ ಜಗದಲ್ಲಿ "ನನ್ನ ಪ್ರಜ್ಞೆಯನ್ನೇ ನೇರವಾಗಿ ಪಡೆದುಕೊಂಡು" ನವ ಜನ್ಮ ತಾಳುವುದು. ಅವತಾರ ಹಾಗೂ ಧರ್ಮ ಸಂಸ್ಥಾಪನೆಯು ಈ ಮಾನವನ ನವ ಜನ್ಮವನ್ನು ಸಾಧ್ಯವಾಗಿಸುವುದು; ಇದೇ ಅದರ ನಿಜವಾದ ಉದ್ದೇಶ ಹಾಗೂ ಕಾರ್ಯವಾಗಿದೆ. ಅವತಾರ ತತ್ವದ ಎರಡು ಆಯಾಮಗಳ ಪರಿಕಲ್ಪನೆಯನ್ನು ಸಾಮಾನ್ಯ ಓದುಗನು ಗಮನಿಸದಿರುವುದು ಅಸಹಜವೇನಲ್ಲ; ಅವನು ಮೇಲು ಮೇಲಿನ ಅರ್ಥವನ್ನೇ ತಿಳಿದುಕೊಂಡು, ಅಷ್ಟಕ್ಕೇ ತೃಪ್ತನಾಗಿ ಸುಮ್ಮನೆ ಉಳಿದು ಬಿಡಬಹುದು. ಆದರೆ ಅನೇಕರು ಗೀತೆಯ ಆಳವಾದ ಅರ್ಥವನ್ನು ತಮ್ಮ ತಮ್ಮ ಮತಾಭಿಮಾನದಿಂದ ಕುರುಡರಾಗಿ ಅನ್ಯಥಾ ವ್ಯಾಖ್ಯಾನ ಮಾಡಿರುವುದುಂಟು, ಆದರೆ, ಈ ಪರಿಕಲ್ಪನೆಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿರುವುದು ಅತ್ಯಂತ ಅವಶ್ಯವಾಗಿದೆ. ಇಲ್ಲವಾದರೆ ಅವತಾರದ ಪರಿಕಲ್ಪನೆಯೊಂದು ಕೇವಲ ಮತಾಂಧತೆ, ಮೂಢ ನಂಬಿಕೆ ಅಥವಾ ನಿರರ್ಥಕ ಆಧ್ಯಾತ್ಮಿಕ ಪರಿಭಾವನೆಯ ಅರ್ಥಹೀನ ಪ್ರಯತ್ನವಾಗಿ ಉಳಿದುಬಿಡುತ್ತದೆ ಅಥವಾ ಯಾವುದೋ ಐತಿಹಾಸಿಕ ಅಥವಾ ಪೌರಾಣಿಕ, ನಂಬಲಾಗದ ಮಾನವಾತೀತ ಶಕ್ತಿಗಳುಳ್ಳ ವ್ಯಕ್ತಿಯಾಗಿ ಅವತಾರ ಪುರುಷ ತೋರುತ್ತಾನೆ; ಅದೊಂದು ಉತ್ಪ್ರೇಕ್ಷೆಯ ಕಲ್ಪನೆಯಾಗಿ ಉಳಿದು ಬಿಡುವುದೇ ಹೊರತು ಗೀತೆಯು ಹೇಳುವ ಅವತಾರದ ಪರಿಕಲ್ಪನೆಯಾಗಿ ಉಳಿಯುವುದಿಲ್ಲ. ಅದರಲ್ಲಿರುವ ಆಳವಾದ ತಾತ್ವಿಕ ಚಿಂತನೆ, ಪಾರಮಾರ್ಥಿಕ ಹಾಗೂ ಧಾರ್ಮಿಕ ಸತ್ಯ ಮರೆಯಾಗಿಬಿಡುತ್ತದೆ. ಪರಮ ರಹಸ್ಯಕ್ಕೇರುವ ಮೆಟ್ಟಿಲಾಗಿ ತೋರದೇ ಕೇವಲ ಕಲ್ಪನಾತೀತ ವ್ಯಕ್ತಿಯಾಗಿ ಉಳಿದು ಬಿಡುತ್ತದೆ.

ಮಾನವನು ದೈವತ್ವಕ್ಕೇರಲು ಈ ಅವತಾರವು ಸಹಾಯ ಮಾಡದೇ ಹೋದರೆ ಪರಮಾತ್ಮನು ಸಾಮಾನ್ಯ ಮಾನವನಾಗಿ ಜನ್ಮ ತಾಳಿ ಬಂದು ಅವತಾರವು ನಿರುಪಯುಕ್ತ ಘಟನೆಯಾಗಿ ಬಿಡುವುದು. ಕೇವಲ ನ್ಯಾಯ, ಕೇವಲ

ಒಳ್ಳೆಯದು, ಕೇವಲ ಧರ್ಮ, ಕೇವಲ ನೈತಿಕ ಮೌಲ್ಯಗಳ ಸ್ಥಾಪನೆಯಷ್ಟೇ ಪರಮಾತ್ಮನ ಉದ್ದೇಶವಾಗಿದ್ದರೆ, ಅದನ್ನಾತ ಕೆಳಗಿಳಿದು ಬರದೇ, ತನ್ನ ಸರ್ವ ಶಕ್ತತೆಯನ್ನುಪಯೋಗಿಸಿ ಮಾಡಿಬಿಡಬಹುದು; ಹಿಂದಾದ ಚಲನೆ, ಚಳುವಳಿ, ಋಷಿ–ಮುನಿಗಳಂಥ ಉದಾರ ಚರಿತರ ಮೂಲಕ, ಒಳ್ಳೆಯ ರಾಜರು, ಧಾರ್ಮಿಕ ಸಂಸ್ಥಾಪಕರು ಇವರುಗಳ ಮೂಲಕ ಅದನ್ನೆಲ್ಲ ಮಾಡಿಬಿಡಬಹುದು, ಸ್ವತಃ ತಾನೇ ಮಾನವ ಜನ್ಮ ತಾಳಿ ಬರಬೇಕಾದ ಅಗತ್ಯವೇನಿಲ್ಲ. ಅವತಾರದ ಪ್ರಮುಖ ಉದ್ದೇಶವೇನೆಂದರೆ, ಮಾನವೀಯ ಸ್ವಭಾವದಲ್ಲಿ ಅಥವಾ ಮಾನವೀಯ ಪ್ರಕೃತಿಯಲ್ಲಿ ದೈವೀ ಪ್ರಕೃತಿಯನ್ನು ಪ್ರಕಟಪಡಿಸಬೇಕಾಗಿದೆ; ಕ್ರಿಸ್ತ ಪ್ರಕೃತಿ, ಕೃಷ್ಣ ಪ್ರಕೃತಿ, ಬುದ್ಧ ಪ್ರಕೃತಿ ಇಂಥವುಗಳನ್ನು ಪ್ರಕಾಶಪಡಿಸಿ, ಮಾನವ ಪ್ರಕೃತಿಯು ಆ ದಿಶೆಯಲ್ಲಿ ಹೊರಳುವಂತೆ, ಆ ಕಡೆಗೆ ಪ್ರಯತ್ನ ಮಾಡುವಂತೆ, ಆ ದೈವೀ ಪ್ರಕೃತಿಯ ವಿಚಾರ, ಆದರ್ಶ, ಅನಿಸಿಕೆ, ಕ್ರಿಯೆ–ಕಾರ್ಯ ಹಾಗೂ ಅಸ್ತಿತ್ವವನ್ನು ತನ್ನಲ್ಲಿ ಅಳವಡಿಸಿಕೊಳ್ಳುವಂತೆ, ಕೊನೆಗೆ ಕ್ರಿಸ್ತತ್ವ, ಕೃಷ್ಣತ್ವ, ಬುದ್ಧತ್ವವನ್ನು ಪಡೆಯುವಂತೆ ಪ್ರೇರಿಸುವುದೇ ಆಗಿದೆ. ಅವತಾರವು ಪ್ರಸ್ತುತ ಪಡಿಸುವ ಧರ್ಮ, ವ್ಯವಸ್ಥೆ, ನ್ಯಾಯ ಇವೆಲ್ಲವೂ ಮುಖ್ಯವಾಗಿ ಈ ಉದ್ದೇಶಕ್ಕಾಗಿಯೇ ಇರುತ್ತವೆ. ಕ್ರಿಸ್ತ, ಕೃಷ್ಣ, ಬುದ್ಧ ಇವರೆಲ್ಲ ಕೇಂದ್ರ ದ್ವಾರಗಳಿದ್ದಂತೆ, ಅವರ ಮೂಲಕ ಪರಮಾತ್ಮನು ಮಾನವರಿಗಾಗಿ ತನ್ನೆಡೆಗೆ ಬರುವ, ದೈವತ್ವವನ್ನು ಪಡೆಯುವ ಮಾರ್ಗವನ್ನು ರೂಪಿಸುತ್ತಾನೆ. ಅದಕ್ಕಾಗಿ ತಾನೇ ಸ್ವತಃ ಅವತರಿಸಿ ಬಂದು, ಮಾನವನೆದುರು ತನ್ನ ನಿದರ್ಶನವನ್ನು ಸ್ಥಾಪಿಸುತ್ತಾನೆ, ತನ್ನನ್ನನುಸರಿಸಿ ಬರುವಂತೆ ಪ್ರೇರೇಪಿಸುತ್ತಾನೆ. ತಾನೇ ದೈವತ್ವದ ಬಾಗಿಲು ಹಾಗೂ ದಾರಿ ಎಂಬುದನ್ನು ತೋರಿಸುತ್ತಾನೆ. ಮಾನವತೆಯು ದೈವತ್ವದಿಂದ ಭಿನ್ನವಲ್ಲ, ಅವರೆಡೂ ಒಂದೇ, ಅಲ್ಲಿ ಏಕತ್ವ ಇದೆ, ಮಾನವನು ಮೇಲಿರುವ ಪರಮಾತ್ಮನ ದಿವ್ಯ ಸಂತಾನ, ಮಾನವ ಹಾಗೂ ಅವತರಿತ ದೇವರು ಬೇರೆ ಬೇರೆ ಅಲ್ಲ ಎಂಬುದನ್ನು ಸಾಬೀತು ಪಡಿಸುತ್ತಾನೆ. ಮಾನವನ ರೂಪದಲ್ಲಿ ಬಂದ ಕೃಷ್ಣನೂ, ಸಕಲ ಜೀವ ಸೃಷ್ಟಿಯ ಪ್ರಿಯ ಸ್ನೇಹಿತನೂ, ಪ್ರಭುವೂ ಬೇರೆ ಬೇರೆ ಅಲ್ಲ; ಏಕೈಕ ಪುರುಷೋತ್ತಮನ ಎರಡು ಪ್ರಕಟ ರೂಪಗಳು – ಒಂದು ತನ್ನ ಮೂಲ ರೂಪ, ಇನ್ನೊಂದು ಮಾನವ ರೂಪ ಅಷ್ಟೇ – ವ್ಯತ್ಯಾಸವಿಲ್ಲ.

ಗೀತೆಯಲ್ಲಿ ಹೇಳಿದ ಅವತಾರದ ಎರಡು ಉದ್ದೇಶಗಳ ಪೈಕಿ ಎರಡನೇಯದೇ ಹೆಚ್ಚು ಪ್ರಧಾನವಾಗಿದೆ, ಅವತಾರದ ವ್ಯವಸ್ಥೆಯ ಮೂಲ ಹೃದಯವೇ ಈ ಸಮಗ್ರ ಮಾನವತೆಯ ಉತ್ತರೋತ್ತರ ಆರೋಹಣವಾಗಿದೆ

ಎಂಬುದು ಕೃಷ್ಣನ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ಶಬ್ದಗಳನ್ನು ಗಂಭೀರವಾಗಿ ಚಿಂತನೆ ಮಾಡಿದರೆ ಈ ವಿಚಾರವು ಸ್ಪಷ್ಟವಾಗುತ್ತದೆ. ಅಲ್ಲದೇ ಗೀತೆಯ ಸಂಪೂರ್ಣ ಹಾಗೂ ಸಮಗ್ರ ಬೋಧನೆಯನ್ನು ಪರಿಶೀಲಿಸಿದರೆ ಈ ವಿಚಾರವು ಇನ್ನೂ ಹೆಚ್ಚು ದೃಢವಾಗಿ ತಿಳಿದುಬರುತ್ತದೆ. ಹಾಗೆ ನೋಡಿದರೆ, ಗೀತೆಯ ಯಾವ ಶ್ಲೋಕವನ್ನು ಇತರ ಶ್ಲೋಕಗಳ ಜೊತೆ ಒಟ್ಟಾರೆ ವಿಚಾರದ ಜೊತೆ ಅನ್ವಯ ಮಾಡದೇ ನೋಡಲೇಬಾರದು; ಒಟ್ಟಾರೆ ಸೇರಿಸಿ ಸಮಗ್ರವಾಗಿ ಚಿಂತನೆ ಮಾಡುವುದೇ ಸರಿಯಾದ ಕ್ರಮ. ಅನ್ಯಥಾ ತಪ್ಪು ಅಭಿಪ್ರಾಯ ಮಾಡುವ ಸಾಧ್ಯತೆ ಇದೆ, ಆದ್ದರಿಂದ ಅದನ್ನು ಸಮಗ್ರವಾಗಿ ನೋಡುವುದು ಕೇವಲ ಯೋಗ್ಯ ಅಷ್ಟೇ ಅಲ್ಲ ಅತ್ಯಂತ ಅವಶ್ಯಕವಾದ ಕ್ರಮವಾಗಿದೆ. ಚರಾಚರ ಜಗತ್ತಿನಲ್ಲಿ ಇರುವುದು ಒಂದೇ ಆತ್ಮ, ಪ್ರತ್ಯೇಕ ಜೀವಿಯ ಹೃದಯದಲ್ಲಿ ಈಶ್ವರನಿದ್ದಾನೆ. ಇದು ಗೀತೆಯ ಸಿದ್ಧಾಂತ. ಈಶ್ವರನು ಎಲ್ಲ ಜೀವಿಗಳ ಸ್ನೇಹಿತ, ಸುಹೃತ್ ಮುಂತಾಗಿ ಹೇಳಿದ ಜೀವ–ಈಶ್ವರ ಸಂಬಂಧದ ಕಲ್ಪನೆ, ಗೀತೆಯಲ್ಲಿ ವಿಶೇಷ ಒತ್ತುಕೊಟ್ಟು ಹೇಳಿದ ವಿಭೂತಿ ಸತ್ವದ ಕಲ್ಪನೆ, ನಿಷ್ಕಾಮ ಕರ್ಮ ಮಾಡಬೇಕೆಂದು ಅರ್ಜುನನ ಮುಂದೆ ಕೃಷ್ಣನು ತನ್ನ ಸ್ವತಃದ ಉದಾಹರಣೆ ಇರಿಸುವುದು, ಇವೆಲ್ಲ ನೋಡಿದಾಗ ಸ್ಪಷ್ಟವಾಗುವುದೇನೆಂದರೆ ಮಾನವ ರೂಪದಲ್ಲಿರುವ ಕೃಷ್ಣ ಹಾಗೂ ಸೃಷ್ಟಿಯ ಪ್ರಭುವಾದ ಈಶ್ವರ ಇಬ್ಬರೂ ಒಂದೇ ಎಂಬುದು ಗೊತ್ತಾಗುತ್ತದೆ. ಕೃಷ್ಣನ ಭಾಷೆ, ಒಂಬತ್ತನೆಯ ಅಧ್ಯಾಯದಲ್ಲಿ ಅವನು ಹೇಳುವ "ಮಾನುಷೀಂ ತನುಮಾಶ್ರಿತನಾದ ನನ್ನನ್ನು ತಿಳಿಯದ ಜನರು ಮೂಢರಂತೆ ಅವಜ್ಞೆ ಮಾಡುತ್ತಾರೆ" ಎಂದು ಸ್ಪಷ್ಟವಾಗಿ ಹೇಳುವುದು ಇವೆಲ್ಲವನ್ನು ಒಟ್ಟಾರೆ ತೆಗೆದುಕೊಂಡು ವಿಚಾರ ಮಾಡಬೇಕು. ಅಂದಾಗ ಮಾತ್ರ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಪರಮಾತ್ಮನು ಭೂಮಿಯ ಮೇಲೆ ಅವತರಿಸುವುದರಿಂದಲೇ ಮಾನವರು ಪರಮಾತ್ಮನ ಎತ್ತರಕ್ಕೆ ಏರಲು ಸಮರ್ಥರಾಗುತ್ತಾರೆ. ಅವನಲ್ಲಿಯೇ ಶರಣಾಗಿ, ಅವನನ್ನೇ ಪಡೆದು ಅವನೇ ಆಗಿಬಿಡುತ್ತಾರೆ – ಮದ್‌ಭಾವಮ್. ಹೀಗೆ ಸಮಗ್ರವಾಗಿ ಚಿಂತನೆ ಮಾಡುವುದರಿಂದಲೇ ದೈವೀ ಜನ್ಮದ ರಹಸ್ಯ ನಮಗರ್ಥವಾಗುತ್ತದೆ. ಅದೊಂದು ಅದ್ಭುತವಾದ ಸಂಗತಿ, ಭೂಮಿಯ ಇತಿಹಾಸದಲ್ಲೊಂದು ತೀರ ಮಹತ್ವದ ಘಟನೆ, ಆದರೆ, ಪ್ರಪಂಚದ ವ್ಯವಸ್ಥೆಯ ದೃಷ್ಟಿಯಿಂದ ನೋಡಿದರೆ ಇದು ವಿಶ್ವ–ಪ್ರಕಟನೆಯಲ್ಲಿ ಅತ್ಯಂತ ಅವಶ್ಯಕವಾದ ಘಟ್ಟವೆಂಬುದು ಗೊತ್ತಾಗುತ್ತದೆ. ಅವತಾರದ ಪ್ರಕಟನೆ ಇಲ್ಲದೇ ನಾವು ಪಾರಮಾರ್ಥಿಕ ರಹಸ್ಯವನ್ನು ಯಾವತ್ತೂ ಅರಿಯಲಾರೆವು. ಅದನ್ನು ಪೂರ್ಣವಾಗಿ ಅಲ್ಲಗಳೆಯಬಹುದು ಅಥವಾ ಮೂಢ

ಭಕ್ತಿಯಿಂದ ಒಪ್ಪಿಕೊಳ್ಳಬಹುದು, ಅದೊಂದು ಅಂಧ ಶ್ರದ್ಧೆಯಾಗಿ ಬಿಡಬಹುದು ಅಥವಾ ಆಧುನಿಕ (ವೈಜ್ಞಾನಿಕ) ಮನಸ್ಸಿನ ವಾದ–ವಿವಾದಗಳಲ್ಲಿ ಮುಳುಗಿ ಅದರ ನಿಜವಾದ ಅರ್ಥವನ್ನು ತಿಳಿಯದೇ ಹೋಗಿಬಿಡಬಹುದು, ಅದರ ವೈಶಿಷ್ಟ್ಯವೇ ಕಳೆದುಹೋಗಿ ಬಿಡಬಹುದು.

ಆಧುನಿಕ ಮನಸ್ಸಿಗೆ ಈ ಅವತಾರದ ಪರಿಕಲ್ಪನೆಯು ಸುಲಭವಾಗಿ ಬಗ್ಗುವುದಿಲ್ಲ. ಅದು ಅವತಾರದ ಕಲ್ಪನೆಯನ್ನು ಸುಲಭವಾಗಿ ಒಪ್ಪುವುದಿಲ್ಲ. ಅಷ್ಟೇ ಏಕೆ ಪೌರ್ವಾತ್ಯ ವಿಚಾರ ಧಾರೆಗಳನ್ನು ಒಪ್ಪಿಕೊಳ್ಳುವುದು ಕಠಿಣವೇ, ಅತಿ ತಾರ್ಕಿಕವಾಗಿ ಬೆಳೆದ ಮನಸ್ಸಿಗೆ ಇವೆಲ್ಲ ನಂಬಲನರ್ಹವೆನಿಸುವುದು ಸಹಜವೇ. ಇದು ಕೇವಲ ಸಾಂಕೇತಿಕ, ಯಾವುದೋ ಉನ್ನತ ಪ್ರಕಟನೆಯ ಪ್ರತೀಕ, ಮಾನವತೆಗಾಗಿ ಮಾಡುವ ಅತಿ ಶಕ್ತಿಯುತ, ಉದಾತ್ತ ಹಾಗೂ ಅತ್ಯಂತ ಹಿರಿಮೆಯ ಕೆಲಸದ ಪ್ರತೀಕವೆಂದು ಭಾವಿಸುತ್ತದೆ. ಇದನ್ನು ಮೂಢ ನಂಬಿಕೆ, ಅಂಧ ಶ್ರದ್ಧೆ ಎಂದು ಹೇಳಿದರೂ ಹೆಚ್ಚಲ್ಲ. ಅವತಾರವನ್ನು ಒಪ್ಪಿಕೊಳ್ಳುವುದು ಮೂಢತನವೆಂದೂ, ಗ್ರೀಕರಂತೂ ಇದೊಂದು ವಿರೋಧವೆಂದೂ ಹೇಳುವ ಮಟ್ಟಕ್ಕೂ ಹೋಗಬಹುದು, ಭೌತಿಕವಾದಿ ಅಥವಾ ಲೋಕಾಯತರಂತೂ ಈ ಕಡೆಗೆ ತಿರುಗಿ ಕೂಡ ನೋಡಲಾರರೇನೋ! ಅವರು ದೇವರನ್ನೇ ನಂಬದವರು; ತಾರ್ಕಿಕರಿಗೆ ಇದೊಂದು ಹುಚ್ಚುತನವೆನಿಸಬಹುದು. ಪೂರ್ಣ ದ್ವೈತವಾದಿಗಳಿಗಂತೂ ಅವತಾರದ ಪರಿಕಲ್ಪನೆಯ ಪರಮ ದುಷ್ಟ ಕಲ್ಪನೆ ಎನಿಸಬಹುದು. ತೀರ ತರ್ಕಬುದ್ಧಿಯ ವಿಚಾರವಾದಿಗಳು ಹೀಗೆ ವಾದಿಸುವುದುಂಟು, ದೇವರು ಇದ್ದಾನೆ ಅನ್ನುವುದಾದರೆ ಅವನು ವಿಶ್ವದ ಆಚೆಗಿದ್ದಾನೆ, ಅವನು ವಿಶ್ವದ ಯಾವ ಕೆಲಸದಲ್ಲೂ ಮಧ್ಯ ಪ್ರವೇಶ ಮಾಡುವುದಿಲ್ಲ, ಒಂದು ಯಾಂತ್ರಿಕದಂಥ ನಿಯಮ – ವ್ಯವಸ್ಥೆಯ ಪ್ರಕಾರ ಎಲ್ಲವೂ ನಡೆದುಕೊಂಡು ಹೋಗುತ್ತದೆ. ಭಗವಂತನು ಸಂವಿಧಾನಬದ್ಧ ರಾಜನಂತೆ, ಅವನು ತಟಸ್ಥನಾಗಿ ಉಳಿದು ಪ್ರಕೃತಿಯ ಕಾರ್ಯಗಳನ್ನು ಬರಿದೇ ವೀಕ್ಷಿಸುತ್ತಾನೆ, ಅವನು ಸಾಕ್ಷಿ ಪುರುಷ ಮಾತ್ರ. ಭಗವಂತನು ನಿರ್ಗುಣ, ನಿರಾಕಾರ, ಅನಂತ; ಮಾನವನಂತೆ ಅವನು ಜನ್ಮ ತಾಳಿ ಸಾಂತ ವ್ಯಕ್ತಿಯಾಗಿ ಬರಲಾರ. ಅವನು ಅಜಾತ, ಅವನು ಸೃಷ್ಟಿಕರ್ತ. ತನ್ನ ಸೃಷ್ಟಿಯಲ್ಲಿ ಅವನು ತಾನೇ ಹೇಗೆ ಜನ್ಮ ಧರಿಸಿ ಬರಲು ಸಾಧ್ಯ? ದೇವರು ಸರ್ವಶಕ್ತನಾಗಿರುವುದೇನೋ ನಿಜ, ಅವನು ಏನು ಬೇಕಾದರೂ ಮಾಡಬಲ್ಲನೆಂಬುದೂ ನಿಜ, ಆದರೆ ಮಾನವ ರೂಪದಲ್ಲಿ ಮಾತ್ರ ಜನ್ಮ ತಾಳಿ ಬರುವುದು ಸಾಧ್ಯವಿಲ್ಲ. ಈ ವಾದಗಳಿಗೆ ದ್ವೈತವಾದಿಗಳು ಮತ್ತಷ್ಟು ಪುಷ್ಟಿ ಕೊಡುತ್ತಾರೆ. ಅವರು ಹೇಳುವಂತೆ, "ಈಶ್ವರ

ಮತ್ತು ಮಾನವ ಇವರ ನಡುವೆ ವ್ಯಕ್ತಿತ್ವ, ಕಾರ್ಯ, ಪ್ರಕೃತಿ ಈ ಎಲ್ಲ ವಿಷಯಗಳಲ್ಲಿ ಭೇದವಿದೆ ಮತ್ತು ಈ ಭೇದವು ಸದಾ ಇದ್ದೇ ಇರುತ್ತದೆ. ಮಾನವನು ಅಪರಿಪೂರ್ಣನಾಗಿದ್ದು, ಪರಿಪೂರ್ಣನಾಗಿರುವ ಈಶ್ವರನನ್ನು ಅವಾಹಿಸಿಕೊಳ್ಳುವುದು ಅಸಾಧ್ಯವಿದೆ. ಈಶ್ವರನು ಅಜಾತನು, ಅಜನ್ಮಾನನು, ಹೀಗಿರುವಾಗ ಅವನು ಮಾನವ ವ್ಯಕ್ತಿಯಾಗಿ ಜನ್ಮ ತಾಳುವುದು ಅಸಾಧ್ಯ. ಈಶ್ವರನು ಸರ್ವ ಲೋಕಗಳ ರಾಜ, ಅಧಿಪತಿ; ಅಂಥವನು ಪ್ರಕೃತಿಬದ್ಧ ನಶ್ವರ ಮಾನವೀಯ ದೇಹಗಳಲ್ಲಿ ಮಾಯಾರ್ದಿತನಾಗಿ ಇರುವುದು ಹೇಗೆ ಸಾಧ್ಯ?" ಈ ತೆರನಾದ ಆಕ್ಷೇಪಗಳು ಮೇಲು ನೋಟಕ್ಕೆ ನಮ್ಮ ಸತ್ವಹರಣ ಮಾಡುವಂತೆ ತೋರುತ್ತವೆ. ಆದರೆ ಕೃಷ್ಣನು ಈ ಎಲ್ಲ ಆಕ್ಷೇಪಗಳನ್ನು ತನ್ನ ವಿಚಾರಣೆಯಲ್ಲಿ ಸೇರಿಸಿಕೊಂಡಿದ್ದಾನೆ. ಅವನಿಗೆ ಇಂಥ ಆಕ್ಷೇಪ ಬರಬಹುದೆಂದು ಮೊದಲೇ ತಿಳಿದಿತ್ತೋ ಏನೋ! ಅವನು ಹೇಳುತ್ತಾನೆ; "ಈಶ್ವರನಿಗೆ ಹುಟ್ಟೂ ಇಲ್ಲ ಸಾವೂ ಇಲ್ಲ. ಅವನು ಅವ್ಯಯಾತ್ಮನು, ಸರ್ವ ಭೂತಗಳ ಸ್ವಾಮಿಯೂ, ಆದರೂ ಸಹ ಅವನು ತನ್ನ ಪ್ರಕೃತಿಯನ್ನೇ ಅಧಿಷ್ಠಾನವನ್ನಾಗಿ ಮಾಡಿಕೊಂಡು, ತನ್ನ ದಿವ್ಯ ಮಾಯೆಯ ಶಕ್ತಿಯಿಂದ ಭೂಮಿಯ ಮೇಲೆ ಜನ್ಮ ತಾಳುತ್ತಾನೆ (4.6). ಮೂಢರಾದ ಜನರು ಮಾನವ ರೂಪಧಾರಣೆ ಮಾಡಿದ ಈಶ್ವರನನ್ನು ಅವಜ್ಞೆ ಮಾಡುತ್ತಾರೆ. ಈಶ್ವರನು ತನ್ನ ಶ್ರೇಷ್ಠ ಮೂಲ ರೂಪದಲ್ಲಿ ಸರ್ವೇಶ್ವರನಾಗಿದ್ದಾನೆ, ಸಕಲ ಲೋಕಗಳ ಒಡೆಯನಾಗಿದ್ದಾನೆ (9.11). ಈಶ್ವರನು ತನ್ನ ದಿವ್ಯ ಅರಿವಿನ ಶಕ್ತಿಯ (ಪ್ರಜ್ಞೆ) ಮೂಲಕ ಚಾತುರ್ವರ್ಣ್ಯ ಕ್ರಮವನ್ನು ನಿರೂಪಿಸಿದ್ದಾನೆ, ಸೃಷ್ಟಿಸಿದ್ದಾನೆ, ವಿಶ್ವದಲ್ಲಿನ ಎಲ್ಲ ಕರ್ಮಗಳನ್ನು ಅವನೇ ಮಾಡಿಸುತ್ತಾನೆ, ಮಾಡುತ್ತಾನೆ; ಆದರೆ ಅದೇ ಕಾಲಕ್ಕೆ ಅವನು ಸರ್ವಜ್ಞ ಶಾಂತಿಯ ಅವಸ್ಥೆಯಲ್ಲೂ ಇರುತ್ತಾನೆ (4.13). ಏಕೆಂದರೆ, ಅವನು ಶಾಂತಿ ಹಾಗೂ ಕರ್ಮಗಳಿಗೆ ಅತೀತನಾಗಿದ್ದು, ಎರಡೂ ಅವಸ್ಥೆಗಳನ್ನು ಏಕ ಕಾಲಕ್ಕೆ ಧಾರಣ ಮಾಡಲು ಸಮರ್ಥನಾಗಿದ್ದಾನೆ. ಅವನು ಪುರುಷೋತ್ತಮನಾಗಿದ್ದಾನೆ". ಅಸ್ತಿತ್ವ, ಈಶ್ವರ ಮತ್ತು ವಿಶ್ವ ಇವುಗಳ ವಿಷಯವಾಗಿ ಗೀತೆಯು ವೇದಾಂತದ ಸಿದ್ಧಾಂತವನ್ನೇ ಅವಲಂಬಿಸಿರುವುದರಿಂದ ಮೇಲೆ ಎತ್ತಿದ ಆಕ್ಷೇಪಗಳು ತಾವೇ ತಾವಾಗಿ ಮಾಯವಾಗಿ ಬಿಡುತ್ತವೆ. ಮೇಲಿನ ಎಲ್ಲ ಅನ್ಯಾನ್ಯ ವಿರೋಧಿ ಸಂಗತಿಗಳ ನಡುವೆ ಸುಸಂವಾದಿತ್ವವು ತಾನಾಗಿ ಸಿದ್ಧವಾಗುತ್ತದೆ.

ಏಕೆಂದರೆ, ವೇದಾಂತದ ದೃಷ್ಟಿಯಲ್ಲಿ ತೀರ ವಿರುದ್ಧವೆಂದು ತೋರುವ ಎಲ್ಲ ಆಕ್ಷೇಪಗಳು ಆರಂಭದಿಂದಲೇ ನಿರಸ್ತವಾಗಿ ಬಿಡುತ್ತವೆ. ಅವತಾರದ ಪರಿಕಲ್ಪನೆಯು ಈ ವ್ಯವಸ್ಥೆಯಲ್ಲಿ ತೀರ ಅವಶ್ಯವಾಗಿರಲಿಕ್ಕಿಲ್ಲವೆಂಬುದು ನಿಜವೇ ಆದರೂ ಅದು

ಸಹಜವಾಗಿ, ಸಯುಕ್ತಿಕವಾಗಿ, ತಾರ್ಕಿಕವಾಗಿ ಸೇರ್ಪಡೆಯಾಗುತ್ತದೆ. ಏಕೆಂದರೆ, ಇಲ್ಲಿ ಎಲ್ಲವೂ ಈಶ್ವರನೇ, ಎಲ್ಲವೂ ಸ್ವಯಂಭೂ, ಎಲ್ಲವೂ ಆತ್ಮವೇ, ಎಲ್ಲವೂ ಬ್ರಹ್ಮನೇ – ಏಕಮೇವಾದ್ವಿತೀಯ – ಸೃಷ್ಟಿಯಲ್ಲಿ ಬ್ರಹ್ಮವಲ್ಲದ್ದು ಯಾವುದೂ ಇಲ್ಲವೇ ಇಲ್ಲ. ಪ್ರಕೃತಿ ಅನ್ನುವುದು ದೈವೀ ಪ್ರಜ್ಞೆಯ ಶಕ್ತಿಯೇ. ಸಕಲ ಜೀವರಾಶಿಗಳು, ಸಮಸ್ತ ಸೃಷ್ಟಿಯು ಎಲ್ಲವೂ ಈಶ್ವರನ ಆಂತರಿಕ – ಬಾಹ್ಯ, ಆತ್ಮನಿಷ್ಠ – ವಸ್ತುನಿಷ್ಠ ಸ್ವರೂಪಗಳೇ, ಶಾರೀರಿಕ ಪ್ರಕಟನೆಗಳೇ; ಎಲ್ಲವೂ ಈಶ್ವರನ ದಿವ್ಯ ಪ್ರಜ್ಞೆಯ ಮೂಲಕವೇ ಅಸ್ತಿತ್ವದಲ್ಲಿರುತ್ತವೆ, ಅದರ ಪರಿಣಾಮಗಳೇ ಅನಂತನಾದ ಈಶ್ವರನು ಸಾಂತರೂಪ ತಾಳಲಾರ ಎನ್ನುವುದು ತಪ್ಪು ಕಲ್ಪನೆ; ಇಡೀ ಬ್ರಹ್ಮಾಂಡವೆಲ್ಲವೂ ಅವನೇ, ಅವನದೇ ರೂಪ – ಇಡೀ ಜಗತ್ತಿನಲ್ಲಿ ನಾವು ಏನೆಲ್ಲ ನೋಡುತ್ತೇವೆಯೋ, ಕಾಣುತ್ತೇವೆಯೋ ಅದೆಲ್ಲವೂ ಈಶ್ವರನೇ; ಅವನ್ನು ಬಿಟ್ಟೆ ಬೇರೆ ಏನೂ ಇಲ್ಲವೇ ಇಲ್ಲ. ನಿರಾಕಾರವಾಗಿರುವ ಆತ್ಮವು ಆಕಾರ ತಳೆಯುವುದು ಹೇಗೆ ಎಂಬ ಪ್ರಶ್ನೆಯೇ ಸಾಧುವಲ್ಲ; ಆತ್ಮನಿಗೆ ಎಲ್ಲ ಸಾಧ್ಯತೆಗಳೂ ಇವೆ, ಅದು ಜಡವಾಗಿ, ಅಚೇತನವಾಗಿ, ಮನಸ್ಸಾಗಿ, ಶರೀರವಾಗಿ, ಸೀಮಿತವಾಗಿ, ಸಾಂತವಾಗಿ ಹೀಗೆ ಏನು ಬೇಕಾದರೂ ಆಗಬಹುದು. ಏನಿದೆಯೋ ಅದೆಲ್ಲವೂ ಆತ್ಮವೇ. ಎಲ್ಲವೂ ಅದರ ಮೂಲಕವೇ ಅದರ ಆಧಾರದ ಮೇಲೆಯೇ ಜೀವಿಸುತ್ತವೆ, ಅದನ್ನು ಹೊರತುಪಡಿಸಿ ಬೇರೆ ಇನ್ನಾವುದಕ್ಕೂ ಅಸ್ತಿತ್ವವೇ ಇಲ್ಲ. ಈ ವಿಶ್ವವೊಂದು ಯಂತ್ರವಲ್ಲ, ಕೆಲವೊಂದು ನಿಯಮಗಳ ಪ್ರಕಾರ ತನ್ನಿಂದ ತಾನೇ ನಡೆದುಕೊಂಡು ಹೋಗುತ್ತದೆ; ಇದರಲ್ಲಿ ಆತ್ಮವಿಲ್ಲ, ಎಲ್ಲ ಚಲನವಲನಗಳು, ಕಾರ್ಯಗಳು ಅಂತರಾತ್ಮನ ಪ್ರೇರಣೆಯಂತೆಯೇ ನಡೆಯುತ್ತವೆ ಎಂಬುದು ಕಲ್ಪನೆ, ಆತ್ಮವೆಂಬುದು ಎಲ್ಲೋ ಹೊರಗಿದೆ, ಹೊರಗಿನಿಂದ ಎಲ್ಲವನ್ನೂ ನಿಯಂತ್ರಿಸುತ್ತದೆ, ಪ್ರೇರಿಸುತ್ತದೆ ಎಂಬುದೂ ಸಹ ತಪ್ಪು ಕಲ್ಪನೆಯೇ. ಪ್ರತ್ಯುತ ಬ್ರಹ್ಮಾಂಡದ ಪ್ರತಿಯೊಂದು ಕಣದಲ್ಲೂ ಆ ದೈವೀ ಪ್ರಜ್ಞಾಶಕ್ತಿ ತುಂಬಿಕೊಂಡಿದೆ, ಆ ದೈವೀ ಶಕ್ತಿಯ ಸ್ವರೂಪವೇ ಆಗಿದೆ, ಶಕ್ತಿಯೇ ಆಗಿದೆ; ಅದರ ಪ್ರತಿ ಚಲನೆ ಕಾರ್ಯ ಎಲ್ಲವೂ ದಿವ್ಯ ಪ್ರಜ್ಞಾಶಕ್ತಿಯ ಚಲನೆಗಳೇ ಆಗಿವೆ. ಎಲ್ಲವೂ ಆ ಈಶ್ವರನಲ್ಲಿಯೇ ಸಮಾಹಿತವಾಗಿದೆ, ಎಲ್ಲವೂ ಅವನಿಚ್ಛೆಯಂತೆಯೇ ಚಲಿಸುತ್ತದೆ, ಎಲ್ಲವೂ ಅವನ ಕಾರ್ಯವೇ, ಎಲ್ಲವೂ ಅವನ ಪ್ರಕಟನೆಯನ್ನೇ ನಿದರ್ಶಿಸುತ್ತದೆ. ಪ್ರತೀ ಜೀವಿಯೂ ಸಹ ಪ್ರಚ್ಛನ್ನ ನಾರಾಯಣನೇ ಆಗಿದೆ.

ಈಶ್ವರನು ಅಜಾತನು, ಅವನು ಆಕಾರ ತಾಳಿ ಜನ್ಮವೆತ್ತುವುದಿಲ್ಲವೆನ್ನುವುದು ಸರಿಯೇ ಆದರೆ, ಸಮಸ್ತ ಜೀವರಾಶಿಗಳೆಲ್ಲವೂ ಪ್ರತ್ಯೇಕವಾಗಿ ಅಜಾತ ಆತ್ಮ

ಸ್ವರೂಪಗಳೇ ಆಗಿವೆ. ಪ್ರತಿಯೊಂದು ಜೀವಿಯೂ ಶಾಶ್ವತವೇ, ಅನಾದಿ ಹಾಗೂ ಅನಂತವೇ. ವಿಶ್ವಾತ್ಮಕವಾಗಿ ನೋಡಿದರೆ ಪ್ರತಿಯೊಂದರ ಅಸ್ತಿತ್ವವೂ ಅಜಾತವೇ, ಪರಮಾತ್ಮ ಸ್ವರೂಪವೇ, ಬ್ರಹ್ಮತತ್ವವೇ; ಸಾವು, ಹುಟ್ಟು ಇವೆಲ್ಲ ಕೇವಲ ಕಲ್ಪಿತ ಘಟನೆಗಳು, ಆಕಾರ ಬದಲಾವಣೆಯೇ ಆಗಿವೆ. ಪರಿಪೂರ್ಣನಾದ ಈಶ್ವರನು ಅಪರಿಪೂರ್ಣ ಹಾಗೂ ಸೀಮಿತ ರೂಪ ತಾಳುವುದು ನಿಜವಾಗಿ ಒಂದು ವಿಚಿತ್ರ, ನಿಗೂಢವಾದ ಪ್ರಕ್ರಿಯೆ. ಆದರೆ ಈ ಅಪರಿಪೂರ್ಣತೆ ಕಂಡುಬರುವುದು ಆಕಾರದಲ್ಲಿ, ಮನದ ಕ್ರಿಯೆ ಅಥವಾ ಕಾರ್ಯದಲ್ಲಿ ಅಥವಾ ಅದು ಪ್ರಕಟವಾದ ಶರೀರದಲ್ಲಿ, ಈ ರೀತಿ ತೋರುವ ಅಥವಾ ಪ್ರಕಟವಾಗುವ ಘಟಕದಲ್ಲಿಯೇ ಹೊರತು, ಯಾವ ಮೂಲ ವಸ್ತು ಈ ರೀತಿ ಪ್ರಕಟವಾಗುತ್ತದೋ ಅದರಲ್ಲಿ ಯಾವ ಅಪರಿಪೂರ್ಣತೆಯೂ ಇರುವುದಿಲ್ಲ; ಸೂರ್ಯನು ಎಲ್ಲವನ್ನು ಏಕ ಪ್ರಕಾರವಾಗಿಯೇ ಬೆಳಗುತ್ತಾನೆ, ಅಲ್ಲಿ ಯಾವ ದೋಷವೂ ಇಲ್ಲ, ವಿಕೃತಿಯೂ ಇಲ್ಲ. ಆದರೆ ವೈಯಕ್ತಿಕ ಅಸ್ತಿತ್ವದ ಸಾಮರ್ಥ್ಯದ ಅನುಗುಣವಾಗಿ ಆ ಬೆಳಕು ತೋರಿಬರುವುದು. ಈ ಜಗವನ್ನು ಎಲ್ಲೋ ದೂರದ ಸ್ವರ್ಗದಲ್ಲಿ ಕುಳಿತು ಈಶ್ವರನು ಆಳುವುದಿಲ್ಲ, ನಿಯಂತ್ರಿಸುವುದಿಲ್ಲ; ಆದರೆ ಸರ್ವತೋ ವ್ಯಾಪ್ತನಾಗಿ, ಸರ್ವಾಂತರ್ಯಾಮಿಯಾಗಿ ಎಲ್ಲ ಕ್ರಿಯೆ ನಡೆಸುತ್ತಾನೆ. ಈ ಜಗದ ಸಾಂತ ವಸ್ತುವಿನ ಎಲ್ಲ ಕೆಲಸ ಕಾರ್ಯ–ಚಲನೆ ಎಲ್ಲವೂ ಅನಂತ ಶಕ್ತಿಯ ಸಾಂತ ಕಾರ್ಯದ ಫಲವಾಗಿಯೇ ಇರುತ್ತದೆ. ಸಾಂತ ವಸ್ತುವಿನಲ್ಲಿ, ಅಂದರೆ ಈ ಪ್ರಪಂಚದ ಜೀವಿಯಲ್ಲಿ ಅಥವಾ ವಸ್ತುವಿನಲ್ಲಿ ಅದರದೇ ಆದ ಬೇರೆ ಶಕ್ತಿ ಇರುತ್ತದೆ ಎಂದು ಭಾವಿಸಬಾರದು. ಪ್ರತಿಯೊಂದು ಸಾಂತ ಅಥವಾ ಮರ್ಯಾದಿತ ಸಂಕಲ್ಪ ಮತ್ತು ಜ್ಞಾನದ ಕಾರ್ಯದಲ್ಲಿ ಆಯಾ ಕಾರ್ಯಕ್ಕೆ ಆಧಾರವಾಗಿ, ಪೋಷಕವಾಗಿ ಅನಂತದ ಸಂಪೂರ್ಣ ಶಕ್ತಿ ಮತ್ತು ಸಂಕಲ್ಪ ಇರುವುದನ್ನು ಕಾಣಬಹುದು. ಈಶ್ವರನ ಆಡಳಿತವು ಎಲ್ಲೋ ದೂರದಲ್ಲಿಂದ ಅಲ್ಲ. ವಿದೇಶೀಯವಲ್ಲ, ಅವನು ಎಲ್ಲದರಲ್ಲೂ ಇದ್ದಾನೆ, ಎಲ್ಲವನ್ನೂ ಮೀರಿ, ಅತೀತನಾಗಿ ಇದ್ದಾನೆ, ಅಂತೆಯೇ ಎಲ್ಲ ಕಾರ್ಯಗಳ ಪ್ರೇರಕ ಹಾಗೂ ನಿರ್ವಾಹಕ ಶಕ್ತಿ ಅವನೇ ಆಗಿದ್ದಾನೆ. ಅವನು ಪ್ರತಿ ಸತ್ತೆಯ ಪ್ರತಿ ಕಾರ್ಯದಲ್ಲೂ ಅಂತರ್ನಿಹಿತನಾಗಿ ಇದ್ದೇ ಇರುತ್ತಾನೆ, ಎಲ್ಲ ಸತ್ತೆಗಳ ಆತ್ಮ ರೂಪವಾಗಿ, ಚೈತನ್ಯ ರೂಪವಾಗಿ ಈಶ್ವರನಿದ್ದಾನೆ. ಅಂತೆಯೇ ಅವತಾರದ ಸಾಧ್ಯತೆಯ ಕುರಿತಾದ ನಮ್ಮ ಎಲ್ಲ ಸಂದೇಹಗಳು, ಯುಕ್ತಿ ಹಾಗೂ ತರ್ಕಗಳು ವಾಸ್ತವಿಕ ಸತ್ಯದ ಎದುರು ನಿಲ್ಲಲಾರವು. ಏಕೆಂದರೆ ನಾವು ಬುದ್ಧಿಯಿಂದ ಕಲ್ಪಿಸಿದ ಸಿದ್ಧಾಂತವಾಗಲಿ,

ತತ್ವವಾಗಲಿ ನಿರರ್ಥಕ ವಿಭಜನೆ ಅಷ್ಟೇ; ಪ್ರಪಂಚದ ವಾಸ್ತವಿಕ ಸತ್ಯವು ಪ್ರತಿ ಕ್ಷಣವೂ ಈ ತಾರ್ಕಿಕ ಪರಿಕಲ್ಪನೆಯನ್ನು ಮೀರುತ್ತದೆ ಮತ್ತು ನಿರಸ್ತಗೊಳಿಸುವಲ್ಲಿ ತೊಡಗಿರುತ್ತದೆ.

ಆದರೂ ಸಹ, ಈ ಸಾಧ್ಯತೆಯ ಹೊರತಾಗಿ, ವಾಸ್ತವಿಕವಾಗಿ ದೈವೀ ಕಾರ್ಯದ ಬಗ್ಗೆ ಪ್ರಶ್ನೆಯೊಂದಿದೆ – ಈ ದೈವೀ ಪ್ರಜ್ಞೆ ಎನ್ನುವುದು ನಿಜವಾಗಿಯೂ ಮುಂದೆ ಬಂದು, ತೆರೆಯ ಹಿಂದಿರುವುದನ್ನು ಬಿಟ್ಟು ತೆರೆ ಸರಿಸಿ ಮುಂದೆ ಬಂದು, ನೇರವಾಗಿ, ಪ್ರತ್ಯಕ್ಷ ಕಾರ್ಯ ಮಾಡುವುದು ನಿಜವೇನು? ಈ ಸಾಂತ, ದೃಶ್ಯ ಪ್ರಪಂಚದ ನಶ್ವರತೆಯ ಮಧ್ಯೆ ಬಂದು ಅಪರಿಪೂರ್ಣ, ದೋಷಮುಕ್ತ, ಮರ್ಯಾದಿತ ರೂಪ ತಾಳಿ ಕಾರ್ಯ ಮಾಡುವುದೆಂಬುದು ನಿಜವೇನು? ಆದರೆ ನಾವು ನೆನಪಿನಲ್ಲಿಡಬೇಕಾದ ಸಂಗತಿ ಏನೆಂದರೆ ಸಾಂತ, ಮರ್ಯಾದಿತ, ಸೀಮಿತ ಅನ್ನುವುದೆಲ್ಲ ಕೇವಲ ಒಂದು ವ್ಯಾಖ್ಯೆ ಮಾತ್ರ, ಅನಂತವು ತನ್ನನ್ನು ತಾನು ಅಭಿವ್ಯಕ್ತಗೊಳಿಸಿಕೊಂಡ, ಸ್ಥಿತಿಯ ಮುಖ ಬೆಲೆ ಇದ್ದ ಹಾಗೆ, ಅದರ ನಿಜವಾದ ಬೆಲೆ, ಪ್ರತಿ ಸಾಂತ ವಸ್ತುವಿನ ನೈಜ ಬೆಲೆ ಅನಂತವೇ ಆಗಿದೆ. ಪ್ರತಿ ವ್ಯಕ್ತಿಯು ನಾವು ತಿಳಿದಂತೆ ಅವನಷ್ಟಕ್ಕೆ ಅವನೇ ಅಲ್ಲವೆಂಬುದನ್ನು ಆಳವಾಗಿ ಗಮನಿಸಿದಾಗ ಗೊತ್ತಾಗುತ್ತದೆ. ಅವನು ಇಡೀ ವಿಶ್ವದ ಅಸ್ತಿತ್ವದಿಂದ ಭಿನ್ನನಲ್ಲ; ಕೇವಲ ಪ್ರತ್ಯೇಕ ಮನಃ ಪ್ರಾಣ ಶರೀರಗಳಲ್ಲಿರುವ ಮಾನವೀಯತೆ ಮಾತ್ರ ಹಾಗೂ ಈ ಮಾನವೀಯತೆ ಅಥವಾ ಮಾನವತೆ ಅನ್ನುವುದು ಪ್ರತ್ಯೇಕ ಸಂಕುಲ, ತನ್ನಷ್ಟಕ್ಕೆ ತಾನೇ ಇರುವ ಜೀವ ವೈವಿಧ್ಯ ಅಲ್ಲ; ಅದು ಕೂಡ ಸರ್ವ ಅಸ್ತಿತ್ವವೇ, ವಿಶ್ವಾತ್ಮಕ ಈಶ್ವರನೇ, ಈಶ್ವರನೇ ಮಾನವನ ರೂಪದಲ್ಲಿ ತೋರ್ಪಡಿಸಿಕೊಂಡಂತೆ ಅದು – ಆ ಮೂಲಕ ಈಶ್ವರನು ಕೆಲ ವಿಶಿಷ್ಟ ಸಾಧ್ಯತೆಗಳಿಗೆ ರೂಪ ಕೊಡುತ್ತಾನೆ, ಅವುಗಳನ್ನು ಬೆಳೆಸಿ, ವಿಕಾಸ ಹೊಂದುವಂತೆ ಮಾಡಿ, ಕೆಲ ವಿಶಿಷ್ಟ ಅಭಿವ್ಯಕ್ತಿಗೆ ರೂಪ ಕೊಡುತ್ತಾನೆ. ಅಲ್ಲಿ ವಿಕಾಸವಾಗುವುದು ಬೇರೆ ಏನೂ ಅಲ್ಲ "ಆತ್ಮ ಚೈತನ್ಯವೇ".

ನಾವು ತಿಳಿದಂತೆ ಆತ್ಮ ಅಥವಾ ಆತ್ಮ ಚೈತನ್ಯ ಅಂದರೆ ಸ್ವಯಂಭೂ, ಸರ್ವತಂತ್ರ ಸ್ವತಂತ್ರ ಸತ್ತೆ; ಅದರಲ್ಲಿ ಅನಂತ ಶಕ್ತಿಗಳಿರುತ್ತವೆ, ಅಮರ್ಯಾದಿತ, ಅಖಂಡ ಆನಂದವಿರುತ್ತದೆ. ಆತ್ಮ ಇದರಿಂದ ಭಿನ್ನವಾಗಿದೆ ಎಂದು ಭಾವಿಸಿದ್ದೆ ಆದರೆ, ಮಾನವ ಮತ್ತು ವಿಶ್ವಕ್ಕೂ ಈ ಆತ್ಮಕ್ಕೂ ಯಾವ ಸಂಬಂಧವೂ ಇಲ್ಲ, ಮನುಷ್ಯ ಮತ್ತು ವಿಶ್ವ ಇವುಗಳ ನಡುವೆ ಯಾವ ರೀತಿಯ ವ್ಯವಹಾರವೂ

ನಡೆಯುವುದು ಸಾಧ್ಯವಿಲ್ಲವೆಂದು ಹೇಳಬೇಕಾಗಿ ಬರುತ್ತದೆ. ಆದ್ದರಿಂದ ಆತ್ಮ ಅಂದರೆ ಅನಂತ ಜ್ಞಾನವುಳ್ಳ, ನಿರುಪಾದಿಕ ಆನಂದಮಯ, ಸ್ವಯಂಭೂ, ಅನಂತ ಅಸ್ಮಿತೆಯೆ ವಸ್ತು ಅಥವಾ ಪುರುಷ ಎಂದು ಪರಿಭಾವಿಸಿ ಮುಂದುವರೆಯುವುದೇ ಯೋಗ್ಯ ಕ್ರಮವಾಗಿದೆ. ಜಡ, ಅಚೇತನವೆಂದು ನಾವು ಭಾವಿಸಿರುವ ಭೌತಿಕ ವಸ್ತುವು ಪ್ರಜ್ಞಾಹೀನವಾಗಿಲ್ಲ. ವಿಜ್ಞಾನವು ಈಗ ಸಾಕಷ್ಟು ಮುಂದುವರಿದಿದ್ದು, ಅದರ ಹೇಳಿಕೆಯ ಪ್ರಕಾರ ಅಣು, ಪರಮಾಣು ಅಥವಾ ಜೀವಕೋಶದಲ್ಲಿ ಕೂಡ ಇಚ್ಛಾ ಶಕ್ತಿ ಇದೆ, ಸಂಕಲ್ಪ ಶಕ್ತಿ ಇದೆ, ಬುದ್ಧಿ ಇದೆ, ವಿವೇಕ ಇದೆ. ಆದರೆ, ಇಷ್ಟೇ, ಆ ಶಕ್ತಿಯು, ಅಂದರೆ ಸಂಕಲ್ಪ ಮತ್ತು ಬುದ್ಧಿಯ ಶಕ್ತಿಯು ಆತ್ಮ ಚೈತನ್ಯಕ್ಕೆ ಸಂಬಂಧಿಸಿದ್ದಾಗಿದೆ, ಈಶ್ವರ ಅಥವಾ ಪರಮಾತ್ಮನಿಗೆ ಸಂಬಂಧಿಸಿದ್ದಾಗಿದೆ. ಅದೇನೂ ಸ್ವತಂತ್ರ, ಅಥವಾ ಆತ್ಮನಿಂದ ಭಿನ್ನವಾದ ಅಥವಾ ಯಾಂತ್ರಿಕ ಶಕ್ತಿಯಲ್ಲ. ಈ ವಿಶ್ವಾತ್ಮಕ ಸಂಕಲ್ಪ ಮತ್ತು ಬುದ್ಧಿ ಅಣುವಿನಲ್ಲಿ, ಜೀವ ಕೋಶದಲ್ಲಿ ಅಂತರ್ಗತವಾಗಿರುತ್ತದೆ. ತನ್ನ ಶಕ್ತಿಯನ್ನು ವರ್ಧಿಸಿಕೊಳ್ಳುತ್ತ ಹೋಗುತ್ತದೆ. ಆಕಾರದಿಂದ ಆಕಾರಕ್ಕೆ ಅದು ವಿಕಾಸ ಹೊಂದುತ್ತ ಹೋಗುತ್ತದೆ. ಕೊನೆಗೆ ವಿಕಾಸ ಹೊಂದಿದ ಜೀವಿಯಾದ ಮಾನವನನ್ನು ಈಶ್ವರನ ಹತ್ತಿರಕ್ಕೆ ಒಯ್ಯುತ್ತದೆ. ಅವನ ಬಾಹ್ಯ ಬೌದ್ಧಿಕ ಅಸ್ಮಿತೆಯಲ್ಲಿ ಕೂಡ ದೈವತ್ವವನ್ನು ಪ್ರಕಟಪಡಿಸುತ್ತದೆ. ಆದರೂ ಸಹ, ಇಲ್ಲಿ ಕೂಡ ಒಂದು ಮಿತಿ ಇದ್ದೇ ಇದೆ. ಪ್ರಕಟಣೆಯಲ್ಲಿ ಅಪರಿಪೂರ್ಣತೆ, ದೋಷ ಇರುತ್ತದೆ. ಹೀಗಾಗಿ ಆ ಜೀವಿಯು (ಮಾನವನು) ತನ್ನ ಆತ್ಮಜ್ಞಾನ ಪಡೆದು ಪರಮಾತ್ಮನೊಂದಿಗೆ ಏಕತೆ ಸಾಧಿಸುವಲ್ಲಿ ಯಶಸ್ವಿಯಾಗದೇ ಹೋಗುತ್ತದೆ. ಏಕೆಂದರೆ ಪ್ರತಿಯೊಂದು ಸೀಮಿತ ಜೀವಿಯು ವ್ಯಾವಹಾರಿಕ ಕಾರ್ಯದಲ್ಲಿ ದೋಷವಿರುವಂತೆ ಪ್ರಜ್ಞೆಯ ಇರುವಿಕೆಯಲ್ಲಿ ಕೂಡ ಸೀಮಿತತೆ ಇರುತ್ತದೆ. ಹೀಗಾಗಿ ಆ ಜೀವಿಯ ಪ್ರಜ್ಞೆ ವಿಕೃತವಾಗುತ್ತದೆ. ಅದರಿಂದ ಜೀವಿಗಳ ನಡುವೆ ಪರಸ್ಪರ ಸಂಬಂಧದಲ್ಲಿ ವ್ಯತ್ಯಾಸ, ಭೇದ ಕಂಡು ಬರುತ್ತದೆ. ಈಶ್ವರನು ಹಿಂದೆ ನಿಂತು ಎಲ್ಲವನ್ನೂ ನಿಯಂತ್ರಿಸುತ್ತಾನೆ, ನಡೆಸುತ್ತಾನೆ, ಜೀವಿಯ ಸಂಕುಚಿತ ಪ್ರಜ್ಞಾ–ಕಾರ್ಯಗಳ ಹಿಂದೆ ನಿಂತು ಕೆಲಸ ಮಾಡುವ ಕರ್ತೃಶಕ್ತಿಯೂ ಅವನೇ. ಆದರೆ ಅವನು ಮಾತ್ರ ಅದೃಶ್ಯನಾಗಿರುತ್ತಾನೆ. ವೇದಗಳು ಹೇಳುವಂತೆ ಅವನು ರಹಸ್ಯವಾಗಿ ಅಡಗಿಕೊಂಡಿರುತ್ತಾನೆ. ಇದನ್ನೇ ಗೀತೆಯು "ಈಶ್ವರನು ಸಕಲ ಜೀವಿಗಳ ಹೃದ್ಗುಹೆಯಲ್ಲಿ ವಾಸವಾಗಿರುತ್ತಾನೆ. ಅವನು ತನ್ನ ಮಾಯೆಯ ಮೂಲಕ ಎಲ್ಲರನ್ನೂ, ಎಲ್ಲವನ್ನೂ ಚಕ್ರವತ್ ತಿರುಗಿಸುತ್ತಾನೆ" (18.61) ಎಂದು ಹೇಳುತ್ತದೆ. ಈ ರೀತಿ ಕಾಣದಂತೆ ಅಡಗಿಕೊಂಡು, ಜೀವಿಯ ಹೃದಯದಲ್ಲಿಯೇ

ಅಡಗಿ ಕುಳಿತು, ಜೀವಿಯ ಅಹಂಕಾರ ಭರಿತ ಪ್ರಜ್ಞೆಗೆ ಅಗೋಚರನಾಗಿ ತನ್ನ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಾನೆ. ಇದು ಈಶ್ವರನ ಸಹಜ ಕಾರ್ಯವೈಖರಿ, ಎಲ್ಲ ಜೀವರಾಶಿಗಳ ಜೊತೆಗೂ ಅವನು ಇದೇ ರೀತಿ ಸಂಬಂಧ ಸಾಧಿಸಿರುತ್ತಾನೆ. ಹೀಗಿರುವಾಗ ಈಶ್ವರನು ಬೇರೆ ಯಾವುದೋ ರೂಪತಾಳಿ ನಮ್ಮೆದುರು ಬಂದು, ನಶ್ವರ ಪ್ರಪಂಚದ ಪ್ರಜ್ಞೆಯನ್ನಾಂತು, ನೇರವಾಗಿ ಬಂದು ಕಾರ್ಯ ಏಕೆ ಮಾಡುತ್ತಾನೆ? ಹಾಗೆ ಮಾಡಲು ಅವನಿಗೆ ಯಾವ ಪ್ರೇರಣೆ? ಅವತಾರದ ಪರಿಕಲ್ಪನೆಯಲ್ಲಿ ಯಾವ ತ್ರುಟಿಯೂ ಇಲ್ಲ, ತನ್ನ ಹಾಗೂ ಮಾನವರ ನಡುವೆ ಇರುವ ಸಂಬಂಧವನ್ನು ಸ್ಫುಟಗೊಳಿಸಲು, ತಪ್ಪು ತಿಳುವಳಿಕೆಯ ಪರದೆಯನ್ನು ತೆಗೆದು ಹಾಕಲು ಈಶ್ವರನು ಹೀಗೆ ಅವತಾರ ತಾಳಿ ಬರುತ್ತಾನೆ ಎಂಬ ಪರಿಕಲ್ಪನೆ ಯೋಗ್ಯವಾಗಿದೆ, ಸರಿಯಾಗಿದೆ, ಆಕ್ಷೇಪಾರ್ಹವೇನಲ್ಲ.

ಸೃಷ್ಟಿಯಾದ ಜೀವದ ಕಾರ್ಯಗಳು ಸಾಮಾನ್ಯತಃ ಅಪೂರ್ಣ, ಸದೋಷ ಇದ್ದೇ ಇರುತ್ತವೆ. ಪ್ರಕೃತಿಯ ಯಂತ್ರದಲ್ಲಿ ಜೀವವು ಅಂಕಿತವಾಗಿರುವುದರಿಂದ ಈ ಕಾರ್ಯಗಳು ದೋಷಯುಕ್ತವಾಗಿರುತ್ತವೆ. ಜೀವವು ಮಾಯಾಕೃತ ಆತ್ಮರೂಪ ರಚನೆಯ ಮರ್ಯಾದಿತ (ಸೀಮಿತ) ಜಗದಲ್ಲಿ ವ್ಯವಹರಿಸುವುದರಿಂದ ಅದರ ಕಾರ್ಯಗಳಲ್ಲಿ ದೋಷ ಬಂದೇ ಬರುತ್ತದೆ. ಗೀತೆಯು ಈ ಎರಡು ಕಾರಣಗಳನ್ನು ಹೇಳಿ, ಜೀವಿಯ ಕಾರ್ಯಗಳು ಸದೋಷವಾಗಿರುವುದು ನೈಸರ್ಗಿಕವಾಗಿದೆ ಎಂದು ಪ್ರಮಾಣೀಕರಿಸುತ್ತದೆ. ಮಾಯಾ ಮತ್ತು ಪ್ರಕೃತಿ ಇವು ಈಶ್ವರನ, ಏಕಮೇವ ಶಕ್ತಿಯ, ಏಕಮೇವ ಪ್ರಜ್ಞಾಶಕ್ತಿಯ ಅಂಗಗಳಾಗಿವೆ. ಅವು ಪರಸ್ಪರ ಪೂರಕವಾಗಿವೆ. ಮಾಯೆಯು ತಾತ್ವಿಕ ದೃಷ್ಟಿಯಿಂದ ಅಭಾಸ ಅಥವಾ ಭ್ರಮೆ ಅಲ್ಲ; ಕನಿಷ್ಠ ಪ್ರಕೃತಿಯ ಅಂಗಭೂತ ಅಜ್ಞಾನದಿಂದ ಮಾಯೆಯ ರಚನೆಯಲ್ಲಿ ಅಭಾಸದ, ಭ್ರಾಂತಿಯ ದೃಶ್ಯಗಳು ಕಂಡು ಬರುತ್ತವೆ (ಕನಿಷ್ಠ ಅಥವಾ ಅಪರಾ ಪ್ರಕೃತಿ ಅಂದರೆ ತ್ರಿಗುಣೀ ಮಾಯಾ). ತತ್ವತಃ ಮಾಯೆಯು ಈಶ್ವರನ ಪ್ರಜ್ಞೆಯಾಗಿದೆ. ನಾನಾ ಪ್ರಕಾರದ ಅಸ್ತಿತ್ವದ ಈಶ್ವರೀಯ ಪ್ರಜ್ಞಾ ಶಕ್ತಿಯು ಮಾಯೆ ಎನಿಸುವುದು ಮತ್ತು ಪ್ರಕೃತಿಯು ಈಶ್ವರೀಯ ಪ್ರಜ್ಞೆಯ ಕಾರ್ಯಕಾರಿ ಶಕ್ತಿಯಾಗಿದೆ. ಮಾಯೆಯ ರಚಿಸಿದ ಪ್ರತ್ಯೇಕ ಜೀವಿಯನ್ನು ಆಯಾ ಜೀವಿಯ ಸ್ವಭಾವ, ಸ್ವಧರ್ಮಗಳನ್ನು ಹಿಡಿದುಕೊಂಡು ಆಯಾ ಗುಣದ ಕಡೆಗೆ, ಆಯಾ ಕರ್ಮದ ಕಡೆಗೆ ಕರೆದೊಯ್ದು ವ್ಯವಹಾರ ಸಂಪನ್ನಗೊಳಿಸುವುದು ಪ್ರಕೃತಿಯ ಕಾರ್ಯವಾಗಿದೆ. "ನನ್ನ ಪ್ರಕೃತಿಯ ಮೇಲೆ ಒತ್ತಡ ಹೇರಿ, ಅದನ್ನು ಚಾಲಿತಗೊಳಿಸಿ ಈ ಅನಂತ ಸೃಷ್ಟಿಯನ್ನು ನಾನೇ ರಚಿಸುತ್ತೇನೆ. ಪ್ರಕೃತಿಯ ನಿಯಂತ್ರಣ ದಡಿಯಲ್ಲೇ ಎಲ್ಲ ಜೀವ ಜಂತು, ಜಡ

ಪದಾರ್ಥ ಎಲ್ಲವೂ ಇರುತ್ತವೆ. ಅವು ಸ್ವತಂತ್ರವಾಗಿರುವುದಿಲ್ಲ (9.8). ಮಾನವ ಶರೀರದಲ್ಲಿ ವಾಸ್ತವ್ಯ ಹೂಡಿರುವ ಈಶ್ವರನು ಸಾಮಾನ್ಯ ಜನರ ಕಣ್ಣಿಗೆ ಅಗೋಚರನಾಗಿರುತ್ತಾನೆ. ಮನಕ್ಕೆ ಅಗ್ರಾಹ್ಯನಾಗಿರುತ್ತಾನೆ. ಏಕೆಂದರೆ ಅವರು ಪ್ರಕೃತಿಯ ಯಂತ್ರದ ಮೋಡಿಗೆ ಸಿಲುಕಿರುತ್ತಾರೆ. ಮನದ ಸೀಮೀತತೆಗೆ ಅಸಹಾಯಕರಾಗಿ ಬದ್ಧರಾಗಿರುತ್ತಾರೆ. ಅವರು ಅಸುರೀ ಸ್ವಭಾವ ಹೊಂದಿದ್ದು, ಅವರ ಇಚ್ಛೆ, ಬಯಕೆಗಳೇ ಅವರನ್ನು ಮೋಸಗೊಳಿಸುತ್ತವೆ, ಅವರಲ್ಲಿ ಅಹಂಕಾರ ಬಹಳ ಹೆಚ್ಚಾಗಿರುತ್ತದೆ. ಅವರ ಬುದ್ಧಿ, ವಿವೇಕ ಎಲ್ಲವೂ ಅವರನ್ನೇ ವಂಚಿಸುತ್ತವೆ. "ಮೋಹಿನೀಂ ಪ್ರಕೃತಿ ಮಾಶ್ರಿತಾಃ" (ಗೀ. 9.12) ಪುರುಷೋತ್ತಮನು ನಮ್ಮ ಅಂತರಂಗದಲ್ಲಿಯೇ ಇದ್ದಾನೆ. ಆದರೆ ಎಲ್ಲರಿಗೂ ಆತ್ಮನ ಇರುವಿಕೆಯನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಕತ್ತಲೆಯ ದಟ್ಟ ಪರದೆಯ ಹಿಂದೆ ಅಥವಾ ಕಣ್ಣು ಕುಕ್ಕುವ ಪ್ರಕಾಶದ ಆವರಣದ ಹಿಂದೆ ಅಡಗಿಕೊಂಡಿರುತ್ತಾನೆ. ತನ್ನ ಯೋಗ ಮಾಯೆಯಿಂದ ತನ್ನನ್ನು ಮುಚ್ಚಿಕೊಂಡು ಕಾಣದಂತೆ ನಮ್ಮೊಳಗೆ ಅಡಗಿ ಕುಳಿತಿದ್ದಾನೆ. ನಾಹಂ ಪ್ರಕಾಶಃ ಸರ್ವಸ್ಯಯೋಗಮಾಯಾ ಸಮಾವೃತಃ (ಗೀ. 9.25) "ಈ ಜಗತ್ತು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿ ಮುಳುಗಿದ್ದು, ಸತ್ವ, ರಜ, ತಮೋ ಎಂಬ ಪ್ರಕೃತಿಯ ಗುಣಗಳಿಂದ ನಿರ್ಧಾರಿತವಾಗಿದ್ದು, ನನ್ನನ್ನು ಗುರುತಿಸುವಲ್ಲಿ ಸೋಲುತ್ತದೆ. ನನ್ನ ಇರುವಿಕೆಯನ್ನು ಗುರುತಿಸುವುದಿಲ್ಲ. ಏಕೆಂದರೆ ಇದು ನನ್ನ ದೈವೀ ಮಾಯೆಯು. ಇದನ್ನು ನಿವಾರಿಸಿಕೊಳ್ಳುವುದು ಸುಲಭವಲ್ಲ. ನನಗೆ ಶರಣು ಬಂದವರು ಮಾತ್ರ ಅದರಿಂದ ಪಾರಾಗಬಲ್ಲರು. ಯಾರು ಆಸುರೀ ಪ್ರಕೃತಿಯನ್ನಾಶ್ರಯಿಸಿಕೊಂಡಿರುವುರೋ ಅವರ ಜ್ಞಾನವನ್ನು ನನ್ನ ಮಾಯೆಯು ಆವರಿಸಿ ಬಿಡುವುದು" (ಗೀ. 13, 14, 15) ಎಂದು ಗೀತೆ ಸ್ಪಷ್ಟವಾಗಿ ಹೇಳುವುದು. ಇದರರ್ಥವೇನೆಂದರೆ, ಎಲ್ಲರಲ್ಲೂ ದೈವೀ ಪ್ರಜ್ಞೆ ಎಂಬುದು ಅಂತರ್ಗತವಾಗಿ ಇದ್ದೇ ಇದೆ. ಪ್ರತಿ ಜೀವಿಯ ಅಂತರಂಗದಲ್ಲೂ ಈಶ್ವರನಿದ್ದಾನೆ. ಆದರೆ, ಅವನು ತನ್ನ ಯೋಗ ಮಾಯೆಯನ್ನು ತನ್ನ ಸುತ್ತ ಹೊದ್ದು ಕುಳಿತಿರುವುದರಿಂದ ಜೀವಿಯ ಜ್ಞಾನವು ಆವೃತವಾಗಿ ಇಲ್ಲದಾಗಿ, ವಿಕೃತವಾಗಿ ತೋರುವುದು. ಅದರಿಂದಾಗಿ ಅಹಂಕಾರವು ಉತ್ಪನ್ನವಾಗುವುದು. ಈ ಪ್ರಕೃತಿಯ ಹಾಗೂ ಅಹಂಕಾರದ ವೃತ್ತಿಯಿಂದ ಪಾರಾಗಿ ಅಂತರಂಗದಲ್ಲಿರುವ ಈಶ್ವರನಿಗೆ ಶರಣಾದರೆ ಆಂತರ್ಯದಲ್ಲಿ ರಹಸ್ಯವಾಗಿರುವ ಈಶ್ವರನ ಅರಿವಾಗುವುದು.

ಪರಮಾತ್ಮನ ಎರಡು ವಿಧ ಕಾರ್ಯಗಳನ್ನು ಗೀತೆಯು ಸ್ವಲ್ಪ ವಿಭಿನ್ನ ರೀತಿಯ ಭಾಷಾ ಭೇದದ ಮೂಲಕ ವರ್ಣಿಸುವುದು ಆಸಕ್ತಿಕರವಾಗಿದೆ. ಸಾಮಾನ್ಯ

ಜೀವಿಗಳನ್ನು ಸೃಷ್ಟಿಸುವಲ್ಲಿ ಹಾಗೂ ಅವುಗಳ ಮೂಲಕ ಮಾಡುವ ವ್ಯವಹಾರ ಒಂದು ವಿಧವಾದರೆ, ಇನ್ನೊಂದು ತಾನೇ ಸ್ವತಃ ಅವತಾರ ರೂಪದಲ್ಲಿಳಿದು ಬಂದು ಮಾಡುವ ವ್ಯವಹಾರ, ಕೆಲಸ ಕಾರ್ಯ ಮತ್ತೊಂದು ಬಗೆಯದು. ಇವೆರಡನ್ನೂ ಗೀತೆ ಚೆನ್ನಾಗಿ ವಿವರಿಸುತ್ತದೆ. ಅವೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಮಹತ್ವದ್ದಿದೆ. "ಪ್ರಕೃತಿಂ ಸ್ವಾಮೆವಷ್ಟಭ್ಯ, ಅಂದರೆ ನನ್ನದೇ ಆದ (ದೈವೀ) ಪ್ರಕೃತಿಯಲ್ಲಿದ್ದುಕೊಂಡು ನಾನು ಲಕ್ಷಾವಧಿ ಜೀವರಾಶಿಗಳನ್ನು ವಿಸೃಜಾಮಿ ಸೃಷ್ಟಿಸುತ್ತೇನೆ. ಅವೆಲ್ಲವೂ ಪ್ರಕೃತಿಯ ನಿಯಂತ್ರಣದಲ್ಲಿರುವಂತೆ ವಿಧಿಸುತ್ತೇನೆ. ನಾನು ಪ್ರಕೃತಿಯನ್ನು ನನ್ನ ವಶದಲ್ಲಿಟ್ಟುಕೊಂಡಿದ್ದರೂ ಈ ಜೀವಿಗಳು ಪ್ರಕೃತಿಯ ವಶದಲ್ಲಿ, ಅದರ ಅಧೀನದಲ್ಲಿದ್ದು, ಪ್ರಕೃತಿಗೆ ಬದ್ಧವಾಗಿ ವ್ಯವಹರಿಸುತ್ತವೆ, ಅವಶಂ ಪ್ರಕೃತೇಃ ಮಾತ್" ಮತ್ತೆ "ನನ್ನದೇ ಪ್ರಕೃತಿಯನ್ನಾಧರಿಸಿ ನಿಂತು ಪ್ರಕೃತಿಂ ಸ್ವಾಮೆಧಿಷ್ಠಾಯ, ನನ್ನ ಮಾಯೆಯ ಮೂಲಕ ಆತ್ಮ ಮಾಯೆಯಿಯೂ ಆತ್ಮಾನಂ ಸೃಜಾಮಿ, ನನ್ನನ್ನು ಪ್ರಕಟಿಸಿಕೊಳ್ಳುತ್ತೇನೆ" ಇಲ್ಲಿ ಅವಷ್ಟಭ್ಯ ಮತ್ತು ಅಧಿಷ್ಠಾಯ ಎರಡೂ ಶಬ್ದಗಳನ್ನು ಗಮನಿಸಬೇಕು. ಮೊದಲನೆಯದು ಅಧೋಮುಖ ಒತ್ತಡವನ್ನು, ಬಲವನ್ನು ಸೂಚಿಸುವುದು: ಈ ಒತ್ತಡದ ಮೂಲಕ ಸೃಷ್ಟಿಯಾದ ಜೀವಿಗಳು ಪ್ರಕೃತಿಗೆ ಅಧೀನವಾಗಿರುತ್ತವೆ, ಪ್ರಕೃತಿಯ ವಶದಲ್ಲಿರುತ್ತವೆ, ಮರ್ಯಾದಿತವಾಗಿರುತ್ತವೆ, ಸೀಮಿತವಾಗಿರುತ್ತವೆ, ಅವು ಅಜ್ಞಾನದ ಮೂಲಕ ಅಸಹಾಯಕವಾಗಿ ಎಳೆದೊಯ್ಯಲ್ಪಡುತ್ತವೆ, ಚಾಲಿತವಾಗಿರುತ್ತವೆ, ಇಲ್ಲಿ ಪ್ರಕೃತಿಯು ಪ್ರಬಲವಾಗಿರುತ್ತದೆ. ಆದ್ದರಿಂದ ಸಾಮಾನ್ಯ ಜೀವಿಯ ಜನ್ಮ ತಾಳುವಿಕೆಯಲ್ಲಿ "ಭೂತಗ್ರಾಮಂ" ಲಕ್ಷಾವಧಿ ಜೀವಿಗಳ ಸೃಷ್ಟಿ ಪ್ರಕ್ರಿಯೆ ಇರುತ್ತದೆ. ಅದೇ ದೈವೀ ಜನನದ ವಿಷಯಕ್ಕೆ ಬಂದರೆ, ಇದು ಸ್ವಯಂ–ಸೃಷ್ಟಿಯಾಗಿರುತ್ತದೆ. ಆತ್ಮ ಪ್ರಜ್ಞೆಯುಳ್ಳ ಸ್ವಯಂಭೂ, ಸ್ವತಂತ್ರ ಸೃಷ್ಟಿಯಾಗಿರುತ್ತದೆ. ಆತ್ಮಾನಂ ಅಂದರೇ ಸ್ವತಃ ಈಶ್ವರನೇ ಅವತರಿಸಿ, ಜನ್ಮ ತಾಳಿ ಬರುತ್ತಾನೆ. ವೇದಾಂತದ ಪರಿಕಲ್ಪನೆಯಲ್ಲಿ ಆತ್ಮ ಮತ್ತು ಭೂತಾನಿ – ಜೀವಿಗಳು ಇವುಗಳ ನಡುವೆ ಬಹಳ ವ್ಯತ್ಯಾಸ ಇದೆ; ಇದನ್ನೇ ಯುರೋಪಿಯನ್ ಪರಿಕಲ್ಪನೆಯಲ್ಲಿ Beeing ಮತ್ತು Becoming ಅಸ್ತಿತ್ವ ಮತ್ತು ಅಸ್ತಿತ್ವದ ಉಪಾಧಿಕೃತ ರೂಪಗಳು ಎಂದು ಹೇಳುವುದು. ಸಾಮಾನ್ಯ ಜನ್ಮವೇ ಇರಲಿ ದಿವ್ಯ ಜನ್ಮವೇ ಇರಲಿ ಸೃಷ್ಟಿಯ ಸಾಧನ ಅಥವಾ ಮಾಧ್ಯಮವು "ಮಾಯೆಯೇ" ಆಗಿದೆ. ದೈವೀ ಜನನದಲ್ಲಿ ಮಾಯೆಯು ಸ್ವಮಾಯೆ (ಆತ್ಮ ಮಾಯೆ) ಆಗಿದ್ದು, ಇಲ್ಲಿ ಕೆಳ ಸ್ತರದ ಅಜ್ಞಾನದ ಮಾಯೆಯು ಇರುವುದಿಲ್ಲ. ಇಲ್ಲಿ ಪ್ರಜ್ಞಾಯುಕ್ತವಾದ ಚಲನೆ, ಕಾರ್ಯ ಇರುತ್ತದೆ, ಸ್ವಯಂಭೂ ಪ್ರಕಟನೆ ಇರುತ್ತದೆ, ನಶ್ವರವಾದ

ಪ್ರಪಂಚದಲ್ಲಿ ದೇವಾಧಿ ದೇವನೇ ಜನ್ಮ ತಳೆದು ಬಂದಿರುತ್ತಾನೆ, ತನ್ನ ಜನ್ಮದ ಉದ್ದೇಶ ಹಾಗೂ ತಾನು ಮಾಡಬೇಕಾದ ಕಾರ್ಯದ ಸ್ಪಷ್ಟ ಅರಿವು, ಪ್ರಜ್ಞೆ ಇರುತ್ತದೆ. ಇದನ್ನು ಕೃಷ್ಣನೇ ಯೋಗ ಮಾಯೆ ಎಂದು ಹೇಳುತ್ತಾನೆ. ಸಾಮಾನ್ಯ ಜೀವಿಯ ಜನನದಲ್ಲಿ ಈ ಯೋಗ ಮಾಯೆಯು ಪರಮಾತ್ಮನನ್ನು ಕಾಣದಂತೆ ಆವರಿಸಿ ಮರೆಮಾಡುತ್ತದೆ, ಕೆಳ ಹಂತದ ಅಜ್ಞಾನದ ಪ್ರಜ್ಞೆಯಿಂದ ಮುಚ್ಚಿ ಹೋಗುತ್ತದೆ. ಇದನ್ನು ಅವಿದ್ಯಾ – ಮಾಯಾ ಅಂತಲೂ ಕರೆಯುತ್ತಾರೆ. ಯೋಗ ಮಾಯೆ ಮತ್ತು ಅವಿದ್ಯಾ ಮಾಯೆ ಎರಡೂ ಬೇರೆ ಬೇರೆ ಅಲ್ಲ; ಯೋಗ ಮಾಯೆಯು ಆತ್ಮ ಪ್ರಜ್ಞೆಯಿಂದ ಕೂಡಿರುತ್ತದೆ, ಹೀಗಾಗಿ ತನ್ನ ಕಾರ್ಯ ಸಂಪನ್ನವಾಗುತ್ತಲೇ (ಅವತಾರ ಸ್ವರೂಪವು) ತಕ್ಷಣ ಉಪಸಂಹೃತವಾಗಿ ಬಿಡುತ್ತದೆ, ಪರಮಾತ್ಮನಲ್ಲಿ ಹೋಗಿ ಸೇರಿಕೊಂಡು ಬಿಡುತ್ತದೆ. ಇದನ್ನು ವಿದ್ಯಾ–ಮಾಯೆ ಎಂದೂ ಹೇಳಬಹುದು. ದೈವೀ ಅವತರಣದಲ್ಲಿದ್ದು ತನ್ನ ಉದ್ದೇಶ ಹಾಗೂ ಕೆಲಸದ ಬಗ್ಗೆ ಸಂಪೂರ್ಣ ಅರಿವು ಹೊಂದಿದ್ದು, ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿರಿಸಿಕೊಂಡಿರುತ್ತದೆ. ಸಾಮಾನ್ಯ ಅಜ್ಞಾನದ ಮೂಲಕ ನಡೆಯುವ ಕ್ರಿಯೆಗಳಲ್ಲಿ ಈ ರೀತಿಯ ಸ್ವಾಧೀನತೆ, ಸ್ವಾತಂತ್ರ್ಯ ಇರುವುದಿಲ್ಲ. ದಿವ್ಯ ಜನ್ಮದಲ್ಲಿ ಎಲ್ಲ ಕರ್ಮಗಳೂ ಅರಿವಿನಿಂದಲೇ ನಡೆಯುತ್ತವೆ.

ಗೀತೆಯು ಸ್ಪಷ್ಟವಾಗಿ ಹೇಳುವಂತೆ, ನಮ್ಮ ಮಾನವತೆಯಲ್ಲಿ ಸಂಪೂರ್ಣ ದಿವ್ಯ ಪ್ರಜ್ಞೆಯನ್ನಿಟ್ಟುಕೊಂಡು ಮಾನವನ ರೂಪದಲ್ಲಿ ಈಶ್ವರನು ಅವತರಿಸುವುದೇ ದಿವ್ಯ ಜನ್ಮವು; ಸಾಮಾನ್ಯ ಜನ್ಮದ ಪ್ರಕ್ರಿಯೆಯೇ ಇಲ್ಲೂ ಇರುತ್ತದೆ. ಆದರೆ ಅದು ಅಜ್ಞಾನದಲ್ಲಿನ ಜನ್ಮವಲ್ಲ, ಬದಲಾಗಿ ಅದು ಜ್ಞಾನದಲ್ಲಿನ ಜನ್ಮ, ಸಂಪೂರ್ಣ ಜ್ಞಾನದೊಂದಿಗೆ ಆಗುವ ಜನ್ಮ; ಅದು ಕೇವಲ ಭೌತಿಕ ಸಂಗತಿ ಅಥವಾ ಭೌತಿಕ ಜನ್ಮವಲ್ಲ, ಅದು ಆತ್ಮದ ಜನ್ಮ; ಆತ್ಮವು ಸ್ವಯಂಭೂ, ಆತ್ಮ ನಿರ್ಭರ, ಸಂಪೂರ್ಣ ಸ್ವತಂತ್ರ ಅಸ್ತಿತ್ವವಾಗಿ ಜನ್ಮ ತಳೆಯುವುದು. ಅದು ತನ್ನ ಉಪಾಧಿಕೃತ ರೂಪಗಳ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುವುದು. ಅಜ್ಞಾನದ ಮೋಡಗಳ ಮರೆಯಲ್ಲಿ ತನ್ನ ಅಸ್ಥಿತೆಯನ್ನು ಅದು ಕಿಂಚಿತ್ತೂ ಕಳೆದುಕೊಳ್ಳುವುದಿಲ್ಲ. ಪ್ರಾಕೃತಿಕ ಶರೀರದಲ್ಲಿ ದಿವ್ಯ ಜನ್ಮ ಕ್ರಿಯೆಗಳ ಮೂಲಕ ಆತ್ಮವು ಪ್ರಕೃತಿಯ ಪ್ರಭುವಾಗಿ, ಒಡೆಯನಾಗಿ ಜನ್ಮ ತಾಳುವುದು. ಜನ್ಮ ತೆಗೆದುಕೊಂಡ ಮೇಲೆ ಕೂಡ ಅದು ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಂಡೇ ಕಾರ್ಯ ಮಾಡುವುದು. ತನ್ನ ಸ್ವ–ಇಚ್ಛೆಯಂತೆ, ಸಂಕಲ್ಪದಂತೆ ಪ್ರಕೃತಿಯ ಕ್ಷೇತ್ರದಲ್ಲಿ ವ್ಯವಹರಿಸುವುದು. ಪ್ರಕೃತಿಯ ವರ್ತುಲದಲ್ಲಿ ಸಿಕ್ಕು ಅದರಂತೆ ಇದು ವರ್ತಿಸುವುದಿಲ್ಲ. ಸಾಮಾನ್ಯ ಜೀವಿಗಳು ಅಜ್ಞಾನ ವಶವರ್ತಿಯಾಗಿ ವ್ಯವಹರಿಸುವಂತೆ ದಿವ್ಯ ಜನ್ಮ ತಾಳಿದ ಅವತಾರ

ಪುರುಷನು ಅಜ್ಞಾನದಲ್ಲಿ ಅಸಹಾಯಕನಾಗಿ ವರ್ತಿಸದೇ ಜ್ಞಾನದಿಂದ, ಪ್ರಕೃತಿಯನ್ನು ತನ್ನ ನಿಯಂತ್ರದಲ್ಲಿಟ್ಟುಕೊಂಡು ವ್ಯವಹರಿಸುತ್ತಾನೆ. ಎಲ್ಲ ಜೀವಿಗಳಲ್ಲಿ ಗುಪ್ತವಾಗಿರುವ ಆತ್ಮನು ಪರದೆಯ ಹಿಂದೆ ನಿಂತುಕೊಂಡು ಈಶ್ವರನ ಹಾಗೆ ಜೀವ (ಪ್ರಾಣ)ವನ್ನು ನಿಯಂತ್ರಿಸುತ್ತಿರುತ್ತಾನೆ. ದಿವ್ಯ ಜನ್ಮ ಪ್ರಕ್ರಿಯೆಯಲ್ಲಿ ಆತ್ಮನು ಮುಂದೆ ಬಂದು ನಿಲ್ಲುತ್ತಾನೆ. ಮಾನವರ ಅಂತರ್ಬಾಹ್ಯ ಸಮಸ್ತ ಅಸ್ತಿತ್ವವನ್ನು ಈಶ್ವರನಾಗಿ ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ.

ಸಾಮಾನ್ಯತಃ ಪರದೆಯ ಹೊರಗಿನ ಮಾನವೀಯ ಪ್ರಜ್ಞೆಯು ಪ್ರಕೃತಿಯನ್ನು ನಿಯಂತ್ರಣದಲ್ಲಿ ತೆಗೆದುಕೊಳ್ಳುವುದಿಲ್ಲ, ಬದಲಾಗಿ ಅದರ ದಾಸ್ಯತ್ವ ಕೈಕೊಳ್ಳುತ್ತದೆ. ಏಕೆಂದರೆ, ಈ ಜೀವಿಗೆ ಅರಿವಿರುತ್ತದಾದರೂ ಆತ್ಮಜ್ಞಾನಕ್ಕೆ ವಂಚಿತವಾಗಿರುವ ಈ ಜೀವವು ಅಲ್ಪಜ್ಞ ಮತ್ತು ಪ್ರಕೃತಿಯ ಅಂಕಿತದಲ್ಲಿದ್ದುಕೊಂಡು ತನ್ನ ಕರ್ಮಗಳ ಮೂಲಕ ಬಂಧನದಲ್ಲಿ ಸಿಲುಕಿಕೊಳ್ಳುತ್ತದೆ. ಈ ಎಲ್ಲ ವಿಶ್ಲೇಷಣೆಯ ಸಾರವೇನೆಂದರೆ, ಕೃಷ್ಣನು ಈಶ್ವರೀ ಆತ್ಮನಾಗಿ ಜನ್ಮ ತಾಳಿ ಬಂದು, ಅವತಾರ ಪುರುಷನಾಗಿ ಮಾನವೀಯ ಪ್ರಕೃತಿಯಲ್ಲಿ ದಿವ್ಯ ಈಶ್ವರೀ ಅವಸ್ಥೆ ಹೇಗಿರುತ್ತದೆ ಎನ್ನುವುದನ್ನು ಪ್ರತ್ಯಕ್ಷ ಪ್ರಕಟಿಸಿ ತೋರಿಸುತ್ತಾನೆ ಮತ್ತು ಅರ್ಜುನನು ಈ ಅವಸ್ಥೆಯನ್ನು ತಲುಪಬೇಕೆಂಬ ಆದೇಶವನ್ನು ನೀಡುತ್ತಾನೆ. ಸಾಮಾನ್ಯ ಮಾನವನ ಅಜ್ಞಾನ ಹಾಗೂ ಮರ್ಯಾದಾಬದ್ಧ ವ್ಯವಹಾರವನ್ನು ದಾಟಿ ಮೇಲೇರಿದಾಗಲೇ ಅರ್ಜುನನಿಗೆ ಆ ದಿವ್ಯ ಈಶ್ವರೀ ಸ್ಥಿತಿ ಪ್ರಾಪ್ತವಾಗಬಲ್ಲದು. ಅಂದರೆ, ಅವತಾರ. 'ಅವತಾರ' ಎಂದರೆ ಇಳಿಯುವುದು, ಮಾನವೀಯ ವಿಶ್ವ ಅಥವಾ ಅವಸ್ಥೆ ಹಾಗೂ ದೈವೀ (ಈಶ್ವರೀ) ವಿಶ್ವ ಅಥವಾ ದೈವೀ ಅವಸ್ಥೆ ಇವುಗಳನ್ನು ಬೇರೆ ಬೇರೆ ಮಾಡಿ ವಿಭಜಿಸುವ ರೇಖೆಯನ್ನು ಉಲ್ಲಂಘಿಸಿ ಈಶ್ವರನು ಕೆಳಗಿಳಿದು ಬರುವುದನ್ನೇ ಅವತಾರ ಎಂದು ಕರೆಯುವುರು. ಮೇಲಿನಿಂದ ಕೆಳಗಿಳಿದು ಬಂದು ಈಶ್ವರನು ತಾನಾಗಿ ಪ್ರಕಟ ಮಾಡಿದ ದಿವ್ಯ ಸ್ಥಿತಿ ಆಗಿದ್ದು, ನಾವು ಕೆಳಗಿದ್ದುಕೊಂಡು ಮೇಲಕ್ಕೆ ಏರುತ್ತ ಈ ಸ್ಥಿತಿಯನ್ನು ಪಡೆಯಲೆತ್ನಿಸಬೇಕೆಂಬುದೇ ಇದರ ಬೋಧನೆಯಾಗಿದೆ. ಸ್ವತಃ ಈಶ್ವರನು ಕೆಳಗಿಳಿದು ಬಂದು ಮಾನವನ ರೂಪದಲ್ಲಿ ಜನ್ಮ ತಾಳುವುದನ್ನೇ ಅವತಾರ ಎಂದು ಹೇಳುವುದು. ಮರ್ತ್ಯ ಮಾನವರಾದ ನಾವು ಆ ದಿವ್ಯ ಜನ್ಮದ ದಿವ್ಯ ಸ್ಥಿತಿಯನ್ನು ತಲುಪಬೇಕೆಂಬುದೇ ಅವತಾರದ ಉದ್ದೇಶವಾಗಿದೆ. ಅವತಾರವು ಇದರ ಆಕರ್ಷಕ ದಿವ್ಯ ಉದಾಹರಣೆಯಾಗಿದೆ, ಈಶ್ವರನು ಸ್ವತಃ ತಾನೇ ಮಾನವನ ಅಸ್ತಿತ್ವದ ಪೂರ್ಣತಾ ಸಂಪನ್ನ ಮಾದರಿಯಾಗಿ ಮಾನವನಿದಿರು ನಿಲ್ಲುವ ಸ್ಥಿತಿಯಾಗಿದೆ.

(ಸಶೇಷ)

## ಶ್ರೀ ಅರವಿಂದರ
## ‘ದೇವನಾ ಪರಿಶ್ರಮ’

**– ಅನುಸ್ಪಂದ: ಪುಟ್ಟು ಕುಲಕರ್ಣಿ**

“ಎಂದಿಗೂ ಹತಾಶಗೊಳ್ಳಬೇಡ” ಎನ್ನುವ ಭರವಸೆ ತುಂಬಿದ ಹಾಗೂ ಸದಾ ಸುರಕ್ಷೆಯ ಕವಚವನ್ನು ಒದಗಿಸುವ ಶ್ರೀ ಅರವಿಂದರ ಅಭಿವ್ಯಕ್ತಿಯಲ್ಲಿ, ಭಾರತದ ಭವ್ಯ ಪರಂಪರೆಯು ಮತ್ತು ಉಜ್ಜ್ವಲೋಜ್ವಲವಾಗಿ ಬೆಳಗುವದರ ಕುರಿತು ಖಚಿತ ಭವಿಷ್ಯವನ್ನು ತಮ್ಮ ಪ್ರಾರಂಭದ ಕವನವೊಂದರಲ್ಲಿ ‘ದೇವನಾ ಪರಿಶ್ರಮ’ (ಸಂಪುಟ 2 ಪುಟ 538) ದ್ರಷ್ಟಾರ ವಾಣಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಸ್ವತಃ ದೇವನೂ ಸಹಿತ ಇದಕ್ಕಾಗಿ ಪರಿಶ್ರಮಿಸುತ್ತಿದ್ದಾನೆ ಎನ್ನುವದನ್ನು ಹೇಳುತ್ತ, ಈ ರೀತಿಯ ನವೀನ ಸೃಷ್ಟಿಯು ಇಲ್ಲಿ ನಿರ್ಮಾಣಗೊಳ್ಳುವದು ‘ನಿಯತಿಯ ಆಣತಿ’ಯಾಗಿದೆ ಎನ್ನುವದನ್ನೂ ಅಭಿವ್ಯಕ್ತಿಸಿದ್ದಾರೆ.

ರಜತ ಪವನದ ಸೂತ್ರಗಳಲ್ಲಿ ಈ ಅಭಿಲಾಷೆಯ ಕುರಿತು ಸ್ವಪ್ನಮಾಲೆಗಳನ್ನು ಹೆಣೆದು ನಿರ್ಮಿಸಿಕೊಂಡ ಈ ನಿರ್ಮಿತಿಯು ಆ ಸ್ವರ್ಣ ಮತ್ತು ಈ ನೀಲದ ಮಧ್ಯದಲ್ಲಿಯೇ ಪೋಣಿಸಲ್ಪಟ್ಟಿದೆ. ಇಲ್ಲಿ ಸ್ವರ್ಣವು ವ್ಯೋಮಸ್ಥಿತವಾಗಿರುವ ಪರಮ ದೇವನ ಕೃಪೆಯಾಗಿದ್ದು, ಈ ನೀಲವೆನ್ನುವದು ಮಾನವನ ಹೃದಯದಲ್ಲಿ ಸ್ಥಿತವಿರುವ ಅನಾಹತದ ವರ್ಣವಾಗಿದೆ. ಮಾನವನ ಹೃದಯ ಮತ್ತು ದೇವನ ಇಚ್ಛೆ ಎರಡೂ ಒಂದೇ ಶ್ರುತಿಯಲ್ಲಿ ಮಿಡಿದಾಗ, ಅಲ್ಲಿ ಸೃಷ್ಟಿಯಾಗುವದು ಭವ್ಯ ಹಾಗು ದಿವ್ಯತ್ವವೇ ಆಗಿರುತ್ತದೆ. ಈ ರೀತಿಯ ಕೋಮಲ ಸ್ವರೂಪದಲ್ಲಿ ಅವುಗಳನ್ನು ಆವರಣಗೊಳಿಸಿ, ಅಲ್ಲಿಯೇ ಪ್ರತಿಸ್ಥಾಪಿಸುತ್ತಾನೆ, ರತ್ನಖಚಿತದಲ್ಲಿ ಹೊಳೆಯುತ್ತಿರುವ ಸ್ವಪ್ನಗಳನ್ನು ನಾನು ಕಂಡಿರುವೆನಾದರೂ, ಅವೆಲ್ಲವೂ ನೀನೇ ನನಗಿತ್ತಿರುವ ಕೃಪೆಯಾಗಿವೆ ಎಂದು ನಮ್ರತೆಯಲ್ಲಿಯೇ ಸಮರ್ಪಣೆಯನ್ನು ತೋರುತ್ತಾರೆ. ಮೃಣ್ಮಯದ ಬದುಕನ್ನು ಮತ್ತು ಸ್ವರ್ಗದ ಸಂತೋಷವನ್ನು ಸಂಪರ್ಕಿಸಲು ಇಂದ್ರಚಾಪವೊಂದನ್ನು ರೂಪಿಸಿಕೊಳ್ಳಲೆಂದೇ ನನ್ನೆದೆಯು ಸದಾ ಮಿಡಿಯುತ್ತಿದೆ. ಈ ಮೂಲಕ ಬಾನು ಹಾಗು ಭುವಿಗೆ ಸದಾ ಸಂಪರ್ಕವೊಂದನ್ನು ರೂಪಿಸಿದಂತಾಗುತ್ತದೆ. ವಿರಾಟ್ ವಿಶ್ವದ ನಿಯತಿ ನಿಗದಿತ ಸೂತ್ರದ ತಾಳದಂತೆಯೇ ಈ ಕ್ಷೀಣವಾಗಿರುವ ಗ್ರಹದಲ್ಲಿ– ಭುವಿಯಲ್ಲಿ – ಈ ಸ್ವಪ್ನವನ್ನು ಬಿತ್ತುತ್ತ, ಅದು ಅಂಕುರಗೊಂಡು, ಅನಂತತೆಯ ಆ ಚಿತ್ತವೃತ್ತಿಗಳೂ ಇಲ್ಲಿ ಸದಾ ಸ್ಪಂದಗೊಳ್ಳುವಂತೆ ರೂಪಿಸಬೇಕಾಗಿದೆ.

ಆದರೆ, ಈ ರೀತಿಯ ಉದಾತ್ತವಾಗಿರುವ ನಮ್ಮ ಸ್ವರ್ಗಗಳು ನಮ್ಮಿಂದ ದೂರ ದೂರ ದೂರದಲ್ಲಿವೆ; ಪರಿಶುಭ್ರತೆಯ ಪರಮೋಚ್ಚ ಹಂತದಲ್ಲಿವೆ. ಅವುಗಳ ಎಡೆಗೆ ನಾವೀಗ ಸಾಗಬೇಕಾಗಿದೆ. ಈ ಪಾರಲೌಕಿಕದ ಕೃಪಾ ಕೊಡುಗೆಯಲ್ಲಿ ಭಂಗುರತೆ ಎನ್ನುವದು ಇರುವದಿಲ್ಲ. ಅಲ್ಲಿರುವ ಆ ವೈಭವದ ಭರತದ ಜೊತೆಗೆ, ಆ ತೇಜತ್ವದ ಜೊತೆಗೆ ನಮ್ಮ ನೆರಲೂ ಸಹಿತ ನಿಲ್ಲಲು ವಿಫಲವಾಗುತ್ತದೆ. ಅದರ ಮೂಲದ ತಲಕ್ಕೆ ತಲುಪಲೆನೆ ಇನ್ನೂ ನಾವು ಸಫಲತೆಯನ್ನು ಸಾಧಿಸಲು ವಿಫಲರಾಗಿದ್ದೇವೆ. ಮಾನವನ ಸೀಮಿತ ತನದ ಹಾಗೂ ಅವನ ಈ ಕ್ಷೀಣ ಸ್ಥಿತಿಯನ್ನು ಅರಿತುಕೊಂಡ 'ಆ ದೇವನು' ತನ್ನದೇ ಸ್ವರ್ಗಗಳನ್ನು ಇಲ್ಲಿಗೆ ಅವತರಣಗೊಳಿಸಿ ತರುತ್ತಾನೆ. ಈ ಮೃಣ್ಮಯದ ಬದುಕಿಗೆ ತಾನೇ ತಾನಾಗಿ ಸದಾ ರಕ್ಷೆಯ ಆವರಣವಾಗುವಂತೆಯೇ ರೂಪುಗೊಳಿಸುತ್ತಾನೆ; ರೂಪುಗೊಳ್ಳುತ್ತಾನೆ. ಈ ಮೂಲಕ ಭೂ–ಬದುಕಿನ, ಮಾನವನ ಎಲ್ಲ ಕಷ್ಟಗಳನ್ನೂ ತಾನು ಧರಿಸಿಕೊಂಡು, ಅವುಗಳಿಗೆ ಸೂಕ್ತ ಪರಿಹಾರ ಮತ್ತು ಶಾಂತಿಯನ್ನು ಒದಗಿಸುತ್ತಾ, ಈ ಶೋಕ ತುಂಬಿರುವ ಪಥದಲ್ಲಿ 'ತೋಷದುಂಬಿದ ಜೀವನ'ವನ್ನು ತುಂಬಿಸುತ್ತ ಬರುತ್ತಾನೆ. ಆದರೆ ಇಲ್ಲಿರುವ ಮಾನವನ ಗತಿ–ಪ್ರಗತಿಯಲ್ಲಿ ಆಗಿರುವ ವಿಚಲನೆಯನ್ನು ಕಂಡ ದೇವನೂ ಸಹಿತ ಇಲ್ಲಿಗೆ 'ಇಳಿದು ಬಂದ' ಮೇಲೆ, ಇಲ್ಲಿನ ಸ್ಥಿತಿಯನ್ನು ಕಂಡು ಕ್ಷಣಕಾಲ ವಿವಶವಾಗುತ್ತಾನೆ. ಅವನೂ ಸಹಿತ ಈ ಮೃಣ್ಮಯದ ಗತಿಗೆ ಸಿಲುಕಿ ಪತನಗೊಂಡಂತಾಗಿದ್ದಾನೆ.

ಮಾನವ ಕುಲವು ಅನಭಿಜ್ಞತೆಯಲ್ಲಿಯೇ ಸಿಲುಕಿಕೊಂಡು, ಸದಾ ಪರಿಶ್ರಮಿಸುತ್ತಲೇ, ಪ್ರಗತಿ ಹೊಂದಿದ್ದೇನೆ ಎಂದು ಭಾವಿಸುತ್ತಲೇ, ತನ್ನ ಅನುಭವಗಳನ್ನು ತಿರುಚು ತಿರುಚುತ್ತಲೇ, ಮತ್ತೆ ಜನನ–ಮರಣಗಳ ಸುಳಿಗೆ ಸಿಲುಕಿ ಅಲ್ಲಿಯೇ ಪರಿತಾಪ ಪಡಬೇಕಾಗಿದೆ. ಇಂತಹ ವಿಪರೀತ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದರೂ, ಅಲ್ಲಿಯೇ ಪರಿಹಾರದ ಪಥವೂ ಇರುತ್ತದೆ. ಆ ಆಳದಲ್ಲಿಯೇ ಮತ್ತೊ ಖನನದಲ್ಲಿ ತೊಡಗಿಕೊಳ್ಳುವದರಿಂದಾಗಿ, ಅಲ್ಲಿ ಉತ್ಪತ್ತಿಯಾಗುತ್ತಿರುವ ಧೂಳು–ಕತ್ತಲೆಯ ಜೊತೆಗೆ ಮಲಿನತೆಯೇ ತುಂಬಿರುವ ಕೆಸರಿನಲ್ಲಿಯೇ ಸುದೀರ್ಘವಾಗಿ ಸಾಗಬೇಕಾಗಿದೆ.

ಇಂತಹ ವಿಷಣ್ಣತೆಯ ಪರಮಾವಧಿಯಲ್ಲಿಯೇ, ಇಲ್ಲಿಂದ ಮುಕ್ತಿಗೊಳ್ಳುವ ಸಲುವಾಗಿ ಇರುವ ಅಭೀಪ್ಸೆಯಿಂದಾಗಿ, ಆ ಊರ್ಧ್ವದಲ್ಲಿರುವ ಸ್ವರ್ಣ–ಸಲಿಲದಾ ನಾದಮಯ ಗಾನಕ್ಕಾಗಿ ಆಧಾರವೊಂದನ್ನು ಅರಸಿಕೊಳ್ಳುತ್ತೇನೆ. ಆ ಚಿರಂತನದ, ಆ ನಿತ್ಯತ್ವದ ಅಗ್ನಿಯು ಶಾಶ್ವವತವಾಗಿ 'ಇಲ್ಲಿಯೂ' ನೆಲಸಲೆಂದು, ಅದಕ್ಕಾಗಿ

ಚಿರನೆಲೆಯನೊಂದನ್ನು ಅರಸುತ್ತೇನೆ. ಈ ಜಂಜಡದ ಜಡದ ತಮಸ್ಸಿನಲ್ಲಿ ಬಳಲುತ್ತಾ ಬಳಲುತ್ತಾ ಇದ್ದರೂ ನಾನು ಸದಾ ಬೆಳಕಿಗಾಗಿ ಪರಿಶ್ರಮಿಸುತ್ತಿರುವೆ. ಆ ದಿವ್ಯಾಗ್ನಿಯನ್ನು ಈ ಮನುಜನೆದೆಯಲ್ಲಿಯೂ ಸ್ಥಾಪಿಸಲು ಮತ್ತು ಅದು ನಿತ್ಯತ್ವದಲ್ಲಿ ತೇಜವಾಗಿಯೇ ಇರಲು ಅಭೀಪ್ಸೆ ಹೊಂದಿರುವೆ. ಆದರೆ ಇದನ್ನರಿಯದ ಮನುಕುಲವು ಹಗೆಯ ದ್ವೇಷದೊಳಗೆ ಸಿಲುಕಿಕೊಂಡು, ನರಕವನ್ನೇ ಸೃಷ್ಟಿಸಿಕೊಂಡು ಬಳಲುತ್ತಿವೆ. ಈ ಜಗತ್ತು ಸೃಷ್ಟಿಯಾದಾಗಿನಿಂದಲೂ ಇವುಗಳೇಕೆ ಈ ರೀತಿಯಲ್ಲಿ ಇವೆ? ಇವೂ ಸಹಿತ ನನ್ನ ಕೊಡುಗೆಗಳೇ ಎನಿಸುತ್ತಿದೆ. ಇದಕ್ಕೆ ಕಾರಣವನ್ನರಸಿದಾಗ ಗೊತ್ತಾದದ್ದು, ಮಾನವನ ಮನಸ್ಸು ಅವನದೇ ಆಗಿರುವ ವನ್ಯ–ಜೀವಾತ್ಮದ (ಪಶು ಸಹಜ) ನಕಲಿನಲ್ಲಿಯೇ ಇರಲು ಸದಾ ಯತ್ನಿಸುತ್ತಿರುವದೇ ಆಗಿದೆ. ಮಾನವನು ತನ್ನ ವಾಂಛೆಗಳ ವಿಜಯ ಮಹೋತ್ಸವಕ್ಕಾಗಿ ಸದಾ ಆಶಿಸುತ್ತ–ಹಪಹಪಿಸುತ್ತ, ಅದಕ್ಕಾಗಿ ತನ್ನ ಅಂತರಂಗದಲ್ಲಿಯೇ ಬೇತಾಳನನ್ನೂ ಆಹ್ವಾನಿಸಿಕೊಂಡು ಬದುಕುತ್ತಿದ್ದಾನೆ. ಅದೂ ಕ್ರೂರ ಬೇತಾಳವನ್ನೇ ಅಹ್ವಾನಿಸಿಕೊಂಡಿದ್ದಾನೆ. ಹೀಗಾಗಿ ದುಃಖಗಳು, ಪಾಪಗಳು, ಕ್ರೂರ ಕರ್ಮಗಳಲ್ಲಿಯೇ ಅನುರಕ್ತವಾಗಿ ಈ ಭವದ ನಿವಾಸಿಯಾಗಿದ್ದಾನೆ.

ಅವತರಣಗೊಂಡ ಈ ಸ್ವರ್ಗದ ದಿವ್ಯ ಜ್ವಾಲೆಯಿಂದ, ಆ ಕ್ರೂರ ಬೇತಾಳ ಮತ್ತು ಧೂಳಿಯೂ ಸಹಿತ ಥರಗುಟ್ಟಿ ಹಿಂದೆ ಸರಿಯತ್ತಿವೆ. ಅವುಗಳು ಮರೆಯಾದ ಕೂಡಲೇ ಅಲ್ಲಿ ಸರ್ವ ವಿಷಯಗಳಿಗೂ ಆನಂದಪೂರ್ಣವಾದ ಪಾವಿತ್ರ ಪರಮ ತೋಷವು ಪ್ರಾಪ್ತಿಯಾಗುತ್ತದೆ. ಆದರೆ ಮೃಣ್ಮಯದ ಅಂಶದಿಂದಾಗಿ ರೂಪಣೆಗೊಳ್ಳುವ ರಾಗಗಳ ಮತ್ತು ಸುಖಕ್ಕಾಗಿ ಅನಿವಾರ್ಯವಾಗಿರುವ ವೇದನೆಯನ್ನೂ ಹೊಂದ–ಬೇಕಾಗುತ್ತದೆ. ಜೀವನ ನಾಟಕದ ಅಂಕ ಅಂಕಗಳಲ್ಲಿ ಈ ರೀತಿಯ ಗತಿಯಲ್ಲಿಯೇ ಸಹನೆಯನ್ನೂ ಗಳಿಸಿಕೊಳ್ಳಬೇಕಾಗುತ್ತದೆ. ಮನುಕುಲವನ್ನು ಸದಾ ಆವರಿಸಿಕೊಂಡು ತನ್ನಲ್ಲಿಯೇ ಅಂತರ್ಗತಗೊಳಿಸಿಕೊಳ್ಳಲು ಅಂಧಕಾರವು ಸದಾ ದಟ್ಟೈಸಿಕೊಂಡೇ ಇರುತ್ತದೆ, ವ್ಯಾಪ್ತವಾಗಿಯೂ ಇರುತ್ತದೆ. ಆದರೆ ಅಲ್ಲಿ ಪ್ರತ್ಯಕ್ಷಗೊಂಡಿರುವ ಆ 'ದಿವ್ಯ ಜ್ಯೋತಿ'ಗೆ ಇದೀಗ ಇವರೆಲ್ಲರೂ ಆಹ್ವಾನವನ್ನು ನೀಡಿ ಸ್ವಾಗತಿಸಲು ತವಕದಲ್ಲಿದ್ದಾರೆ. ಆದರೆ ಅರೆಯರಿವಿನ ಸ್ಥಿತಿಯಲ್ಲಿ ಸಿಲುಕಿಕೊಂಡು, ಅದಕ್ಕೇ ದಕ್ಕುವ ಅರೆಬರೆಯ ಹೊಳಪಿಗೆ ಬೆರಗಾಗಿ, ಪಥದಲ್ಲಿ ಮುಗ್ಗರಿಸುವದೇ ಸಾಮಾನ್ಯವಾಗಿರುತ್ತದೆ. ಇಂತಹ ಮುಗ್ಗರಿಸುವಿಕೆಯು ಖಿನ್ನತೆಯನ್ನು ಮತ್ತು ಹತಾಶೆಯನ್ನು ತರುತ್ತದೆ. ಆದರೆ ಆ ಅಮರತ್ವದ ನೆಲೆಯಿಂದ ಆಗಮಿಸಿರುವ ಆ ಪರಮಾತ್ಮನು ತನ್ನದೇ ಏಕತ್ವಗೊಳಿಸಲೆಂದು ಎರಕ ಹೊಯ್ಯುತ್ತಿರುತ್ತಾನೆ. ಈ ಎರಕವು ಸಂಪೂರ್ಣವಾಗಿ ಮಾನವನನ್ನು ದೇವತ್ವದ ಹಂತಕ್ಕೇ ಏರಿಸುವ ಭಾವದಲ್ಲಿಯೇ ಇರುತ್ತದೆ.

ಅಲ್ಪ ತೃಪ್ತಿಯಲ್ಲಿಯೇ ಪರಮ ಸಂತೋಷ ಕಾಣುವ ಮನುಜ ತನ್ನ ಆಶೆಯ ದೀವಟಿಗೆ ಅತ್ಯಂತ ಕ್ಷೀಣವಾಗಿದ್ದರೂ ಸಹಿತ ಅದನ್ನೇ ಬೆಳಗಿಸಲು, ಬೆಳಗಿಸಿದ್ದೇನೆಂದು ಪರಿಭಾವಿಸಿಕೊಂಡು ಬೀಗುತ್ತಾನೆ. ಅದು ಮೊದಮೊದಲಿನಲ್ಲಿ ಮುಂಚೂಣಿಯಲ್ಲಿ ಇದ್ದರೂ ವಿಫಲತೆಯ ಅಂಚನ್ನೇ ತೋರುತ್ತದೆ. ಬ್ರಹ್ಮಾಂಡವನ್ನೇ ಆಧರಿಸಿಕೊಂಡಿರುವ 'ಋತ'ದ ಅಂಶವೊಂದು ಮಾತ್ರ ಮಾನವನ ಸುವ್ಯಾಪ್ತ ಇಚ್ಛೆಯಾಗುತ್ತಿದ್ದಲ್ಲಿ, ಆಗ ಈ ತೀರ್ಥಯಾತ್ರೆಯಲ್ಲಿ ಇದುವು ತಾತ್ಕಾಲಿಕ ತಂಗುದಾಣ(ಧರ್ಮಛತ್ರ)ವಾಗಿ ಇರುತ್ತದೆ. ಮಾನವನ ಸೀಮಿತ ತನದಿಂದಾಗಿ, ಸತ್ಯದ ಮೂಲವೇ ಋತ ಎನ್ನುವದನ್ನು ಅಲ್ಲಗಳೆಯುತ್ತಾನೆ. ಸರ್ವ ಕಾಂತಿಗಳ–ಜ್ಯೋತಿಗಳ ಪ್ರಕಾಶದ ಮೂಲವೇ ಆ ದಿವ್ಯ–ಪ್ರಕಾಶ ಎನ್ನುವದನ್ನೂ ಕಡೆಗಣಿಸಿಕೊಂಡು ಬಾಳಲೆಳಸುತ್ತಾನೆ. ಇದುವರೆಗೂ ಅನಭಿಜ್ಞವಾಗಿರುವ ದೇವ ಗಣವನ್ನು ಆಕ್ರಂದದ ಮೂಲಕ ಆರಾಧಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ರಕ್ಕಸನ ಆಯ್ಕೆಯನ್ನು ಮಾಡಿಕೊಳ್ಳುವ ಸ್ಥಿತಿಗೆ ತಲುಪುತ್ತಾನೆ.

ಈ ರೀತಿಯ ಪ್ರಯತ್ನದಲ್ಲಿ ಲಭ್ಯಗೊಳ್ಳುವದೆಲ್ಲವೂ ಖಚಿತವಾಗಿಯೂ ಮತ್ತೆ ಮತ್ತೆ ಕೋರಿ ಪಡೆಯುವದೇ ಆಗಿರುತ್ತದೆ. ಅವಿರತದ ಪ್ರಯತ್ನಕ್ಕೆ ತಕ್ಕ ಫಲವಿರುತ್ತದೆ. ಇಲ್ಲಿ ಎದುರಾಗುವ ಎಲ್ಲ ಶತ್ರು ಭಾವಗಳನ್ನೂ ತುಂಡರಿಸಿಕೊಂಡು, ಅದಕ್ಕಾಗಿ ಇರುವ ಹೋರಾಟವೂ ಸಹಿತ ಸಮರ ಸ್ವರೂಪದ್ದೇ ಆಗಿರುತ್ತದೆ. ಪದೇ ಪದೇ ಇಂತಹ ಹೋರಾಟಗಳೂ ಇರುತ್ತವೆ. ಬಹುತೇಕವಾಗಿ ನಿಷ್ಫಲದ ಜೀವ–ಜೀವಗಳ ಚಿತ್ತದ ಪಥವೇ ಇಲ್ಲಿ ಮುಖ್ಯವಾಗಿರುತ್ತದೆ. ಈ ಸಂಗ್ರಾಮದಲ್ಲಿ ನನಗೆ ಸಾವಿರಕ್ಕೂ ಮಿಕ್ಕಿ ಗಾಯಗಳಾಗಿವೆ. ಅದರಲ್ಲೂ ದೈತ್ಯರದೇ ರಾಜಗಣದ ಮಂಡಳಿಯೇ ಆಕ್ರಮಣದ ಮುಂದಾಳತ್ವ ವಹಿಸಿ ನನಗೆ ಎದುರಾಗಿದೆ. ಇಂತಹ ಯಾವುದೇ ಅಡೆ–ತಡೆಗಳು, ಆಕ್ರಮಣಗಳು ಬಂದರೂ ನನ್ನ ಕಾರ್ಯವು ವಿರಾಮವನ್ನು ಬಯಸುವದಿಲ್ಲ. ಶಾಶ್ವತದ ಇಚ್ಛೆಯು ಈ ರೀತಿಯಲ್ಲಿ ಉಳಿಯ ಪೆಟ್ಟನ್ನಿತ್ತು ನನ್ನ ಚಿತ್ತವನ್ನು ಪ್ರತಿಮೆಯಾಗಿಸುತ್ತಿದೆ.

ನನ್ನ ಈ ಸಹನೆಯನ್ನು ಅಣಕು ಮಾಡುತ್ತಿರುವ ದಾನವರ ಜೊತೆ ಜೊತೆಗೆ ಮಾನವರೂ ಇರುವರು! ಕೇವಲ ಭ್ರಮಾಪೂರ್ಣ ಕಲ್ಪನೆಯ ಭಯಾನಕ ಮೂರ್ತಿಗಳಂತೆ ಅಭಿಲಾಷೆಗಳನ್ನು ಪರಿವರ್ತಿಸುವ ಹುನ್ನಾರಿನಲ್ಲಿದ್ದಾರೆ. ಸದ್ಯ ಇದರ ಉಗ್ರ ಜ್ವಾಲೆಗಳು ಇಡಿ ಗಗನವನ್ನೇ ಆವರಿಸಿಕೊಂಡಿವೆ. ಅತ್ಯುಗ್ರವಾದ ಜ್ವಾಲೆಯು ಗುರುತು ಪತನದ ಸಂಕೇತವಾಗಿ ನೆಲೆಗೊಳ್ಳಲೆಳಸುತ್ತಿದೆ. ನಿರ್ಮಾಣಗೊಳ್ಳುವ ಕಾರ್ಯಗಳೆಲ್ಲವೂ ಮೃತಪ್ರಾಯವಾಗಿರಬೇಕೆಂಬುದೆ ಅವರ ಹಂಬಲವಾಗಿದೆ.

ಆದರೆ ಇದನ್ನು ಸಂಪೂರ್ಣವಾಗಿ ತಡೆದು, ನಿಯಂತ್ರಿಸಿ ಇಲ್ಲಿ ಸ್ವರ್ಗೀಯ ನೆಲೆಯನ್ನು ಸ್ಥಾಪಿಸುವ ಸಲುವಾಗಿ ಸೂಕ್ತಿಗಳನ್ನು ರೂಪಿಸಿದ್ದೀಯ. ಆನಂದದ ಹಾಗೂ ಸ್ವರ್ಣಮಯ ಧಾಮವನ್ನು ಸೃಷ್ಟಿ ಮಾಡಿದ್ದೀಯ. ಇದೆಲ್ಲವನ್ನೂ ನಮಗಾಗಿ ನಿರ್ಮಿಸಿರುವೆ, ಆದರೆ ನಾವು ಇದನ್ನು ಗಮನಿಸದೇ ಪರಿತ್ಯಕ್ತರಂತೆ ಸಾಗುತ್ತಿದ್ದೇವೆ. ಚೇತನಾರಹಿತರಾಗಿ ಅದರದೇ ಸಾಗರದಲ್ಲಿ ಸಿಲುಕಿ ಮತ್ತೆ ಜೀವನದ ಗುಮ್ಮಟದ ಒಳಗೆ ಸಿಲುಕಿಕೊಂಡಿದ್ದೇವೆ. ಹೀಗಾಗಿ ನಮ್ಮದೇ ಆದ, ನಮಗಿರುವ ಈ ಭುವಿಯ ಬರಿ ತಮವೇ ತುಂಬಿದ ಕ್ಷೇತ್ರವನ್ನಾಗಿಸಿಕೊಂಡಿದ್ದೇವೆ. ನಮ್ಮದೇ ಕ್ಷೀಣ ಬಯಕೆಗಳ, ಅಲ್ಪ ತೃಪ್ತಿಗಳ ಬೇಗೆ ಸಿಲುಕಿ ಸಾಗುತ್ತಿದ್ದೇವೆ. ಇಂತಹ ವಿಷಣ್ಣ ಸ್ಥಿತಿಯಲ್ಲಿ ಆ ಗೂಢ ಬೆಳಕಿನ ಕಿರು ತೊರೆಯನ್ನಾದರೂ ಪಡೆದುಕೊಳ್ಳಲು ಸಾಧ್ಯವಾಗುತ್ತದೆ? ಅಥವಾ ಈ ರೀತಿಯಲ್ಲಿ ಪರೀಕ್ಷೆಗೊಳಪಡುತ್ತಲೇ ಸಾಗುವದೇ ದೇವನ ಇಚ್ಛೆಯೂ ಆಗಿದೆಯಾ? ಅಥವಾ ದೇವನ ಸಹನೆಯಾಗಿದೆಯಾ?

ಈ ಎಲ್ಲ ಗೊಂದಲಗಳನ್ನೂ ತೊಡೆದು ಹಾಕಲು, ಕತ್ತರಿಸಲೆಂದು ಸಿದ್ಧವಾಗಿ ಆಗಮಿಸಬೇಕಿದೆ. ಆ ರೀತಿಯ ವಿಚಲನದ ಕ್ರಮವನ್ನು ಖಚಿತವಾಗಿಯೂ ತಡೆಯಬೇಕಿದೆ. ಆಗ ಮಾತ್ರವೇ ನಮ್ಮ ಹೃದಯಗಳು ಮುಕ್ತತ್ವವನ್ನು ಪಡೆದುಕೊಳ್ಳಬಲ್ಲವು. ಆ ಹೊಣೆಗಾರಿಕೆಯಿಂದ, ಜೊತೆಗೆ ಅವನ ಭೀಮಶಕ್ತಿಯ ವೈಭವವನ್ನು ಆಹ್ವಾನಿಸುತ್ತಾ, ವ್ಯಾಪ್ತವೇ ಸ್ವರೂಪವಾಗಿರುವ ಶುಭ್ರ ಶಾಂತಿಯನ್ನು ನೆಲೆಗೊಳಿಸುವ ಸಲುವಾಗಿ ಕರೆಯನಿಡುವಾ.

ಜನನ–ಮರಣಗಳ ವಶವರ್ತಿಯಾಗಿರುವ ನನ್ನ ಹೃದಯದಲ್ಲಿಯೇ ಈಗಿದೋ ದೇವನ ವಾಸವಿದೆ. ಇದು ನನಗಿರುವ ಅದೃಷ್ಟ ಮತ್ತು ದೋಷಗಳ ಮಧ್ಯೆ ಮಲ್ಲಯುದ್ಧದಲ್ಲಿಯೇ ಪಕ್ವಗೊಳ್ಳಬೇಕಿದೆ. ಸಾಗಬೇಕಿರುವ ಪಥವೂ ಸಹಿತ ಬರಿ ಜವುಳು, ಕೆಸರು ತುಂಬಿ ಹಾಳು ಬಿದ್ದ ಪಥಗಳಾಗಿವೆ. ಈ ಪಥದ ಮೂಲಕವೇ ನಾಮರಾಹಿತ್ಯದ ನಿರ್ಮಲವನ್ನು ಪಡೆದುಕೊಳ್ಳಬೇಕಾಗಿದೆ. ಅದಕ್ಕಾಗಿ ನನ್ನೊಳಗಿನಿಂದಲೇ ಅಂತರಾತ್ಮದ ಧ್ವನಿ ಅಬ್ಬರಿಸಿ, 'ನಡೆ, ನಡೆ, ಯಾರೂ ನಡೆಯದಾ ಪಥವನ್ನು ಅರಸಿ ಮುಂದೆ ಸಾಗು. ಮತ್ತೂ ಆಳದಾಳಕ್ಕೆ ಆಳದಾಳಕ್ಕೆ ಖನನ ಗೈಯುತ್ತಾ ಅಲ್ಲಿರುವ ಆ ಘನದ ತಲಾತಲದ ಹಂತವನ್ನು ತಲುಪು. ಅಲ್ಲಿರುವ ಆ ರೌದ್ರಪೂರ್ಣತೆಯ ವಾಸ್ತುಶಿಲೆಯನ್ನು ನೀನು ಸ್ಪರ್ಶಗೊಳ್ಳುವವರೆಗೆ ಮುಂದೆ ಸಾಗು. ಇಲ್ಲಿ ಯಾವುದೇ ಬೀಗ ಹಾಕಿದ, ಬಂಧನವನ್ನು ರೂಪಿಸುವ ಯಾವ ದ್ವಾರಗಳೂ ಇಲ್ಲಿ ಇಲ್ಲವೇ ಇಲ್ಲ. ಆ ದ್ವಾರಗಳು ಇದ್ದರೂ ಅವು ತಂತಾನೇ ತೆರೆದುಕೊಳ್ಳುವವರೆಗೂ ಮುಂದುವರೆ' ಎಂದು ಹೇಳುತ್ತಿದೆ.

ಆದರೆ ಒಂದು ಮಿಥ್ಯಾಭಿಮಾನವು ಈಗಾಗಲೇ ಬಿತ್ತಲ್ಪಟ್ಟಿದ್ದು, ಅದು ಸರ್ವ ವಸ್ತುಗಳ ಬೇರಿನಾಳ ಆಳದಲ್ಲಿಯೂ ಹುದುಗಿಕೊಂಡಿದೆ. ಇದು ಈಗ ಕಾಣುತ್ತಿದೆ. ಯಾಕೆ ಈ ರೀತಿಯಲ್ಲಿ ದೇವನ ಗೂಢ–ಪ್ರಶ್ನೆ ಇದೆ? ಏಕೆ ಈ ಸುಪ್ತಿ? ಮೇಲಾಗಿ ಇದಕ್ಕೆ ಧೂಸರದ ಸ್ಫಿಂಕ್ಸ ರಕ್ಷೆ ಕೂಡಾ! ಜೊತೆಗೆ ಆ ವ್ಯಾಲಸರ್ಪವೂ ತನ್ನ ಕ್ರೂರ ರೆಕ್ಕೆಗಳನ್ನು ಚಾಚಿ ರಕ್ಷೆಯನ್ನು ಒದಗಿಸುತ್ತಿದೆ?

ಈ ಎಲ್ಲ ಮಸುಮಸುಕು ಆವರಣಗಳು ವರ್ಣಮಯವಾಗಿದ್ದರೂ ನಾನೀಗ ಅವುಗಳನ್ನು ತೊರೆಯಲು ಶಕ್ತನಾಗಿದ್ದೇನೆ, ಜೀವ ಜೀವನದ ಅತೃಪ್ತತೆಯ ಉದಧಿಗಳನ್ನೇ ಯಶಸ್ವಿಯಾಗಿ ಈಜಿಕೊಂಡು ಮುನ್ನಡೆದಿದ್ದೇನೆ. ಆದರೂ ಈ ದುರ್ಗಮದ ಮಾರ್ಗದಲ್ಲಿ ಮೋಹದಲ್ಲಿಯೇ ಸಾಗಿ ತಲ್ಲೀನಗೊಂಡೆ, ಹೀಗಾಗಿ ಈ ಅಧೋಲೋಕದಾ ಬೆಡಗುಗಳಲ್ಲಿ ನಾನು ಬಲುಬೇಗ ಲೀನವಾಗುವಂತಾಯಿತು. ಹೀಗಾಗಿ ಈ ಜಡದ ಭುವಿಯ ಭೀತ ಹೃದಯದಲ್ಲಿ ನಾನು ಬಲದಲ್ಲಿ ನಿಂತು, ಅವಳ ಆ ಸ್ಥೂಲ–ತಮದ ಘಂಟಾನಾದವನ್ನು ಆಲಿಸಲು ಶಕ್ತನಾಗಿದ್ದೇನೆ. ಅವಳ ಯಾತನೆಯ ಮೂಲಗಳನ್ನು ಅವುಗಳ ಅಂಶಗಳನ್ನು ಕಾಣಲು ನಾನೀಗ ಸಮರ್ಥನಾಗಿದ್ದೇನೆ. ಸರ್ವಾಂತರಂಗದಲ್ಲಿಯೂ ನರಕ ಸೃಷ್ಟಿಸುತ್ತಿರುವ ಆ ಘೋರ ಆಂತರ್ಯದ ಹೇತುವನ್ನು ನಾನಿಲ್ಲಿ ಕಂಡುಕೊಂಡಿದ್ದೇನೆ. ಇವುಗಳ ಜೊತೆಗೆ ನನ್ನ ಊರ್ಧ್ವದಲ್ಲಿ ಆ ವ್ಯಾಲಸರ್ಪದ ಮರ್ಮರದ ಘೋರ ಅಪ್ರಲಾಪವನ್ನು ಕೇಳುತ್ತಿದ್ದೇನೆ. ಅದಕ್ಕೆ ತಾಳದಂತೆ ಆ ಭೂತ–ಬೇತಾಳ ನಿಶೆಯ ಧ್ವನಿಗಳೂ ಅಬ್ಬರಿಸುತ್ತಿವೆ, ತಾಪವನ್ನು ನೀಡುತ್ತಿವೆ.

ಇಂತಹ ಸ್ಥಿತಿಯಲ್ಲಿಯೇ ಚಿಂತನದಲ್ಲಿ ಉಗಮಗೊಂಡಿರುವ ಶೂನ್ಯವನ್ನು ನಾನೀಗ ಛಿದ್ರಗೊಳಿಸಿ, ಈ ತಳವಿರದ ಆಳದಲ್ಲಿಯೇ ನನ್ನನ್ನೂ ಇರಿಸಿಕೊಂಡಿರುವೆ. ಇದರಿಂದಾಗಿ ನನ್ನ ಪಾದಗಳು ಸದಾ ಹತಾಶೆಯ ಮೆಟ್ಟಲನ್ನೇ ಹತ್ತುವಂತಾಗಿದೆ. ಆದರೆ ಆ ನಿಸ್ಸೀಮ ಕವಚದಂತೆ ಸುರಕ್ಷೆಯನ್ನು ಒದಗಿಸುತ್ತಿರುವ ಆ ದೇವ ವೈಭವದ ದಿವ್ಯ ಭವ್ಯ ಜ್ವಾಲೆಗಳನ್ನು ನಾನೀಗ ಇಲ್ಲಿಗೆ ತರುತ್ತೇನೆ. ತನ್ಮೂಲಕ ಈ ಮನುಜ ತಲವನ್ನು ಅಂತರಂಗದಲ್ಲಿಯೂ ಸಹಿತ ನಿತ್ಯತ್ವದಲ್ಲಿ ಬೆಳಗುಗೊಳಿಸುವಂತೆ ಮಾಡುತ್ತೇನೆ.

ನನ್ನ ಈ ಭೌತಿಕ ಸ್ವರೂಪದಲ್ಲಿ ಯಾರು ನೆಲೆಗೊಳ್ಳಲು ಅವತರಣ–ಗೊಂಡಿದ್ದಾರೆಯೋ, ಅವರಿಂದಾಗಿಯೇ ನನ್ನನ್ನು ಸುತ್ತುವರೆದಿದ್ದ ಸರ್ವ ಗವಸುಗಳು ಕತ್ತರಿಸಿಕೊಂಡು ಕರಗಿ ಹೋಗುತ್ತಿವೆ. ನನ್ನಿಂದ ದೂರ ದೂರ ಸರಿಯುತ್ತಿವೆ. ಆಗ ನಾನು ಆ ಪರಮ ದೇವನಾ ವಾಣಿಯನ್ನು ಶ್ರುತಿಗೊಳ್ಳುವದರ

ಜೊತೆಗೆ ಅವನಿಚ್ಛೆಯನ್ನು ಪಡೆದುಕೊಳ್ಳುವೆ. ಎಂದಿಗೂ ಬಾಧೆಯನ್ನು ನೀಡದಂತಿರುವ ಸುವಿಶಾಲವಾಗಿರುವ ಆ ಭ್ರುಕುಟಿಯಲ್ಲಿ ನಾನೀಗ ಕಂಡುಕೊಳ್ಳುವೆ. ಈ ಅತಲಗಳಲೆಲ್ಲವೂ ತುಂತುಂಬುಕೊಂಡು, ಜೊತೆಗೆ ಆ ಊರ್ಧ್ವದೆಡೆಗೆ ಸೇತುಬಂಧವಾಗುತ್ತಿದೆ. ಆ ಸ್ವರ್ಣಧಾರೆಯದು ಅಭಿಷೇಕಗಾಗಿ ಸದಾ ಛಂದದಲ್ಲಿ ಧಾರೆಗೊಳ್ಳುತ್ತಿದೆ. ಆ ನೀಲಮಣಿಯ ಶಿಖರದಡಿಯಲ್ಲಿ ಇಂದ್ರಚಾಪವು ಸೃಷ್ಟಿಗೊಳ್ಳುತ್ತದೆ. ಅದರ ಜೊತೆಗೆ ಜ್ಯೋತಿ–ಮಿಂಚುಗಳು ರಚಿತಗೊಂಡು ದಂಡೆ ದಂಡೆಗಳು ಉಗಮಗೊಳ್ಳುತ್ತಿವೆ. ಇಂತಹ ಅತ್ಯಪೂರ್ವ ಸ್ಪಂದನದಿಂದಾಗಿ ಈ ಭುವಿಯ ಹೃದಯದಲ್ಲಿ ದಿವ್ಯಾಗ್ನಿಯು ಪ್ರಜ್ವಲನಗೊಳ್ಳುತ್ತಿದೆ, ಅಕ್ಷಯದ ಸೂರ್ಯನ ತೇಜಪುಂಜಗಳು ಉಜ್ಜ್ವಲನದಲ್ಲಿ ಶೋಭಾಯಮಾನಗೊಳ್ಳುತ್ತಿವೆ. ಸೃಷ್ಟಿ–ಸೀಮೆಗಳು ಅಚ್ಚರಿಯ ಸಂಧಿ ಸಂಧಿಗಳ ಮಾರ್ಗದಿಂದ ಅವತರಣಗೊಳ್ಳುವ ಚಿತ್ತವು ಛಂದದ ಉತ್ಕಂಠ ಬಂಧದಿಂದ ಸ್ಪಂದಿಸುತ್ತದೆ.

ಈಗಿದೋ ಇಲ್ಲಿ ಋತದ ಸಂಗಾತಿಯಾಗಿರುವ ಆನಂದಘನದ ವೈರಾಜ್ಯ ಸರಣಿ ಸರಣಿಗಳು ದಿವ್ಯ ಜ್ವಾಲೆಗಳ ಮಾಲೆಗಳನ್ನು ಸೃಷ್ಟಿಸಿ ಪ್ರತ್ಯಕ್ಷವಾಗುತ್ತಿವೆ. ಈ ತಲಕ್ಕೂ ಅರುಣವರ್ಣದಾ ಸೋಪಾನಗಳ ಪಥದ ಲೀಲೆಯನ್ನು ನಿರ್ಮಿಸುತ್ತಿದೆ. ನಂದನವನದ ದೇದೀಪ್ಯಮಾನವಾದ ಸಂಕುಲವು ಇದಾಗಿದ್ದು, ಇಲ್ಲಿಯೂ ಅವತಾರಗೊಳ್ಳುತ್ತಿದೆ. ತಮದ ಅಂತಿಮವನ್ನು ಅದರ ತುರೀಯವಾಸ್ಥೆಗೇರಿಸಿ ತೀವ್ರಗೊಳಿಸುತ್ತಿದೆ.

ಇದಕ್ಕೂ ಕೊಂಚ ಮಿಗಿಲಾದಂತೆ ಇರುವ ಜೀವನದ ಕಡೆಗೆ ನವ್ಯ ದ್ವಾರವೊಂದು ತೆರೆದುಕೊಳ್ಳುತ್ತಿದೆ. ಪರಿಪೂರ್ಣವಾಗಿಯೇ ಆಕೃತಿಗೊಂಡು ರಜತ ಕಾಂತಿಯಲ್ಲಿ ಸೃಜನಗೊಳ್ಳುತ್ತಿವೆ. ಊರ್ಧ್ವದೆಡೆಯಲ್ಲಿ ರಕ್ಷೆಯಾಗಿರುವ ಸ್ವರ್ಣಿಮಯದ ಆಚ್ಛಾದದ ಜೊತೆಗೆ ಮಿಲನಗೊಂಡು ವರ್ಣ ಮೇಳಗಳು ಈ ತಲದಲ್ಲಿಯೂ ಕಂಗೊಳಿಸುತ್ತವೆ. ಆ ಭಾಸುರದ ಲೋಕವು ಇಲ್ಲಿ ಅನಾವರಣಗೊಂಡು ಬೃಹತ್ ಲೋಕದ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಅವರ ಈ 'ವೈರಂಭಣದ ಪವನ'ದಲ್ಲಿಯೇ ನನ್ನ ಸ್ವಪ್ನಗಳನ್ನೂ ಇರಿಸುತ್ತಲೇ, ಆ ಸ್ವರ್ಣಿಮದ ಜೊತೆಗೆ ನೀಲಮಯದ ಅಂಬರವನ್ನು(ಗಗನವನ್ನು) ನಾನು ಪಡೆದುಕೊಳ್ಳುತ್ತೇನೆ. ಇಂತಹ ಸಾರೂಪ್ಯಲ್ಲಿಯೇ ಈ ಭುವಿಯ ಮೇಲೆ ಸಂಚನಗೊಳ್ಳಲು ಆಗಮಿಸಿದ ಅ ಪರಮ ಸತ್ಯವನ್ನು, ನಿತ್ಯ ಸ್ಪಂದನದಲ್ಲಿ ಈಗ ನೆಲೆಯಾಗಿಸಿಕೊಂಡು ಸಾಗುವೆ.

***

## ಎಂದಿಗೂ ಹತಾಶನಾಗದಿರು....

**– ಅನು: ಪುಟ್ಟು ಕುಲಕರ್ಣಿ**

ಜೊತೆಜೊತೆಗೆ ಋತವು ಪ್ರಕೃತಿಯಾ ಪದದ ಪ್ರತಿಹಂತ ಹಂತಕಾಗಿ
ಪಥದ ದರ್ಶನಕೆ ಮುಂಚೂಣಿಯಲ್ಲಿ ತಾ ಮಾರ್ಗದರ್ಶಿಯಾಗಿ
ಮತ್ತಿದೋ ಋತವು ಅನಿಮೇಷವಾಗಿ ಮುಗಿಲಗಲವಾಗಿ ತೆರೆದು
ಅವಳ ಆ ಆಳ–ಪಾತಾಳದೆಡೆಗೆ ಈ ದೃಷ್ಟಿಪಾತ ಸಂದು

ಲೋಕಾತಿಲೋಕದುದ್ಧಾರಕಾಗಿ ತಾ ಜನಿಸಿ ಬರುವನೀಗ
ಪ್ರಕೃತಿಗಧಿಪುರುಷ ತಾನಾಗಿ ನಿಲುವನೀ ಅತಿಮಾನವನು ಈಗ
ಅವನ ಸಾನಿಧ್ಯವದು ಈಗ ಜಡದ ಈ ಲೋಕವೆಲ್ಲವನ್ನು
ರೂಪಾನುಸ್ಪಂದದಲಿ ನಿತ್ಯ ದೇದೀಪ್ಯಗೊಳಿಸಿ ಅದನು.

ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ
ಋತದ ಮಹತಿಯಾ–ನಿಯತಿಯನು ಮೃಣ್ಮಯದ ಮೇಲೆ ನೆಲೆಸಿ;
ಮಾನವನು ಸಹಿತ ಪಡಮರಳಿಕೊಂಡ ಪರಮಾತ್ಮ–ಕರೆಯನರಸಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು ಪುಟ 708/9)**

ಸೀಮೆ–ಹಂತಗಳ ಚಿಂತನದಿ ಸಿಲುಕಿ ನಾ ಭ್ರಾಂತಗೊಳ್ಳದಂತೆ
ಕರಣ–ಸಾಮರ್ಥ್ಯಭಾವದಲಿ ನಲುಗಿ ವಿಸ್ಮರಣೆಗೊಳ್ಳದಂತೆ
ರೂಪಗಳ ಬಾಹುಗಳಲೀಗ ಬಳಲಿ ಅಳವಟ್ಟುಕೊಳ್ಳದಂತೆ
ಜೀವ–ಜಾಲದಲಿ ಭವದ ಬಂಧನಕೆ ನಾ ಬಂಧಗೊಳ್ಳದಂತೆ,

ನಿರಾಮಯದಲ್ಲಿ ನಿರಾಕಾರದಲಿ ನಿಶ್ಶೂನ್ಯಗೊಳ್ಳಲೆಂದು
ಅನಂತಾನಂತ ಸಚ್ಚಿದಾನಂದ ತೋಷದಲಿ ನಾನು ಮಿಂದು
ನಾಮರಾಹಿತ್ಯ ಅಜ್ಞಾತ–ಭಾವದನುಭಾವ ದಿವ್ಯ ಸೆಲೆಗೆ
ಅತಿ ಸನಿಹದಲ್ಲಿ ನಾನಿರುವೆನೀಗ ನಾಮರಾಹಿತ್ಯ ನೆಲೆಗೆ

ಅನಿರ್ವಚನೀಯ ತಾನೀಗ ನನ್ನ ಆತ್ಮದೊಡಮಿಡಿದು ಭಾಗಿ
ನನ್ನ ಗೃಹದಲ್ಲಿ ಸಾಂಗತ್ಯದಲ್ಲಿ ನಿತ್ಯ ಸಹಕರ್ಮಿಯಾಗಿ.

**(ಸಾವಿತ್ರಿ; ದಳ 10 ರೇಣು 4 ಪುಟ 649)**

ದೇವಗಣಗಳಾ ಸಂತಾಪದಲ್ಲಿ ಈ ಭೂಮಿ ಪೂರ್ಣಗೊಳಲು,
ಕಾಲದಂಕುಶದಿ ಅವರು ಮಾರ್ಗದಲಿ, ಕರ್ಮದಲಿ ಸತತವಿರಲು,
ಪರಿಶ್ರಮಿಸುತಿಹರು ಶಾಶ್ವತದ ಧ್ಯೇಯದಭಿಲಾಷೆಯಂತೆ ಸಲಲು
ಮೃಣ್ಮಯದ ರೂಹುಗಳಿಗೀಗ ದಿವ್ಯ–ಚಿನ್ಮಯದ ಜೀವ ಕೊಡಲು.

ಅವನ ಸಂಕಲ್ಪ ಖಚಿತದಲಿ ಕರ್ಮಕಿಳಿದಿರಲು ನಿಯತಿಯಾಗಿ
ಮನುಕುಲದ ವಕ್ಷಗಳಲೀಗ ಬೆಳಗಿ ತಾ ನಿತ್ಯ–ಸಾಕ್ಷಿಯಾಗಿ
ಘೂರ್ಣದಾವೃತ್ತ ಆಖಾತಗಳಲಿ ಪುಟಿಪುಟಿದು ಚಿಮ್ಮುವತ್ತ
ದುಷ್ಟಭಾವಗಳ ಕಟ್ಟಿ ಹಾಕಲೆನೆ ಸತತದಲು ಎದುರಿಸುತ್ತ

ಜಗದ ಅನಭಿಜ್ಞ ಅಂಧಕಾರಗಳ ಸಹವರ್ತಿಯಾಗಿ ಚಿತ್ತ
ಹಠಮಾರಿತನದ ಜಿದ್ದಿನಾ ಜಿದ್ದು ಸಾಮರ್ಥ್ಯ ಎದುರಿಸುತ್ತ,
ವಿಕೃತಗೊಂಡಿರುವ ಮಾನವನ ಇಚ್ಛೆಯಿಂದುದಿತ ಹುಸಿಯ ವೃತ್ತ
ಚಲನೆಯಲಿ ಎಡರು–ತೊಡರುಗಳ ಸರಿಸೆ ಸತತದಲಿ ಎದುರಿಸುತ್ತ

ಮಾನವನ ಮನದ ಆಂತರ್ಯದಲ್ಲಿ ಅತಿಗೂಢವಾಗಿ ಇರುವ
ಪತನ–ಪಾಪಗಳ ಖತಿಗೊಳಿಸಲೆನಲು ಸತತದಲು ಎದುರಿಸಿರುವ
ಅವನದೇ ಕುರುಡು– ಸ್ಪಂದದಲಿ–ಹೃದಯ ಬಾಧನೆಗೆ ಸಿಲುಕಿ ಅತ್ತ
ಕರಗಿ ಹೋಗದೊಲು, ಪರಿಪೂರ್ಣ ಪಥಕೆ ಪದಪದವ ತೋರಿ ಇತ್ತ

ಪ್ರಾಣವಿದು ಸತತ ದಂಡಪ್ರಾಪ್ತಿಯಲಿ ಯಾತನೆಯ ಬಲೆಯ ಒಳಗೆ
ಮಾನವನು ಮುಕ್ತ ತಾಣದಲಿ ತನ್ನ ಇರುವನ್ನು ಪಡೆವವವರೆಗೆ.

ಆಕಾರ ತರುವ ದೇವನಾವೇಗದಾ ಸ್ಪರ್ಶವಿದ್ದರೂನು
ಮರ್ತ್ಯ–ಮಾನವನ ನರ–ನಾಡಿಗಳಲಿ ಯಾತನೆಯದಮ್ಯ ತಾನು
ತೇಜಾಗ್ನಿಮಯದ ಚಿತ್ತವದು ವೃದ್ಧಿ ಒಳಗೊಳಗೆ ಸುಳಿದುದಿನ್ನು
ಮತ್ತಿದೋ ಬೃಹದ್ದೇಹದಲಿ ಅಧಿಕ ಅನುಭಾವ ಹ್ಲಾದ ತಾನು.

**(ಶ್ರೀ ಅರವಿಂದರ 'ಸಾವಿತ್ರಿ' ದಳ 6 ರೇಣು 2 ಪುಟ 444)**

## ಶ್ರೀ ಅರವಿಂದರ 'ಕರ್ಮಯೋಗಿನ್' ಪತ್ರಿಕೆಯ ಲೇಖನಗಳು

[ಶ್ರೀ ಅರವಿಂದರು ಬಂಗಾಲದಿಂದ ಪ್ರಕಾಶನಗೊಳ್ಳುತ್ತಿದ್ದ ಪತ್ರಿಕೆ 'ಕರ್ಮಯೋಗಿನ್'ದಲ್ಲಿ 1909–10 ರ ಅವಧಿಯಲ್ಲಿ ಬರೆದಿರುವ ಲೇಖನಗಳಲ್ಲಿ, ಅವರು ಅಧ್ಯಯನ ಮಾಡುತ್ತಿದ್ದ ಗ್ರಂಥಗಳು ಕುರಿತು ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಿಗೊಳಿಸಿದ್ದಾರೆ, ಅದರಲ್ಲೂ, ಭಾರತೀಯ ಚಿಂತನಾ ವಿಧಾನದ ಅತ್ಯಂತ ಪ್ರಮುಖ ವಿಷಯವಾಗಿರುವ ಶಾಕ್ತ ಮತ್ತು ತಂತ್ರ ಶಾಸ್ತ್ರದ ಕುರಿತು ಆಂಗ್ಲ ಲೇಖಕರಿಂದ ರೂಪಿತಗೊಂಡ ಗ್ರಂಥಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅದರಲ್ಲೂ ಪ್ರಸಿದ್ಧ ಲೇಖಕರಾಗಿರುವ ಅರ್ಥರ್ ಮತ್ತು ಎಲನ್ ಎವಿಲಾನ್ ಬರೆದಿರುವ 'ದೇವಿ ಸ್ತೋತ್ರ'ಗಳ ವಿಷಯವನ್ನು ಪರಿಶೀಲಿಸಿದ್ದಾರೆ. ಉಳಿದ ಪುಸ್ತಕಗಳ ಕುರಿತು ಬರೆದಿರುವ ಪರಿಶೀಲನೆಗಳು 1915–20 ಅವಧಿಯಲ್ಲಿ 'ಆರ್ಯ' ಪತ್ರಿಕೆಯಲ್ಲಿ ಲಿಖಿತಗೊಂಡಿವೆ. ಈ 'ಆರ್ಯ' ಪತ್ರಿಕೆಯು ತತ್ತ್ವ ಶಾಸ್ತ್ರದ ವಿಷಯದ ನಿಯತಕಾಲಿಕವಾಗಿತ್ತು. ಶ್ರೀ ಅರವಿಂದರು ಈ ಪತ್ರಿಕೆಯ ಸಂಪಾದಕರಾಗಿದ್ದರು. ಈ ಎಲ್ಲ ಲೇಖನಗಳನ್ನು ಶ್ರೀ ಅರವಿಂದರ ಸಮಗ್ರ ಸಂಪುಟ 1 ರಲ್ಲಿ ಸಂಪಾದಿಸಲಾಗಿದೆ. - (ಸಂ)]

### ಅರ್ಥರ್, ಎಲನ್ ಎವಿಲಾನ್‌ರ "ದೇವಿ ಸ್ತೋತ್ರಗಳು"

**– ಅನು: ಪುಟ್ಟು ಕುಲಕರ್ಣಿ**

ಈ ಗ್ರಂಥದ ಲೇಖನಗಳ ಸರಣಿಯನ್ನು ಬರೆದವರು ಅರ್ಥರ್ ಮತ್ತು ಎಲನ್ ಎವಿಲಾನ್. (ಜಾನ್ ವುಡ್‌ರೋಫ್ ಮತ್ತು ಅರ್ಥರ್ ಹಾಗು ಎವಿಲಾನ್ ಭಾರತೀಯ ತಂತ್ರ ಶಾಸ್ತ್ರದ ಅನೇಕ ಗ್ರಂಥಗಳನ್ನು ಆಂಗ್ಲ ಭಾಷೆಗೆ ರೂಪಾಂತರಣಗೊಳಿಸಿದ್ದಾರೆ.) ಈ **'ದೇವಿ ಸ್ತೋತ್ರ'ಗ**ಳಲ್ಲಿ ಅರ್ಥರ್ ಮತ್ತು ಎವಿಲಾನ್ ಅವರು **'ತಂತ್ರ ಶಾಸ್ತ್ರ'**ದ ಮೂಲ ಪಠ್ಯಗಳ ಶ್ಲೋಕಗಳನ್ನೂ ಕೊಡುವದರ ಜೊತೆಗೆ ಅವುಗಳ ಆಂಗ್ಲ ಭಾಷಾ ಸ್ವರೂಪವನ್ನೂ ಕೊಟ್ಟಿದ್ದಾರೆ. ಈ 'ದೇವಿ ಸ್ತೋತ್ರ'ದ ಸಂಪುಟದಲ್ಲಿ, ಕೇವಲ ತಂತ್ರ ಶಾಸ್ತ್ರಗಳ ವಿಷಯವಷ್ಟೇ ಅಲ್ಲದೇ ಭಕ್ತಿ ಪ್ರಧಾನವಾಗಿರುವ ಸ್ತೋತ್ರಗಳನ್ನೂ ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ **ಶ್ರೀ ಶಂಕರಾಚಾರ್ಯರರಿಂದ ವಿರಚಿತವಿರುವ ತತ್ತ್ವ ಶಾಸ್ತ್ರೀಯ ಮತ್ತು ಭಕ್ತಿ ಪ್ರಧಾನದ ಶ್ಲೋಕ**ಗಳಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಮತ್ತೆ ಕೆಲವು ಶ್ಲೋಕಗಳನ್ನು

ಮಹಾಭಾರತ ಮತ್ತು ಪುರಾಣಗಳಿಂದಲೂ ಆಯ್ಕೆ ಮಾಡಿಕೊಂಡಿದ್ದಾರೆ. ಪರಾಶಕ್ತಿಯ ಸ್ತ್ರೀ ಸ್ವರೂಪದ ಆದಿಶಕ್ತಿಯ ಮಹತ್ವವನ್ನು ಅದರಲ್ಲೂ ಆದಿಶಕ್ತಿಯು ಪ್ರಕೃತಿ ಸ್ವರೂಪದಲ್ಲಿ ಸ್ತ್ರೀ ಸ್ವರೂಪದಲ್ಲಿ ಹಲವಾರು ರೂಪಗಳಲ್ಲಿ ಇರುವದನ್ನು ವರ್ಣಿಸುತ್ತಿರುವ ಹಲವು ನಾಮ ರೂಪಗಳನ್ನು ಹೊಂದಿರುವ ವಿಷಯದ ಕುರಿತು ವಿವರಗಳನ್ನು ಒದಗಿಸಿದ್ದಾರೆ. ಇವಳೇ ಜಗನ್ಮಾತೆಯಾಗಿದ್ದಾಳೆ. ಇವಳ ಆರಾಧನೆ ಮತ್ತು ಅವುಗಳ ವೈವಿಧ್ಯಮಯ ಆಯಾಮದ ಸಮನ್ವಯತೆಯೇ ಹಿಂದೂ ಧರ್ಮದ ಮೂಲ ತಳಹದಿಯಾಗಿರುವದನ್ನು, ಹಾಗು ಅದರ ಮಹತ್ವವನ್ನು ಲೇಖಕರು ಸೂಕ್ಷ್ಮವಾಗಿ ರೂಪಿಸಿದ್ದಾರೆ.

ಇಲ್ಲಿ ಆಂಗ್ಲ ಭಾಷೆಗೆ ತರ್ಜುಮೆಗೊಂಡಿರುವ ಕಾರ್ಯವನ್ನು ಶ್ಲಾಘಿಸಲೇಬೇಕಾಗಿದೆ, ಅನಿವಾರ್ಯತೆಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಆಂಗ್ಲ ಭಾಷೆಗೆ ತರ್ಜುಮೆಗೊಳ್ಳದೇ ನೇರವಾಗಿ ಸಂಸ್ಕೃತದ ರೂಪದಲ್ಲಿಯೇ ಇರುವ ಕೆಲವೊಂದು ಶಬ್ದಗಳ ಹೊರತಾಗಿ, ಇವರ ಕೊಡುಗೆ ಅನುಪಮವಾಗಿದೆ. ಉಳಿದಂತೆ ಇರುವ ಸಂಸ್ಕೃತದ ವಿಷಯಗಳನ್ನು ವಿಶ್ವಾಸಪೂರ್ಣವಾಗಿಯೇ ಆಂಗ್ಲ ಭಾಷೆಯಲ್ಲಿ ವ್ಯವಸ್ಥಿತವಾಗಿ ರೂಪಿಸಲಾಗಿದೆ. ಅನುವಾದವೂ ಸಹಿತ ಸರಳವಾಗಿದ್ದು, ಸುಲಲಿತವಾಗಿದ್ದು ಜೊತೆಗೆ ಮೂಲ ವಿಷಯಕ್ಕೆ ಸೂಕ್ತ ಗೌರವವನ್ನು ಸಲ್ಲಿಸಿಯೇ ರೂಪಿತಗೊಂಡಿದೆ. ಸಂಸ್ಕೃತದ ಆ ಸಮೃದ್ಧ ಪರಮೋಚ್ಚ ಮತ್ತು ಲಯಬದ್ಧತೆಯಿಂದ ರಚಿತಗೊಂಡು, ವರ್ಣಮಯವಾಗಿರುವ ಶ್ಲೋಕಗಳನ್ನು ಅದೇ ಹಂತದ ಭವ್ಯ ಆಯಾಮದಲ್ಲಿ ಇಂಗ್ಲೀಷ ಭಾಷೆಗೆ ತರಲು ಸಾಧ್ಯವಿಲ್ಲ. ಆದರೂ ಅವಕಾಶವಿದ್ದಷ್ಟನ್ನೂ ಸಂಪೂರ್ಣವಾಗಿ ಸದುಪಯೋಗಪಡಿಸಿಕೊಂಡಿರುವ ಕೃತಿಯನ್ನು ಲೇಖಕರು ನೀಡಿದ್ದಾರೆ.

ಪ್ರತಿಯೊಂದು ಶ್ಲೋಕದ ಅನುವಾದದ ಜೊತೆಗೆ ಅದರ ಕುರಿತು ಹಲವಾರು ಟಿಪ್ಪಣಿಗಳು ಸಹಿತ ರೂಪಿತಗೊಂಡಿವೆ. ತಂತ್ರ ಶಾಸ್ತ್ರದ ಕುರಿತು ಹಿಂದೂ ಆಚರಣೆಯಲ್ಲಿ ಇರುವ ಸಾಧಕರ ಮತ್ತು ಇವರಿಗೆ ಮಾರ್ಗದರ್ಶನ ಮಾಡಿದ ಹಿರಿಯರ ಕೃತಿಗಳನ್ನು ಗೌರವಿಸುತ್ತಲೇ, ಮತ್ತು ಆ ಸಾಧಕರು, ಗ್ರಂಥಕಾರರ ತತ್ತ್ವಗಳನ್ನೂ ಗೌರವಿಸುತ್ತ ತಮ್ಮ ತಮ್ಮ ಗ್ರಂಥವನ್ನು ರೂಪಿಸಿದ್ದಾರೆ. ಅದನ್ನು ಸ್ಪಷ್ಟವಾಗಿಯೇ, “ಹಿಂದೂ ಗ್ರಂಥಕಾರರನ್ನು ನಾವು ಕಡ್ಡಾಯವಾಗಿ ಅಧ್ಯಯನ ಮಾಡಲೇಬೇಕಿದೆ. ಜೊತೆಯಲ್ಲಿ ಅವರೊಡನೆ ಮೌಖಿಕ ಸಂವಾದವನ್ನೂ

ಕೈಕೊಳ್ಳಬೇಕಿದೆ. ಏಕೆಂದರೆ ಭಾರತೀಯ ಶಾಸ್ತ್ರದ ಅಧ್ಯಯನದಲ್ಲಿ ಅವರು ತಮ್ಮದೇ ಆದ ಸಂಪ್ರದಾಯವನ್ನು ಸೂಕ್ಷ್ಮವಾಗಿ, ಪರಿಶುದ್ಧವಾಗಿಯೇ ಮುಂದುವೆಸಿಕೊಂಡು ಬಂದಿದ್ದಾರೆ. ಈ ರೀತಿಯಲ್ಲಿ ಸಾಗದಿದ್ದರೆ ಶಾಸ್ತ್ರಗಳು ಸುವ್ಯವಸ್ಥಿತವಾಗಿ ಬೆಳೆದು ಬಂದಿರುವ ಕುರಿತು ಏನನ್ನೂ ತಿಳಿದುಕೊಳ್ಳಲಾಗುವದಿಲ್ಲ. ಹಿಂದೂ ಪದ್ಧತಿಯಲ್ಲಿ ಆರಾಧನೆ ಎಂದರೆ ಏನು ಅದರ ಸ್ವರೂಪ ಯಾವುದು ಮತ್ತು ಅದರ ಪಥಗಳು ಎಷ್ಟು ಎನ್ನುವ ವಿವರಗಳು ಸಹಿತ ಗೊತ್ತಾಗುವದಿಲ್ಲ. ಇವುಗಳನ್ನು ಅರಿತುಕೊಳ್ಳದೇ ಸಾಗಿದಲ್ಲಿ ಬರೀ ಪ್ರಮಾದಗಳೇ ತುಂಬುತ್ತವೆ. ಈ ರೀತಿಯ ಮೌಖಿಕ ಸಂವಾದದ ಜೊತೆಗೆ 'ಮಹಾಭಾರತ'ದ ಬಗೆಗೆ ಭಾಷ್ಯ ಬರೆದಿರುವ **'ನೀಲಕಂಠ'**ರ ಟಿಪ್ಪಣಿಗಳನ್ನೂ (ಈ ಕೃತಿಯೂ ಇದೇ ಲೇಖಕರಿಂದ ಆಂಗ್ಲ ಭಾಷೆಗೆ ಅನುವಾದಗೊಂಡಿದೆ. ಇದನ್ನು ಲಂಡನ್ ನಗರದ ಲೂಝಾಕ್ ಮತ್ತು ಕಂಪನಿ ಪ್ರಕಾಶಿಸಿದೆ) ಜೊತೆಗೆ **ಚಕ್ರವರ್ತಿಯ 'ಗೋಪಾಲ', ನಾಗೋಜಿ ಭಟ್ಟನ 'ಚಂಡೀ'**ಯನ್ನು ಜೊತೆಗೆ **ನೀಲಕಂಠನ 'ದೇವಿ ಭಾಗವತ'**ವನ್ನು ಸಹಿತ ಅಧ್ಯಯನ ಮಾಡಿದ್ದೇನೆ" ಎಂದು ಸ್ಪಷ್ಟವಾಗಿ ಬರೆದಿದ್ದಾರೆ.

**ಸಾಧನಾ ಶಾಸ್ತ್ರ**ಗಳಲ್ಲಿಯೇ ಮಹತ್ತರ ಸ್ಥಾನವನ್ನು ಪಡೆದುಕೊಂಡಿರುವ ಈ **ತಂತ್ರ ಶಾಸ್ತ್ರ**ವನ್ನು ಅವುಗಳ ಮೂಲ ಗ್ರಂಥವನ್ನು ಅಧ್ಯಯನ ಮಾಡದೇ ಹಾಗೂ ತಾಂತ್ರಿಕ ಸಿದ್ಧಿಯ ಮಾರ್ಗದಲ್ಲಿ ಪರಿಣಿತರಾಗಿರುವ ಗುರುಗಳ ಮತ್ತು ಪಂಡಿತರ ಸಹಾಯ–ಸಹಕಾರವಿರದೇ ಏನನ್ನೂ ಅರ್ಥೈಸಿಕೊಳ್ಳಲು ಸಾಧ್ಯವಾಗುವದಿಲ್ಲ. ಏಕೆಂದರೆ ಇವರೇ ಈ ಸಂಪ್ರದಾಯಬದ್ಧವಾಗಿರುವ ಶಾಸ್ತ್ರಗಳ ಮೂಲ ರಕ್ಷಕರೂ ಆಗಿದ್ದಾರೆ. ಇವರಿಲ್ಲದೇ ಆ ಮೂಲ ಗ್ರಂಥದಲ್ಲಿ ಉಲ್ಲೇಖಿತವಾಗಿರುವ ವಿಷಯದ ಅಂತರಾರ್ಥ ಹೊಳೆಯುವದಿಲ್ಲ. ಪರಿಶುದ್ಧಾತ್ಮಕವಾಗಿರುವ ವಿಚಕ್ಷಣೆ ಅಥವಾ ವಿಶ್ಲೇಷಣಾ ಕ್ರಿಯೆಯು ನಿಸ್ಸಂದೇಹವಾಗಿಯೂ ಸೂಕ್ತವಾದ ದೃಷ್ಟಿಕೋನವೇ ಆಗಿರುತ್ತದೆ. ಇದನ್ನೇ ಎವಿಲಾನ್ನ ತನ್ನಲ್ಲಿಯೇ ತಾನು ಇದನ್ನು ಅಳವಡಿಸಿಕೊಂಡು, ಇಂಗ್ಲೀಷ ಭಾಷೆಯಲ್ಲಿ ಈ ವಿಷಯಗಳನ್ನು - ತಂತ್ರ ಶಾಸ್ತ್ರದ ಆರಾಧನಾ ವಿಧಾನಗಳು, ಅದರ ತತ್ತ್ವ ಶಾಸ್ತ್ರದ ವಿನ್ಯಾಸ ಮತ್ತು ಇಲ್ಲಿಯವರೆಗೂ ಶಾಕ್ತ ಸಂಪ್ರದಾಯದವರು ಅನುಷ್ಠಾನಿಸಿಕೊಂಡುಬರುತ್ತಿರುವ ವಿಧಾನಗಳು ಮತ್ತು ಭಾರತದ ಮಧ್ಯ ಯುಗದ ಅವಧಿಯಲ್ಲಿದ್ದ ಆಚರಣೆಗಳ ಜೊತೆಗೆ ಆಧುನಿಕ ಭಾರತದಲ್ಲಿ ಅದರ ಸ್ವರೂಪವನ್ನು ಲೇಖಕರು ಒದಗಿಸಿದ್ದಾರೆ. ಇಲ್ಲಿ ಪ್ರತಿಪಾದಿತಗೊಂಡಿರುವ ಇವರ ವಿಧಾನವು ಸುಶಿಕ್ಷಿತ–ಅಜ್ಞಾನವನ್ನು ಪ್ರತಿಪಾದಿಸುವ

ಅಸ್ಪಷ್ಟತೆಯಿಂದ ಹಾಗು ನಿರಂಕುಶಮತಿಯ ವಿದಗ್ಧತೆಯಿಂದ ತುಂಬಿದ ಪರಿಭಾವನೆಯಲ್ಲಿಯೇ ರೂಪಿತಗೊಂಡಿರುವ ಯುರೋಪ ಪಂಡಿತರ ಕೃತಿಗಳು, ಭಾರತೀಯ ವಿಷಯಗಳ ಕುರಿತಾಗಿ ಕೇವಲ ಕಲ್ಪನೆಗಳಿಂದ ಆಕರ್ಷಣೆಗೊಂಡಿರುವ, ನಿರಾಧಾರವಾಗಿರುವ ಮತ್ತು ಕ್ಷಣಭಂಗುರತೆಯಿಂದ ತುಂಬಿಕೊಂಡಿವೆ ಎಂದು ವಿವರಿಸುತ್ತಿವೆ. ಇದರ ಕುರಿತು ವಿಚಾರಿಸಿದರೆ, ಇದೇ ಅಂತಿಮ ಹಂತವೆಂದು ದೃಷ್ಟಿಕೋನವೇನೂ ಅಲ್ಲ. ಈಗಿನ ಅವಶ್ಯಕತೆ ಎಂದರೆ, ಭಾರತದ ಪ್ರಾಚೀನ ಗ್ರಂಥಗಳ ಸೂಕ್ತ ಮತ್ತು ಸೂಕ್ಷ್ಮ ವಿಶ್ಲೇಷಣೆಯೊಂದು ಮುಕ್ತವಾಗಿಯೇ ನಡೆಯಬೇಕಿದೆ. ಇದರ ಜೊತೆಗೆ ಭಾರತೀಯ ತತ್ತ್ವ ಶಾಸ್ತ್ರದ ಮತ್ತು ಅವುಗಳ ಆಯಾಮಗಳ/ವಿಭಾಗಗಳ ಕುರಿತು ಸಂಶೋಧನೆಗಳು ನಡೆಯಬೇಕಿದೆ. ಮತಗಳ ಕುರಿತಾಗಿಯೂ ಇಡೀ ವ್ಯವಸ್ಥೆಯಲ್ಲಿ ಭಾರತೀಯ ಚಿಂತನೆ ಮತ್ತು ಸಮರ್ಪಣಾ ಮನೋಭಾವದಲ್ಲಿ ನಡೆಯಬೇಕಿದೆ.

ಈ ಮೂಲಕ ಭಾರತದ ಪ್ರಾಚೀನ ಗ್ರಂಥಗಳ ಮಹತ್ವವನ್ನು, ಅವುಗಳ ಮೂಲ ಅಂತಃಸತ್ವವನ್ನು ಪುನಃ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇತ್ತೀಚಿನ ಸಂಶೋಧನೆಗಳ ಮೂಲಕ ಸಂಕ್ಷಿಪ್ತೀಕರಣಗೊಳಿಸಿ ಹುದುಗಿಸಿಡಲ್ಪಟ್ಟಿರುವದನ್ನು ಮತ್ತೆ ಮರುಸಂಶೋಧಿಸಿ ಸುಸ್ಪಷ್ಟಗೊಳ್ಳುವಂತೆ ಮಾಡಬೇಕಿದೆ. ಅದರಲ್ಲೂ ಯಾವುದು ಶಾಶ್ವತವಾಗಿ ಅಂದರೆ ನಶಿಸಿಹೋಗದ ಹಾಗೆ ಇರುವ ಶಾಶ್ವತ–ಸತ್ಯದ ವಿಷಯಗಳನ್ನು, ಬರಲಿರುವ ಪೀಳಿಗೆಗಳಿಗಾಗಿ, ಆಧ್ಯಾತ್ಮಿಕತೆಯ ಭವ್ಯ ಭವಿಷ್ಯಕ್ಕಾಗಿ, ಅವರ ಉಪಯುಕ್ತತೆಗಾಗಿ ಕೈಗೊಳ್ಳಬೇಕಾಗಿದೆ. ಈ ಮಧ್ಯದಲ್ಲಿಯೇ, ಅತ್ಯಂತ ಕಠಿಣತಮವಾಗಿರುವ ಹಾಗು ಸವಾಲಿನ ವಿಷಯವಾಗಿರುವದೇನೆಂದರೆ, ಇಷ್ಟೊಂದು ಅಗಾಧ ಪ್ರಮಾಣದ ವಿಷಯಗಳನ್ನು ಪ್ರಪ್ರಥಮ ಬಾರಿಗೆ ಜನ ಸಮುದಾಯದ ಮುಂದೆ ತರುವ ಕ್ರಿಯೆಯಾಗಿದ್ದು, ಅದನ್ನು ಸಾರ–ಸಂಗ್ರಹದ ಸ್ವರೂಪದಲ್ಲಿ ಯಾವುದೇ ಸಂಶಯಗಳು ಇರದ ಹಾಗೆ ಒಂದು ವಿಧಾನವನ್ನು ಅಳವಡಿಸಿಕೊಳ್ಳಬೇಕಾದುದು ಅತ್ಯಂತ ಅವಶ್ಯಕವಾಗಿರುವ ಸಂಗತಿಯಾಗಿದೆ. ಪ್ರಖ್ಯಾತಿ ಗಳಿಸಿರುವ ಭಾಷ್ಯಕಾರರು ಮತ್ತು ಟೀಕಾಕಾರರು ಸಹಿತ ಕೆಲವೊಮ್ಮೆ ತಪ್ಪಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಮಿ. ಎವಲಾನ್ ತನ್ನ ಗ್ರಂಥದಲ್ಲಿ ಇದನ್ನು ಸೂಕ್ತವಾಗಿಯೇ ಗುರುತಿಸಿದ್ದು, ಆ ಶ್ಲೋಕದ ಅರ್ಥವ್ಯಾಪ್ತಿಯಲ್ಲಿ **"ಎಲ್ಲ ಸ್ತ್ರೀಯರೂ –ಯಾವುದೇ ಅಪವಾದ ಇಲ್ಲದ ಹಾಗೆ – ಶಕ್ತಿಮಾತೆಯ ರೂಪವೇ ಆಗಿದ್ದಾರೆ"** ಎಂದಿರುವ ಅರ್ಥವನ್ನು ಗುರುತಿಸಿ ವಿವರಿಸುತ್ತಾರೆ.

ಇದನ್ನೇ ಮುಂದಿನ ಭಾಷ್ಯಕಾರರು/ಅಧ್ಯಯನ ಕೈಗೊಳ್ಳುವವರು ಅನುಸರಿಸಿಕೊಂಡೇ ಬಂದರು. ಅದರಲ್ಲೂ ನಮ್ಮ ಮನೋಸ್ಥಿತಿಯಲ್ಲಿಯೂ ಸಹಿತ ವಿಶ್ವಾಸವಿರಿಸಿಕೊಂಡೇ ಬಂದಿರುವದೇನೆಂದರೆ, **"ಸ್ತ್ರೀಯಾಃ ಸಮಸ್ತಾಃ ಸಕಲಾ ಜಗತ್ಸು" ಎಂದರೆ** ಎಲ್ಲ ಸ್ತ್ರೀಯರೂ **ಅರವತ್ತನಾಲ್ಕು ಕಲೆಗಳನ್ನೂ (ಚತುಷಷ್ಟೀ ಕಲೆಗಳು) ಹೊಂದಿರುತ್ತಾರೆ ಮತ್ತು ಅವರೆಲ್ಲರೂ ತಮ್ಮ ಪತಿಗೆ ವಿಧೇಯರಾಗಿಯೇ ಇರುತ್ತಾರೆ, ಜಗತ್ತಿನ ಬದುಕಿಗೆ ಮಾದರಿಯಾಗಿ ಆದರ್ಶವಾಗಿರುತ್ತಾರೆ. ಇತ್ಯಾದಿ ಇತ್ಯಾದಿ ಎಂದೇ ವಿಶ್ವಾಸದಲ್ಲಿ ನಮ್ಮ ಚಿಂತನಗಳನ್ನು ಮುಂದುವರೆಸಿದ್ದೇವೆ.** ಆದರೆ ಈ ಲೇಖಕರು ಮಾತ್ರ ಈ ಪಾರಂಪರಿಕವಾಗಿ ಬಂದಿರುವ ಈ ಅಸ್ಪಷ್ಟತೆಯನ್ನು ನೇರಾನೇರವಾಗಿ ತಿರಸ್ಕರಿಸುತ್ತಿದ್ದಾರೆ. ಇಲ್ಲಿ ಅವರು ರೂಪಿಸಿರುವ ಅರ್ಥವೆಂದರೆ. **"ಇಡೀ ಜಗತ್ತಿನಾದ್ಯಂತ ಯಾವುದೇ ಸ್ತ್ರೀಯನ್ನೂ ಬಿಡದ ಹಾಗೆ ಎಲ್ಲರೂ"** ಎಂದು ಅನುವಾದಿಸಿದ್ದಾರೆ.

ಈ ಅನುವಾದವನ್ನು ಕಂಡು ನಾವು ಆಶ್ಚರ್ಯಪಡಬೇಕಾಗಿದೆ, ಏಕೆಂದರೆ ಅಲ್ಲಿ ಮೂಲದಲ್ಲಿ ಇರುವ ಶ್ಲೋಕದ ಹೃದಯದ ಅರ್ಥವನ್ನು ಈ ರೀತಿಯಾಗಿ ಕತ್ತರಿಸಿ ರೂಪಿಸಿರುವಂತೆ ಕಾಣುತ್ತದೆ. ಆ ಮೂಲ ಶ್ಲೋಕವು ಈ ರೀತಿಯ ಭಿನ್ನಾರ್ಥವನ್ನು ಕೊಡುವದಿಲ್ಲ. ಅಲ್ಲಿರುವ ಮೂಲ ಶ್ಲೋಕವು **"ವಿದ್ಯಾಃ ಸಮಸ್ತಾಸ್ತವದೇವಿಭೇದಾಃ/ ಸ್ತ್ರೀಯಃ ಸಮಸ್ತಾಃ ಸಕಲಾ ಜಗತ್ಸು"** ಎಂದಿದೆ.

ಇಲ್ಲಿ **"ಭೇದಾ ಮತ್ತು ಸಕಲಾ"** ಎನ್ನುವ ಶಬ್ದಗಳ ಮಧ್ಯೆ ಇರುವ ವ್ಯತ್ಯಾಸವು ಮೇಲ್ನೋಟಕ್ಕೇ ಕಂಡುಬರುತ್ತದೆ. ಈ ಮೂಲ ಸ್ವರೂಪದ ಶ್ಲೋಕವು ಪರಿಪೂರ್ಣವಾಗಿದ್ದು, ವಿಜ್ಞಾನದ ಸರ್ವ ಹಂತಗಳನ್ನೂ ವಿವರಿಸುತ್ತ, **"ಓ ಆದಿಶಕ್ತಿಯಾಗಿರುವ ದೇವಿಯೇ ನೀನೇ ಅಸ್ತಿತ್ವದಲ್ಲಿರುವ ಎಲ್ಲ ಸ್ವರೂಪಗಳೂ ನಿನ್ನವೇ ಆಗಿವೆ. ಇಡೀ ಲೋಕದಲ್ಲಿರುವ ಎಲ್ಲ ಸ್ತ್ರೀ ಸ್ವರೂಪಗಳೂ ನಿನ್ನವೇ ಆಗಿವೆ."** ಹೀಗಾಗಿ ಜಗತ್ತಿನಾದ್ಯಂತ ಅಸ್ತಿತ್ವದಲ್ಲಿರುವ **ಪ್ರಕೃತಿ (ಸ್ತ್ರೀ ರೂಪದಲ್ಲಿ) ತತ್ತ್ವವೇ** ತುಂಬಿಕೊಂಡಿರುವದು ಗೋಚರಿಸುತ್ತದೆ.

(ಸಶೇಷ)


# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 11ನೇ ಜೂನ್ 2023ರ ಭಾನುವಾರ ಶ್ರೀ ಅರವಿಂದರ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 8.30 ರಿಂದ 8.50 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ತತ್ಸಬಂಧ ಬೆಳಗ್ಗೆ 9.00 ರಿಂದ ಮಧ್ಯಾಹ್ನ 1.00 ಗಂಟೆಯವರಗೆ **"**All Life is Yoga**"** ಎಂಬ ವಿಷಯವಾಗಿ ಡಾ॥ ಅಲೋಕ್ ಪಾಂಡೆ (ಶ್ರೀ ಅರವಿಂದೋ ಆಶ್ರಮ, ಪುದುಚೇರಿ) ಇವರು ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

**"**Physical, Mental and Vital Flowers - The Mother**"** ವಿಷಯ ಕುರಿತು ದಿನಾಂಕ 10ನೇ ಜೂನ್ 2023 ರಿಂದ 11ನೇ ಆಗಸ್ಟ್ 2023 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.



ಫೋಟೊ: ಇಮೇಜಿಂಗ್ ಸಾವಿತ್ರಿ

ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ

**– ಪುಟ್ಟು ಕುಲಕರ್ಣಿ**
**(ಪುಟ 69)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.